ಕಾಳಿದಾಸ

(ಒಂದು ನಾಟಕ)

ಶ್ರೀನಿವಾಸ

ಜೀವನ ಕಾರ್ಯಾಲಯ
ಬೆಂಗಳೂರು

To Sri V. Sitaramiah
with affectionate regards
Masti
Blore
20.8.78

ಕಾಳಿದಾಸ

(ಒಂದು ನಾಟಕ)

ಶ್ರೀನಿವಾಸ

ಜೀವನ ಕಾರ್ಯಾಲಯ

ಬೆಂಗಳೂರು

"Kalidasa" A play in Kannada by "Srinivasa", (pen name of Masti Venkatesa Iyengar), published by the Author, Jeevana Karyalaya, Bangalore 560019.

Crown 8vo. Pages xv+148.

ಮೊದಲನೆಯ ಮುದ್ರಣ : ೧,೦೦೦ ಪ್ರತಿಗಳು ೧೯೭೮.

ಬೆಲೆ : ಆರೂವರೆ ರೂಪಾಯಿ.

ಮುದ್ರಣ :
ಸುಬೋಧ ಮುದ್ರಣಾಲಯ
ಬೆಂಗಳೂರು ೧೮

ಮುನ್ನುಡಿ

ನನ್ನ "ಭಾವ", "ಶ್ರೀರಾಮ ಪಟ್ಟಾಭಿಷೇಕ", "ಶೇಷಮ್ಮ", ಶ್ರೀಮದ್ಭಗವದ್ಗೀತೆಯನ್ನು ಕುರಿತ ಇಂಗ್ಲಿಷ್ ಪ್ರಬಂಧ, ಈ ಪುಸ್ತಕಗಳಂತೆ ಮಹಾಕವಿ ಕಾಳಿದಾಸನನ್ನು ಕುರಿತ ಈ ನಾಟಕವೂ ಮುವ್ವತ್ತು ವರ್ಷಕ್ಕೂ ಹಿಂದೆ ಆರಂಭಿಸಿ ಅಥವಾ ಉದ್ದೇಶಿಸಿ ಇದೇ ಈಗ ಮುಕ್ತಾಯಕ್ಕೆ ತಂದಿರುವ ಒಂದು ಕೃತಿ. ಆರಂಭಿಸಿದಾಗ ಇದರಲ್ಲಿ ಬರೆದದ್ದು ಒಂದು ಸ್ಥಾನ ಮಾತ್ರ. ಅದು ಈ ನಾಟಕದಲ್ಲಿ ಅಂಕ ಐದು ಸ್ಥಾನ ೧ ಆಗಿದೆ. ಭಗವದ್ಗೀತೆಯನ್ನು ಕುರಿತ ಇಂಗ್ಲಿಷ್ ಪ್ರಬಂಧದ ಅಚ್ಚಿನ ಕೆಲಸ ಎರಡು ತಿಂಗಳ ಹಿಂದೆ ಮುಗಿದಾಗ ನಾನು ಈ ಹಳೆಯ ಬರಹವನ್ನು ಮತ್ತೆ ಎತ್ತಿಕೊಂಡೆನು. ಬರೆದು ಸಿದ್ಧವಾಗಿದ್ದದ್ದು ಪೂರ್ತಿ ಒಂದು ಸ್ಥಾನ ಕೂಡ ಅಲ್ಲವಲ್ಲ. ಕಾಲ ಕಳೆದಂತೆ ಕೃತಿಯ ವಸ್ತುವನ್ನು ಒಂದು ನಾಟಕವಾಗಿ ಮುಂದುವರಿಸುವುದಕ್ಕಿಂತ ಒಂದು ಕಥೆಯಾಗಿ ಬರೆಯುವುದು ಚೆನ್ನವಾದೀತೇನೋ ಎಂದು ಎನ್ನಿಸಿತ್ತು. ನಾಟಕದ ಮೊದಲ ತುಣುಕನ್ನು ನೋಡಿ ನನ್ನ ಅಳಿಯದಿರು ಚಿರಂಜೀವಿ ಶ್ರೀ ಶೇಷಾದ್ರಿ ಅವರು, "ಈ ತುಣುಕು ಓದುವುದಕ್ಕೆ ಚೆನ್ನಾಗಿದೆ. ನಾಟಕವೇ ಏಕೆ ಮುಂದರಿಯ ಬಾರದು?" ಎಂದರು. ಇದೇ ಸರಿಯೋ ಎಂದು ಯೋಚಿಸಿ ನಾನು ನನ್ನ ಮನಸ್ಸಿನಲ್ಲಿ ರೂಪುಗೊಂಡು ಬಂದಿದ್ದ ವಿಷಯವನ್ನು ನಾಟಕವಾಗಿ ಬರೆಯಲು ತೊಡಗಿದೆನು. ಅದು ಸರಿ ಆಯಿತು. ನಾಟಕ ಎರಡು ವಾರದಲ್ಲಿ ಪೂರ್ಣವಾಯಿತು. ಈಚೆಗೆ ಅದರಲ್ಲಿ ಅಲ್ಲಿ ಇಲ್ಲಿ ಸಂಗತಿ ವಿಶದವಾಗುವಂತೆ ನಾಲ್ಕು ಆರು ವಾಕ್ಯವನ್ನು ಸೇರಿಸಿ ನಾಟಕವನ್ನು ಮುಕ್ತಾಯಕ್ಕೆ ತಂದಿದ್ದೇನೆ.

ನಾಟಕಗಳ ವಿಷಯ ಜನರಿಗೆ ತಿಳಿದ ಒಂದು ಇತಿವೃತ್ತ ಆಗಿರಬೇಕು ಎನ್ನುವುದು ನಮ್ಮ ಪೂರ್ವಿಕರ ತಿಳುವಳಿಕೆ. ಒಟ್ಟಿನಲ್ಲಿ ಇದು ಸರಿ. ಓದುವವರು ಅಥವಾ ನೋಡುವವರು ತಮಗೆ ತಿಳಿಯದಿದ್ದ ಹೊಸ ಒಂದು ಕಥೆಯನ್ನು ಮೆಲ್ಲಮೆಲ್ಲನೆ ತಿಳಿದುಕೊಳ್ಳುತ್ತ ನೋಡುವುದು ಕೇಳುವುದು ಒಂದು ರೀತಿಯಲ್ಲಿ ಶ್ರಮ. ಈ ನಾಟಕದ ಇತಿವೃತ್ತ ಜನಕ್ಕೆ ತಿಳಿದದ್ದಲ್ಲ. ಆದ್ದರಿಂದ ಅದು ತಿಳಿಯುವಂತೆ ಮಾಡುವುದು ಅವಶ್ಯಕ ಎನ್ನಿಸಿ ನಾಟಕದ

ಮೊದಲಲ್ಲಿ ಸೂತ್ರಧಾರ ಹೇಳುವುದಕ್ಕೆಂದು ಒಂದು ಪ್ರಸ್ತಾವನೆಯನ್ನು ಸೇರಿಸಿದೆ.

ನಾಟಕದ ನಾಯಕ ಕಾಳಿದಾಸಮಹಾಕವಿಯನ್ನು ಕುರಿತ ದಂ ಕಥೆಗಳು, ಇತಿಹಾಸ ವಿವರಗಳು, ಅವನ ಕೃತಿಗಳಲ್ಲಿ ದೊರೆಯುವ ಅವ ಅಭಿರುಚಿ ಅನುಭವಗಳ ಸೂಚನೆಗಳು ಇವುಗಳನ್ನು ಆಧಾರವಾಗಿರಿಸಿಕೊಂಡ ಕವಿಯನ್ನು ಕುರಿತ ಒಂದು ಚರಿತೆಯನ್ನು ನಿರ್ಮಿಸಿಕೊಂಡು ಅದನ್ನು ನಾಟ ವಾಗಿ ರಚಿಸಿದೆ ಎಂದು ಪ್ರಸ್ತಾವನೆಯಲ್ಲಿ ನಿವೇದಿಸಿದೆ. ದಂತಕಥೆಗಳ ಯಾವವು, ಇತಿಹಾಸ ವಿವರಗಳು ಯಾವವು, ಎಂದು ತಿಳಿಯಲು ನಾಟ ವನ್ನು ಓದುವವರು ಬಯಸುವುದು ಸಹಜ. ಆದ್ದರಿಂದ ಅವನ್ನು ಈ ಮುಂ ಬರೆದಿದೆ.

ಕಾಳಿದಾಸ ನನಗೆ ಹಳ್ಳಿಯ ಶಾಲೆಯಲ್ಲಿ ಓದುತ್ತಿದ್ದ ಎಳೆಯ ದಿನಗಳ ಪರಿಚಯಕ್ಕೆ ಬಂದ ಮಹಾಕವಿಯೆಂದು ನಾನು ನನ್ನ "ಭಾವ" ಪುಸ್ತಕದಲ್ಲಿ "ಸಾಹಿತ್ಯ ಪ್ರೇರಣೆ" ಪುಸ್ತಕದಲ್ಲಿ ಅರಿಕೆ ಮಾಡಿದ್ದೇನೆ. "ಸಾಹಿತ ಪ್ರೇರಣೆ"ಯಲ್ಲಿ ಇವನನ್ನು ಕುರಿತು ನಾನು ಕೇಳಿದ ಕತೆಗಳನ್ನು ಸಂಗ್ರಹಿ ಕೊಟ್ಟಿದ್ದೇನೆ. ಆ ಸಂಗ್ರಹ ಬಹುಮಟ್ಟಿಗೆ ಹೀಗಿದೆ.

ಕಾಳಿದಾಸ ಕುರುಬರ ಕುಲದ ಹುಡುಗ. ಅವನು ಅಕ್ಷರ ಕಲಿತವನಲ್ಲ ಅವನ ಗ್ರಾಮವಿದ್ದ ರಾಜ್ಯದ ರಾಜಕುಮಾರಿ ಬಹು ಜಾಣೆಯಾಗಿದ್ದಳು ಎಂಥೆಂಥ ಜಾಣರನ್ನು ಕರೆದುತಂದರೂ ಅವಳು ಅವರನ್ನು ಮದುವೆಯಾಗಲ ಒಪ್ಪಲಿಲ್ಲ. ಅವರನ್ನು ಕರೆದು ತಂದ ಮಂತ್ರಿಯನ್ನು ಧಿಕ್ಕರಿಸಿ ಅವನಿಗೆ ಕೆ ಮಾತನ್ನು ಹೇಳಿದಳು. ಮಂತ್ರಿ ಇವಳಿಗೆ ಶಿಕ್ಷೆಮಾಡಬೇಕೆಂದು ನಿಶ್ಚಯಿಸಿ ಅಕ್ಷರಜ್ಞಾನವಿಲ್ಲದ ಈ ಕುರುಬ ಹುಡುಗನನ್ನು ಹುಡುಕಿ "ನಿನಗೆ ಮದು ಮಾಡಿಸುತ್ತೇನೆ: ಒಂದುಕಡೆಗೆ ಕರೆದುಕೊಂಡು ಹೋಗುತ್ತೇನೆ, ಅಲ್ಲಿ ನೀನ ಯಾವ ಮಾತಿಗೂ ಉತ್ತರ ಹೇಳಬೇಡ, ಸುಮ್ಮನಿದ್ದುಬಿಡು" ಎಂದು ಹೇ ಕೊಟ್ಟು, ಅವನಿಗೆ ಒಬ್ಬ ರಾಜಕುಮಾರನ ವೇಷ ಹಾಕಿ, ಅವನನ ಅರಮನೆಗೆ ಕರೆದುಕೊಂಡು ಹೋಗಿ ತೋರಿಸಿ, "ಇವನು ತುಂಬ ಜಾಣ ಆದರೆ ಮೌನವ್ರತ ಹಿಡಿದಿದ್ದಾನೆ" ಎಂದು ಹೇಳಿ, ರಾಜಕುಮಾರಿ ಅವನನ ಮದುವೆಯಾಗಲು ಒಪ್ಪುವಂತೆ ಮಾಡಿದನು. ಮದುವೆ ಆಯಿತು. ರಾ

ಹಾಸಿಗೆಯಲ್ಲಿ ಮಲಗಿದೊಡನೆಯೇ ಹುಡುಗ ನಿದ್ದೆಹೋಗಿ ಬಿಟ್ಟನು. ರಾಜಕುಮಾರಿ ಬಂದು ಅವನನ್ನು ಎಬ್ಬಿಸಿದಳು. ಪಕ್ಕದಲ್ಲಿ ಕುಳಿತು ಅವನ ಬಾಯಿಗೆ ಇಷ್ಟು ಅಡಕೆ ಪುಡಿಯನ್ನು ಹಾಕಿದಳು. ಹುಡುಗ "ಕುರಿಪಿಚಿಕೆ ಬಾಯಿಗೆ ಹಾಕಿದೆಯಾ" ಎಂದು ಅದನ್ನು ಉಗಿದುಬಿಟ್ಟನು. ರಾಜಕುಮಾರಿಗೆ ಆಗ ಇವನು ಕುರುಬರ ಹುಡುಗ ಎನ್ನುವುದು ತಿಳಿಯಿತು. ಅವಳು, "ನೀನು ಯಾರು, ಏನು" ಎಂದು ವಿಚಾರಿಸಿದಳು. ಇವನು ಸಂಗತಿಯನ್ನೆಲ್ಲಾ ಹೇಳಿದನು. ಅವಳು "ಮಂತ್ರಿಯ ಮೋಸಕ್ಕೆ ಏತಕ್ಕೆ ಒಪ್ಪಿಗೆ ಕೊಟ್ಟೆ ?" ಎಂದು ಇವನನ್ನು ಖಂಡಿಸಿ ಮಾತನಾಡಿ, "ಊರ ಮುಂದಲ ಕಾಳಿಕಾದೇವಿಯನ್ನು ಬೇಡಿ ವರ ಪಡೆ ಹೋಗು" ಎಂದು ಕಳುಹಿಸಿದಳು. ಇವನು ದೇವಿಯ ಸನ್ನಿಧಿಗೆ ಹೋದನು. ಭಕ್ತಿಯಿಂದ ವರ ಬೇಡಿದನು. ದೇವಿ ಪ್ರತ್ಯಕ್ಷಳಾದಳು, ಇವನ ನಾಲಿಗೆಯ ಮೇಲೆ ಬೀಜಾಕ್ಷರವನ್ನು ಬರೆದಳು. ತಕ್ಷಣ ಇವನಿಗೆ ಭಾಷೆಯಲ್ಲಿ ಪಾಂಡಿತ್ಯ ಬಂದಿತು. ಕಾವ್ಯ ಬರೆಯುವ ಪ್ರೇರಣೆ ಹುಟ್ಟಿತು. ದೇವಿಯನ್ನು ಸ್ತೋತ್ರಮಾಡಿ ಹೊರಗೆ ಬಂದು ಇವನು ಅರಮನೆಗೆ ಹಿಂತಿರುಗದೆ ದೇಶಯಾತ್ರೆ ಹೊರಟುಬಿಟ್ಟನು. ಪತಿ ಹಿಂತಿರುಗದೆ ಹೋಗಿ ಅವನು ಏನಾದನೋ ಎನ್ನುವುದು ತಿಳಿಯದೆ, ರಾಜಕುಮಾರಿ ಅಗ್ನಿಪ್ರವೇಶಮಾಡಿ ಪ್ರಾಣಬಿಟ್ಟಳು.

ಕವಿ ಭೋಜರಾಜನ ಧಾರಾನಗರವನ್ನು ಸೇರಿದನು. ಕಾಳಿಕಾದೇವಿಯ ವರಪ್ರಸಾದದಿಂದ ಕವಿಯಾದ ಕಾಳಿದಾಸ ಶ್ರೇಷ್ಠವಾದ ತನ್ನ ಕವಿತ್ವದಿಂದ ಗುಣಪಕ್ಷಪಾತಿಯಾದ ಭೋಜರಾಜನ ಅನುಗ್ರಹವನ್ನು ಪಡೆದನು. ತನ್ನಷ್ಟು ಶಕ್ತರಲ್ಲದ ಕವಿಗಳ ಮಧ್ಯೆ ಬಾಳಿದನು. ಅವರ ಈರ್ಷೆಗೆ ಗುರಿಯಾದನು. ಅಗ್ನಿಪ್ರವೇಶಮಾಡಿದ ರಾಜಕುಮಾರಿ ರಾಜಧಾನಿಯಲ್ಲಿ ಒಬ್ಬ ವೇಶ್ಯೆಯ ಮಗಳಾಗಿ ಹುಟ್ಟಿದಳು. ಕಾಳಿದಾಸ ಅವಳೊಂದಿಗೆ ಸ್ನೇಹ ಬೆಳಸಿದನು. ಜೊತೆಯ ಜನ ಇವನನ್ನು ನಿಂದಿಸಿದರು. ಹಾಸ್ಯ ಮಾಡಿದರು. ಯಾರೋ ದೊರೆಗೆ ಚಾಡಿ ಹೇಳಿದರು. ದೊರೆ ಚಾಡಿಯನ್ನು ನಂಬಿ ಕವಿಯನ್ನು ಆಕ್ಷೇಪಿಸಿದನು. ಕಾಳಿದಾಸ ನಗರವನ್ನು ಬಿಟ್ಟು ಎತ್ತಲೋ ಹೊರಟು ಹೋದನು. ದೊರೆ ಪಶ್ಚಾತ್ತಾಪಪಟ್ಟು ಇವನನ್ನು ಹುಡುಕಿಸಿದನು. ಇವನು ಸಿಕ್ಕಲಿಲ್ಲ. ಹಲವು ವರ್ಷದ ನಂತರ ಕವಿ ತಾನೇ ರಾಜಧಾನಿಗೆ ಬಂದನು.

ದೊರೆ ಇವನನ್ನು ಒಪ್ಪಿಕೊಂಡು ಮರ್ಯಾದೆಯಿಂದ ಕಂಡನು; ಅವನನ್ನು ಆಸ್ಥಾನದ ಮುಖ್ಯ ಕವಿಯಾಗಿ ನೇಮಿಸಿ ಗೌರವದಿಂದ ಬಾಳಿಸಿದನು.

ಕವಿ ಮೀನು ತಿನ್ನುತಿದ್ದನು. ಒಂದುದಿನ ಇವನು ಒಂದಷ್ಟು ಮೀನನ್ನು ಕೊಂಡು ಮನೆಗೆ ತೆಗೆದುಕೊಂಡು ಹೋಗುತ್ತಿದ್ದಾಗ ಹೊಟ್ಟೆ ಉರಿಯ ಜನ ಎದುರಿಗೆ ಬಂದು, "ಇದೇನಯ್ಯ, ಏನನ್ನು ಹೊತ್ತುಕೊಂಡು ಹೋಗುತ್ತಿದ್ದೀಯೆ? ಮೀನಿನ ವಾಸನೆ ಬರುತ್ತದಲ್ಲ?" ಎಂದರು. ಕವಿ "ಇದು ಶ್ರೇಷ್ಠ ಜಾತಿಯ ಒಂದು ಹೂ, ಮೀನಿನ ವಾಸನೆ ಏತರದು? ಒಳ್ಳೆ ಕಂಪು," ಎಂದನು. ಅವರು "ಹೌದೆ! ಕಟ್ಟನ್ನು ಬಿಚ್ಚು ನೋಡೋಣ" ಎಂದರು. ಇವನು ಕಟ್ಟನ್ನು ಬಿಚ್ಚಿದನು. ಅದರಲ್ಲಿ ಮೀನಲ್ಲ, ಹೂ ಇದ್ದಿತು; ಮೀನಿನ ವಾಸನೆ ಅಲ್ಲ, ಗಂ ಎಂದು ಸೌರಭ ಹೊಮ್ಮಿತು.

ಕಾವ್ಯ ಎಂದರೆ ಏನೆಂದು ತಿಳುವಳಿಕೆ ಇಲ್ಲದ ಒಬ್ಬ ಮನುಷ್ಯ ಅನೇಕ ಸಾವಿರ ಶ್ಲೋಕಗಳ ಒಂದು ಕಂತೆಯನ್ನು ಬರೆದು ರಾಜಧಾನಿಗೆ ಬಂದನು. ರಸವಿಲ್ಲದ ಒಣಮಾತಿಗೆ ದೊರೆಯ ಮನ್ನಣೆಯನ್ನು ಪಡೆಯಬೇಕೆಂದು ಅವನ ಆಸೆ. ಕಾಳಿದಾಸ ಎಳ್ಳಿನ ಗಿಡದ ಒಣ ಕಡ್ಡಿಯಷ್ಟನ್ನು ಸೇರಿಸಿ ಎಮ್ಮೆ ಕಟ್ಟುವ ಹಗ್ಗದಿಂದ ಅದನ್ನು ಕಟ್ಟಿ, ಕಟ್ಟನ್ನು ಕಂಕುಳಲಿಟ್ಟುಕೊಂಡು, ದೊರೆಯ ಸಭೆಗೆ ಬಂದನು. ದೊರೆ ಇದು ಏನು ಎಂದು ಕೇಳಿದನು. ಕಾಳಿದಾಸ "ಆ ಕಾವ್ಯದಂತೆ ಇದು ಒಂದು ಕಾವ್ಯ" ಎಂದನು. "ಇದರ ಹೆಸರೇನು?" "ತಿಲಕಾಷ್ಠ ಮಹಿಷ ಬಂಧನ". ಸಭೆಯಲ್ಲಿ ಕೆಲವರು ನಕ್ಕರು; ಕೆಲವರು ಮುಖ ಸಿಣುಕಿದರು.

ಒಮ್ಮೆ ಕಾಳಿದಾಸ, ದಂಡಿ, ಇವರಲ್ಲಿ ಯಾರ ಕವಿತೆ ಶ್ರೇಷ್ಠ ಎಂದು ಪ್ರಶ್ನೆ ಬಂದಿತು. ಇದನ್ನು ನಿರ್ಣಯಿಸುವುದಕ್ಕೆ ಯಾರಿಗೂ ಧೈರ್ಯವಿಲ್ಲ. ದಂಡಿ ಒಂದು ದಿನ ಇವರಿಬ್ಬರೇ ಇದ್ದಾಗ, "ನಾನು ಹೆಚ್ಚೋ, ನೀನು ಹೆಚ್ಚೋ? ಸರಸ್ವತೀದೇವಿಯನ್ನು ಕೇಳೋಣ" ಎಂದನು. ಕಾಳಿದಾಸ "ಆಗಲಿ" ಎಂದನು. ಇಬ್ಬರೂ ಬೇಡಿದರು. ದೇವಿ ಪ್ರತ್ಯಕ್ಷವಾದಳು. ದಂಡಿ ಒಂದು ಶ್ಲೋಕವನ್ನು ಹೇಳಿದನು. ಕಾಳಿದಾಸ ಒಂದು ಶ್ಲೋಕವನ್ನು ಹೇಳಿದನು. ಶ್ಲೋಕ ಯಾವುವು ಈಗ ನಮಗೆ ಗೊತ್ತಿಲ್ಲ. ಶ್ಲೋಕಗಳನ್ನು ಹೇಳಿದ ಮೇಲೆ ಕವಿಗಳು ತೀರ್ಪನ್ನು ಬೇಡಿ ಕೈಮುಗಿದು ನಿಂತರು. ದೇ

" ಕವಿರ್ದಂಡೀ ಕವಿರ್ದಂಡೀ ಕವಿರ್ದಂಡೀ ನ ಸಂಶಯಃ " ಎಂದಳು. ದಂಡಿಗೆ ತುಂಬ ಸಂತೋಷ ಆಯಿತು. ಅವನು ಹೆಮ್ಮೆಯಿಂದ ಕಾಳಿದಾಸನ ಕಡೆಗೆ ನೋಡಿದನು. ಕಾಳಿದಾಸನಿಗೆ ಅಸಾಧ್ಯ ಕೋಪ ಬಂದಿತು. ಅವನು " ಹೇ ರಂಡೇ ಅಹಂ ಕೋವಾ " ಎಂದು ಕೇಳಿದನು. ದೇವಿ " ತ್ವಮೇವಾಹಂ ತ್ವಮೇವಾಹಂ ತ್ವಮೇವಾಹಂ ನ ಸಂಶಯಃ " ಎಂದಳು ; ಮರೆಯಾದಳು. ಕಾಳಿದಾಸ ಎಲ್ಲ ಕವಿಗಳಿಗಿಂತ ಹೆಚ್ಚು ಎಂದು ಕವಿಸಮುದಾಯ ಒಪ್ಪಿತು.

ಕಾವ್ಯ ಅಕ್ಷರದಲ್ಲಿ, ಶಬ್ದದಲ್ಲಿ, ಗಣದಲ್ಲಿ, ದೋಷವಿಲ್ಲದೆ ಇರಬೇಕು. ಇದು ಯಾವುದರಲ್ಲಿ ದೋಷ ಇದ್ದರೂ ಅದನ್ನು ರಚಿಸಿದ ಕವಿಗೆ ಕೆಡಕು ; ಅಂಥ ಕವಿತೆಯಿಂದ ಲೋಕಕ್ಕೂ ಕೆಡಕು. ದೋಷ ಇಲ್ಲದೆ ಪೂರ್ಣವಾಗಿ ಶುದ್ಧ ಆದ ಕವಿತೆಯನ್ನು ಶ್ರೇಷ್ಠಕವಿ ನಿರ್ಮಿಸಿದಾಗ ಕವಿತೆಯ ಭಾವ ತಕ್ಷಣ ಸಿದ್ಧಿಸುತ್ತದೆ. ಇದು ಕವಿಕುಲದ ನಂಬಿಕೆ. ಗೋಷ್ಠಿಯಲ್ಲಿ ಒಂದುಸಲ ಇದರ ಮಾತು ಬಂದಾಗ, ಬಲ್ಲವರು ಇದು ಸತ್ಯ ಎಂದು ಹೇಳಿದರು. ಭೋಜನಿಗೆ ಇದನ್ನು ಪರೀಕ್ಷಿಸಬೇಕೆಂದು ತೋರಿತು. ಕೆಲವು ದಿನದ ನಂತರ ಅವನು ಕಾಳಿದಾಸನಿಗೆ " ದೊರೆ ತೀರಿಕೊಂಡನು," ಎಂದು ಒಬ್ಬ ಮನುಷ್ಯನ ಮೂಲಕ ಹೇಳಿಕಳುಹಿಸಿದನು. ಸುದ್ದಿ ಮುಟ್ಟಿದಾಗ ಕಾಳಿದಾಸ ಒಂದು ಶ್ಲೋಕವನ್ನು ರಚಿಸಿ ಹೇಳಿದನು. " ಅದ್ಯ ಧಾರಾ ನಿರಾಧಾರಾ ನಿರಾಲಂಬಾ ಸರಸ್ವತೀ ಪಂಡಿತಾಃ ಖಂಡಿತಾಸ್ಸರ್ವೇ ಭೋಜರಾಜೇ ದಿವಂಗತೇ " ಇದು ಶ್ಲೋಕ. ಇವನು ಈ ಶ್ಲೋಕವನ್ನು ಹೇಳಿದ ವೇಳೆಗೆ ಸರಿಯಾಗಿ ಅಲ್ಲಿ ಅರಮನೆಯಲ್ಲಿ ದೊರೆ ಸತ್ತುಬಿದ್ದನು. ಮತ್ತೊಬ್ಬ ಮನುಷ್ಯ ಓಡಿ ಬಂದು ಕಾಳಿದಾಸನಿಗೆ ಇದನ್ನು ತಿಳಿಸಿದನು. " ಇದೇನು ಈಗ ಹೇಳುತ್ತಿದೀಯೆ ? ಮೊದಲು ಬಂದ ಸುದ್ದಿಯ ಮಾತು ಹೇಗೆ ?" ಎಂದು ಕಾಳಿದಾಸ ಕೇಳಿದನು. ಸುದ್ದಿ ತಂದವನು, ಅದು ಇವನ ಕಾವ್ಯದ ಯೋಗ್ಯತೆಯನ್ನು ಪರೀಕ್ಷಿಸಲು ಹೇಳಿದ ಸುಳ್ಳು, ಎಂದು ತಿಳಿಸಿದನು. ಕಾಳಿದಾಸ, ದೊರೆಗಳು ಹೀಗೆ ವಿಷಪರೀಕ್ಷೆ ಮಾಡಬಹುದೇ ಎಂದು ವಿಷಾದಿಸಿ ಆ ಶ್ಲೋಕವನ್ನೇ ಸ್ವಲ್ಪ ಬೇರೆ ಮಾಡಿ ಮತ್ತೆ ಹೇಳಿದನು : " ಅದ್ಯಧಾರಾ ಸದಾಧಾರಾ ಸದಾನಂದಾ ಸರಸ್ವತೀ ಪಂಡಿತಾ ಮಂಡಿತಾಸ್ಸರ್ವೇ ಭೋಜರಾಜೇ ಭುವಂಗತೇ." . ಇವನು ಇಲ್ಲಿ ಈ ಶ್ಲೋಕವನ್ನು ಉಚ್ಚರಿಸಿ ಮುಗಿಸುವ ವೇಳೆಗೆ ಅಲ್ಲಿ ದೊರೆಗೆ ಮರಳಿ ಪ್ರಾಣ

ಬಂದಿತು. ಅವನು ಎದ್ದು ಕುಳಿತನು. ಆಗ ಒಟ್ಟು ರಾಷ್ಟ್ರಕ್ಕೇ ತಿಳಿಯಿತ ಕಾಳಿದಾಸನ ವಾಣಿ ಪ್ರಸಾದವಾಣಿ, ಅವನ ನಾಲಗೆ ಏನು ನುಡಿದರೆ ಅದ ಫಲಿಸುತ್ತದೆ, ಎನ್ನುವುದು.

ಕಾಳಿದಾಸನನ್ನು ಕುರಿತು ನಾನು ಕೇಳಿರುವ ಇನ್ನೊಂದು ಕಥೆಯನ ಹೇಳಲು ಸ್ವಲ್ಪ ಸಂಕೋಚಪಟ್ಟು ನಾನು ಸಾಹಿತ್ಯ ಪ್ರೇರಣೆ ಪುಸ್ತಕದ ಬರೆಯಲಿಲ್ಲ. ಸಭೆಗಳಲ್ಲಿ ಕೆಲವು ವೇಳೆ ಅವರ ಮೂರನೆಯ ಕಾಟದ ಮಾತನ ತೇಲಿಸಿ ಹೇಳಿದ್ದುಂಟು. ಅದನ್ನು ಈ ಮುನ್ನ ಕೇಳದಿರುವ ಜನರಿಗೆ ಅದ ತಿಳಿಯಲಿ ಎಂಬ ಉದ್ದೇಶದಿಂದ ಇಲ್ಲಿ ಹೇಳುತ್ತೇನೆ.

ಕಾಳಿದಾಸನಿಗೆ ಬಾಲ್ಯದಲ್ಲಿ ಪಾಠ ಹೇಳಿದ ಗುರು ಒಬ್ಬರಿದ್ದರು ಆಸ್ಥಾನದಲ್ಲಿ ಕವಿಯಾಗಿ, ಪ್ರಭುಸನ್ನಿಧಿಯಲ್ಲಿ ಪ್ರಭಾವಂತನಾಗಿ ಇರು ಶಿಷ್ಯನ ಸಹಾಯದಿಂದ ಪ್ರಭುವಿನ ದರ್ಶನಮಾಡಿ ಪ್ರಯೋಜನ ಪಡೆಯೋ ಎಂದು ಗುರು ಒಮ್ಮೆ ರಾಜಧಾನಿಗೆ ಬಂದರು. ಪ್ರಭುವಿನ ಎದುರಲ್ಲಿ ತೋರಿ ಬಹುದಾದ ಪಾಂಡಿತ್ಯ ಈ ಗುರುವಿಗೆ ಇಲ್ಲ. ಆದರೂ ಇವನಿಗೆ ಹೀಗೆಂದ ಹೇಳಿ ಆಶೆಯನ್ನು ಮುರಿದು ಹಾಗೆಯೇ ಹಿಂದಕ್ಕೆ ಕಳುಹಿಸುವುದು ಶಿಷ್ಯನಿ ಬೇಡ ಎನ್ನಿಸಿತು. ಅವನು ಅವರಿಗೆ "ನಾನು ನಿಮ್ಮನ್ನು ಹೊಗಳಿ ಪ್ರಭ ಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ತಾವು ಪ್ರಭುಗಳಿಗೆ ಒಂದೇ ಒಂದ ವಾಕ್ಯವನ್ನು ಹೇಳಿ ಸುಮ್ಮನಾಗಿ" ಎಂದನು. ಗುರು ಒಪ್ಪಿದರು. ಕಾಳಿದಾ "'ತ್ರಿಪೀಡಾ ಪರಿಹಾರೋಽಸ್ತು' ಎನ್ನುವುದು ವಾಕ್ಯ; ನಾಲ್ಕು ಸ ಬಾಯಲ್ಲಿ ಹೇಳಿಕೊಳ್ಳಿ" ಎಂದನು. ಇವರು "ಇದೇನು ಕಷ್ಟ? ಹೇಳ ತ್ತೇನೆ, ನಡಿ" ಎಂದರು. ಇಬ್ಬರೂ ಪ್ರಭುಸನ್ನಿಧಿಗೆ ಹೋದರು. ಪರಿಚಯ ಮಾತು ಮುಗಿದ ಮೇಲೆ ಗುರು ಪ್ರಭುವಿನ ಹತ್ತಿರಕ್ಕೆ ಹೋಗಿ, ಅವ ಕೈಯಲ್ಲಿ ಎರಡು ನಿಂಬೆಹಣ್ಣನ್ನು ಇಟ್ಟು, "ತ್ರಿಪೀಡಾ ಅಸ್ತು" ಎಂದರು ಪ್ರಭುವಿಗೆ, ಇದೇನು ಶಾಪದ ಮಾತು ಎಂದು ಶಂಕೆ ಆಗಿ, ಅದು ಮುಖದ ಕಂಡಿತು. ಕಾಳಿದಾಸ ಒಡನೆ ಅವನ ಕಿವಿಯ ಹತ್ತಿರ ಮುಖ ಇಟ್ಟ "ಹಿರಿಯರ ಅರ್ಥ ತುಂಬ ಒಳ್ಳೆಯದು. ತಿಳಿಸಬೇಕೆಂದರೆ ಅರಿಕೆ ಮಾಡ ತ್ತೇನೆ" ಎಂದನು. ಪ್ರಭು, "ಏನು? ತಿಳಿಸಿ," ಎಂದನು. ಕಾಳಿದಾ ವಿವರಿಸಿದನು: "ಪ್ರಭುಗಳಾದವರಿಗೆ ಮೂರು ಪೀಡೆ ತುಂಬ ಇಷ್ಟ

ಮೊದಲನೆಯದು ಸಭೆಯಲ್ಲಿ ಕುಳಿತಾಗ ಯಾಚಕರ ಪೀಡೆ; ಎರಡನೆಯದು ಊಟಕ್ಕೆ ಕುಳಿತಾಗ ಎಳೆಯ ಮಗು ತೊಡೆಯಮೇಲೆ ಕುಳಿತು ನನಗೆ ಇದನ್ನು ಕೊಡು ಅದನ್ನು ಕೊಡು ಎಂದು ಪೀಡಿಸುವುದು. ಮೂರನೆಯದು ಹಾಸಿಗೆಯಲ್ಲಿ ಇಷ್ಟಳಾದ ಹೆಣ್ಣಿನ ಪೀಡೆ. ಸನ್ನಿಧಾನಕ್ಕೆ ಈ ಮೂರು ಪೀಡೆಗಳೂ ಹೇರಳವಾಗಿ ಇರಲಿ ಎಂದು ನನ್ನ ಗುರುಗಳ ಹರಕೆ," ಎಂದನು. ಪ್ರಭು ನಕ್ಕು ಸಂತೋಷಪಟ್ಟು, ಹೀಗೆ ಹರಸಿದ ವೃದ್ಧನಿಗೆ ತುಂಬ ಧನವನ್ನು ಸಲ್ಲಿಸಿ ಮರ್ಯಾದೆಮಾಡಿ, ಆತನನ್ನು ಕಳುಹಿಸಿಕೊಟ್ಟನು.

ಕವಿಯನ್ನು ಕುರಿತು ಮತ್ತೊಂದು ಇಂಥ ಕತೆ ಈಚೆಗೆ ನೆನಪಿಗೆ ಬಂದದ್ದು ಹೀಗಿದೆ. ಕವಿ ಸಹಜವಾಗಿ ಉದಾರಿ. ಯೋಗ್ಯತೆ ಇದ್ದವರು, ಇಲ್ಲದವರು ಯಾರೇ ದೊರೆಯ ಬಳಿ ಯಾಚನೆಗೆ ಬಂದವರು, ಅವರಿಗೆ ಒಪ್ಪಿಸುವುದಕ್ಕಾಗಿ ಒಂದು ಶ್ಲೋಕ ಬೇಕೆಂದರೆ ಇವನು ಅದನ್ನು ಬರೆದುಕೊಡುವನು. ಅವರು ಅದನ್ನು ದೊರೆಗೆ ಒಪ್ಪಿಸಿ ಸನ್ಮಾನ ಪಡೆದು ನಡೆಯುವರು. ಕವಿ ದೊರೆಯ ಮಧ್ಯೆ ವಿರಸ ಮೂಡಿ ಇವನು ಮರೆಯಲ್ಲಿದ್ದ ದಿನದಲ್ಲಿ ಒಬ್ಬ ಶ್ಲೋಕ ರಚನಕಾರ "ಭೋಜನಂ ದೇಹಿ ರಾಜೇಂದ್ರ ಘೃತಸೂಪ ಸಮನ್ವಿತಂ" ಎಂಬ ಅರ್ಧ ಶ್ಲೋಕವನ್ನು ರಚಿಸಿ ಇವನ ಬಳಿಗೆ ಬಂದು ಇದನ್ನು ಮುಗಿಸಿಕೊಡು ಎಂದು ಬೇಡಿದನು. ಕಾಳಿದಾಸ, "ಮಾಹಿಷಂಚ ಶರಚ್ಚಂದ್ರ ಚಂದ್ರಿಕಾ ಧವಳಂ ದಧಿ" ಎಂದು ಅರ್ಧ ಶ್ಲೋಕವನ್ನು ಸೇರಿಸಿಕೊಟ್ಟನು. ಶ್ಲೋಕಕಾರ ಅದನ್ನು ದೊರೆಯ ಬಳಿಗೆ ತೆಗೆದುಕೊಂಡು ಹೋದನು. ದೊರೆ ಅದನ್ನು ನೋಡಿದ ಒಡನೆ ಎರಡನೆಯ ಭಾಗ ಕಾಳಿದಾಸನ ರಚನೆ ಎಂದು ಕಂಡುಕೊಂಡನು. ಯಾಚಕ ಕವಿಯನ್ನು ಇದನ್ನು ಬರೆದುಕೊಟ್ಟವರು ಯಾರು ಎಂದು ಕೇಳಿದನು. ಅವನಿರುವ ಸ್ಥಳವನ್ನು ಹೇಳಿದರೆ ತುಂಬ ಧನ ಕೊಡುತ್ತೇನೆ ಎಂದನು. ಶ್ಲೋಕಕಾರ ಶ್ಲೋಕದ ಎರಡನೆಯ ಅರ್ಧ ಕಾಳಿದಾಸನದು ಹೌದು ಎಂದು ಒಪ್ಪಿಕೊಂಡು ಕಾಳಿದಾಸ ಇರುವ ಸ್ಥಳವನ್ನು ದೊರೆಗೆ ತಿಳಿಸಿದನು. ದೊರೆ ಕಾಳಿದಾಸನ ಬಳಿಗೆ ಸ್ನೇಹಿತರನ್ನು ಕಳುಹಿಸಿ ಅವನ ಕ್ಷಮೆ ಬೇಡಿ ಅವನನ್ನು ಬರಮಾಡಿಕೊಂಡು ಅವನನ್ನು ಮೊದಲಿನಂತೆ ಗೌರವದಿಂದ ಕಂಡನು.

ಇವೆಲ್ಲ ಕಾಳಿದಾಸ ಎಂಬ ಹೆಸರಿನ ಕವಿ ಒಬ್ಬನೇ ಇದ್ದ ಎಂಬ

ತಿಳಿವಳಿಕೆಯ ಕಥೆಗಳು. ಸಂಸ್ಕೃತ ಸಾಹಿತ್ಯದಲ್ಲಿ ಐದೋ ಆರೋ ಕಾಳಿದಾ
ಉಲ್ಲೇಖ ಇವೆ ಎಂದು ಪಂಡಿತರು ನಿರ್ಣಯಿಸಿದ್ದಾರೆ. ಅವರಲ್ಲಿ ಒಬ್ಬ ಮ
ನಮ್ಮ ಮಹಾಕವಿ.

ಮಹಾಕವಿ ಕಾಳಿದಾಸನ ಕಾಲ ಯಾವುದು ಎಂಬ ವಿಷಯದಲ್ಲಿ
ಚರ್ಚೆ ನಡೆದಿದೆ. ಕರ್ಣಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ
ಕರಮರ್‌ಕರ್ ಅವರ ಇಂಗ್ಲಿಷ್ ಪುಸ್ತಕ, ಮೈಸೂರು ವಿಶ್ವವಿದ್ಯಾ
ಪ್ರಕಟಿಸಿರುವ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರ " ಸಂಸ್ಕೃತ ನಾಟ
ಕನ್ನಡ ಪುಸ್ತಕದಲ್ಲಿರುವ ಕಾಳಿದಾಸನನ್ನು ಕುರಿತ ಅಧ್ಯಾಯ, ಶ್ರೀ
ರಂಗಾಚಾರ್ಯರವರ " ಕಾಳಿದಾಸ " ಗ್ರಂಥ, ಈ ವಿಷಯವನ್ನು ವಿವರ
ಚರ್ಚಿಸಿವೆ. ಈ ಸಂದರ್ಭದಲ್ಲಿ ಹೇಳಿರುವ ವಿಷಯವನ್ನೆಲ್ಲ ಪರಿಶೀಲಿಸಿ
ಮಹಾಕವಿ ಕಾಳಿದಾಸ ಉಜ್ಜಯಿನಿಯಲ್ಲಿ ಕ್ರಿ.ಪೂ. ಮೊದಲ ಶತಮಾ
ಶಕಪುರುಷ ವಿಕ್ರಮಾದಿತ್ಯರಾಜನ ಕಾಲದಲ್ಲಿ ಇದ್ದನೆಂದು ಹೇ
ಸಂಪ್ರದಾಯ ಅಂಗೀಕಾರಾರ್ಹ ಎಂದು ಕಾಣುತ್ತದೆ.

ಧಾರಾನಗರದ ಭೋಜರಾಜನ ಆಸ್ಥಾನದಲ್ಲಿ ಒಬ್ಬ ಕಾಳಿದಾಸ
ನಾದರೆ ಅವನು ಮಹಾಕವಿ ಕಾಳಿದಾಸ ಅಲ್ಲ. ಭೋಜರಾಜನ ಕಾಲ ಕ್ರಿ
೧೧ನೆಯ ಶತಮಾನ.

ಇದು ಮತ್ತೊಬ್ಬ ಕಾಳಿದಾಸನನ್ನು ಕುರಿತ ಒಂದು ಕಥೆ.

ಕಾಳಿದಾಸ ಸಿಂಹಳದ ಮಹಾರಾಜ ಕುಮಾರದಾಸನ ಬಳಿ ನಿಯ
ಯಾಗಿದ್ದ. ಕುಮಾರದಾಸ ಕವಿ. ಅವನ ವೇಶ್ಯೆ ಒಬ್ಬಳು ಕಮಲ
ಹೆಸರಿನವಳು ಇದ್ದಳು. ಕುಮಾರದಾಸ ಅವಳ ಮನೆಯ ಗೋಡೆಯ ಮೇ
ಒಂದು ಶ್ಲೋಕದ ಮೊದಲ ಪಾದವನ್ನು ಬರೆದು ಅದನ್ನು ಪೂರ್ತಿ ಮ
ದವರಿಗೆ ಭೂರಿಧನ ಸನ್ಮಾನ ನೀಡುವುದಾಗಿ ಘೋಷಣೆ ಮಾಡಿಸಿದನು. ಅ
ಶ್ಲೋಕ ಇದು : " ಕಮಲೇ ಕಮಲೋತ್ಪತ್ತಿಃ ಶ್ರೂಯತೇ ನ ತು ದೃಶ್ಯತೇ
ಕಾಳಿದಾಸ " ಬಾಲೇ ತವ ಮುಖಾಂಭೋಜೇ ದೃಷ್ಟಮಿಂದೀವರದ್ವಯ
ಎಂದು ಬರೆದು ಶ್ಲೋಕವನ್ನು ಪೂರ್ಣಮಾಡಿದನು. ಸನ್ಮಾನದ ಧ
ಮೇಲಣ ದುರಾಶೆಯಿಂದ ವೇಶ್ಯೆ ಕಾಳಿದಾಸನನ್ನು ಕೊಂದಳು. ಸ್ನೇಹಿ

ಸಾವಿನಿಂದ ದುಃಖಪಟ್ಟ ದೊರೆ ಅವನ ಚಿತೆಯನ್ನು ತಾನೂ ಹೊಕ್ಕು ಜೀವಬಿಟ್ಟನು ಎಂದು ಒಂದು ಕಥೆ ಇದೆ. ಕಾಳಿದಾಸನ ಕಾವ್ಯದಲ್ಲಿ ತೀರಿಕೊಂಡನು.

ಕುಮಾರದಾಸ ಸಿಂಹಳದ ರಾಜನಾಗಿದ್ದದ್ದು ಕ್ರಿ.ಶ. ೬ನೆಯ ಶತಮಾನ ದಲ್ಲಿ. "ಜಾನಕೀಹರಣ" ಎಂಬ ಕಾವ್ಯ ಇವನ ರಚನೆ.

ಇಲ್ಲಿ ಉಕ್ತವಾಗಿರುವ ಕಾಳಿದಾಸ ಮಹಾಕವಿ ಕಾಳಿದಾಸ ಅಲ್ಲ. ಮಹಾಕವಿ ಆರನೆಯ ಶತಮಾನಕ್ಕೆ ಹಿಂದೆ ಇದ್ದವನು.

ಕಾಳಿದಾಸನ ಗೃಹಜೀವನದ ವಿಚಾರ ಯಾವ ವಿವರವೂ ತಿಳಿದುಬಂದಿಲ್ಲ. ಅವನ ಹೆಂಡತಿಯ ಹೆಸರು ಕಮಲಾ ಎಂದು ಕೆಲವರು ಹೇಳುತ್ತಾರೆ. ಇದಕ್ಕೆ ಆಧಾರ "ಕಮಲೇ ಕಮಲೋತ್ಪತ್ತಿಃ" ಎಂದು ಮೊದಲಾಗುವ ಮೇಲೆ ಹೇಳಿದ ಶ್ಲೋಕ. ಹೆಂಡತಿಯ ಹೆಸರು ಶೋಭನಾ ಎಂದು ಇನ್ನು ಕೆಲವರ ಊಹೆ. ಇದಕ್ಕೆ ಆಧಾರ ಕುಮಾರ ಸಂಭವದಲ್ಲಿ ಬರುವ "ತದಿದಂ ಪರಿರಕ್ಷ ಶೋಭನೇ" ಎಂದು ಆರಂಭವಾಗುವ ಒಂದು ಶ್ಲೋಕ.

ಕಾಳಿದಾಸ ಎನ್ನುವ ಹೆಸರಿನಿಂದ ಕವಿ ವಂಗದೇಶದವನೆಂದು ಕಾಣುತ್ತದೆ ಎಂದು ಒಂದು ವಾದ. ಕಾಳಿಪೂಜೆ ಬಹಳವಾಗಿ ಬಳಕೆಯಲ್ಲಿರುವುದು ವಂಗ ದೇಶದಲ್ಲಿ.

ಕಾಳಿದಾಸ ಕೇಸರಿ ಪುಷ್ಪವನ್ನು ಹಲವು ಸಲ ಹೊಗಳಿದ್ದಾನೆ. ಹಿಮಾಲಯದ ಪ್ರದೇಶವನ್ನು ಚೆನ್ನಾಗಿ ನೋಡಿದ್ದನೆನ್ನುವುದನ್ನು ಅವನ ಕಾವ್ಯ ತೋರಿಸುತ್ತದೆ. ಆದ್ದರಿಂದ ಇವನ ಹುಟ್ಟುನೆಲ ಕಾಶ್ಮೀರ ಇದ್ದಿರ ಬೇಕು. ಇದು ಇನ್ನೊಂದು ವಾದ.

ಕವಿ ಮಾಳವ ಪ್ರದೇಶದ ಸಣ್ಣ ಗುಡ್ಡಗಳನ್ನೂ ಸಣ್ಣ ನದಿಗಳನ್ನೂ ತುಂಬ ಅಕ್ಕರೆಯಿಂದ ವರ್ಣಿಸಿದ್ದಾನೆ. ಮೇಘದೂತ ಕಾವ್ಯದಲ್ಲಿ ೩೫ ಸ್ಥಳಗಳ ಹೆಸರು ಬರುತ್ತದೆ. ೩೫ರಲ್ಲಿ ಹನ್ನೆರಡು ಮಾಳವದೇಶಕ್ಕೆ ಸಂಬಂಧಿಸಿವೆ. ಕವಿ ಮೇಘಕ್ಕೆ "ನಿನ್ನ ದಾರಿಯಿಂದ ಒಂದು ಪಕ್ಕಕ್ಕಿರುವುದಾದರೂ ನೀನು ಉಜ್ಜಯಿನಿಗೆ ಹೋಗು" ಎನ್ನುತ್ತಾನೆ. ಉಜ್ಜಯಿನಿಯ ಪಕ್ಕದ ಮಹಾಕಾಳ ವನ್ನು ಹೊಗಳುತ್ತಾನೆ.

ಕಾಳಿದಾಸ ಎಂಬ ಹೆಸರಷ್ಟರಿಂದ ಕವಿ ವಂಗದೇಶದವನೆಂದು ನಿರ್ಧರಿಸು

ವುದೂ, ಕೇಸರ ಪುಷ್ಪವನ್ನು ಹೊಗಳಿರುವುದರಿಂದ ಅವನು ಕಾಶ್ಮೀರ ದೇಶದವ ನೆನ್ನುವುದೂ ಅತಂತ್ರ ವಾದಗಳು.

ಮಾಲವ ದೇಶವನ್ನು ಕುರಿತ ಪ್ರೇಮ, ಉಜ್ಜಯಿನಿಯನ್ನು ಕುರಿತ ಅಭಿಮಾನ, ಇವುಗಳ ಕಾರಣದಿಂದ ಕವಿ ಮಾಲವ ದೇಶದಲ್ಲಿ ಹುಟ್ಟಿರಬಹುದು, ಉಜ್ಜಯಿನಿಯಲ್ಲಿ ಬಾಳಿರಬೇಕು, ಎಂದು ಊಹಿಸುವುದು ಹೆಚ್ಚು ಯುಕ್ತ ಎಂದು ಕಾಣುತ್ತದೆ.

ಈ ನಾಟಕದಲ್ಲಿ ಮೇಲೆ ಹೇಳಿರುವ ದಂತಕತೆಗಳನ್ನೂ, ಐತಿಹಾಸಿಕ ವಿವರಗಳನ್ನೂ ಆಧಾರವಾಗಿರಿಸಿಕೊಂಡು, ಕವಿಯನ್ನು ಕ್ರಿ.ಪೂ. ಮೊದಲ ಶತಮಾನದಲ್ಲಿ ಮಾಲವವನ್ನು ಆಳಿದ ವಿಕ್ರಮಾದಿತ್ಯನ ಕಾಲದವನೆಂದೂ, ಆ ದೇಶದ ಒಂದು ಸೀಮೆ ಆದ ರಾಮಗಿರಿಯ ಅರಸನ ಮಗನೆಂದೂ, ಅವನು ಒಂದು ಕಾರಣದಿಂದ ತನ್ನ ಪತ್ನಿಯನ್ನು ತೊರೆದು ಹೋದನೆಂದೂ, ಆ ಹೆಂಡತಿಯ ಸೋದರಿ ಅವಳು ಅಗ್ನಿಪ್ರವೇಶ ಮಾಡಿದಳೆಂದು ಒಂದು ಕಥೆಯನ್ನು ಹುಟ್ಟಿಸಿದಳೆಂದೂ, ಕಾಳಿದಾಸ ಮುಖ ಮರೆಸಿಕೊಂಡು ಉಜ್ಜಯಿನಿಯಲ್ಲಿ ಆಸ್ಥಾನ ಕವಿಯಾಗಿ ಸೇರಿದನೆಂದೂ ಅವನ ಪತ್ನಿ ಅವನನ್ನು ಅಲ್ಲಿ ಸೇರಿದಳೆಂದೂ ಹೇಳಿದೆ.

ನಾಟಕದಲ್ಲಿ ಮಾಳವ ದೇಶವನ್ನು ಕುರಿತು ಕೆಲವು ವಿವರ ಇವೆ. ಈ ವಿವರಗಳು ದೇಶವನ್ನು ನೋಡಿ ಬರೆದಿರುವ ವಿವರಗಳಲ್ಲ. ನಾನು ಮಾಳವ ದೇಶವನ್ನು ನೋಡಿದ್ದು ರೈಲಿನಲ್ಲಿ ದೆಹಲಿಗೆ ಹೋಗುತ್ತ, ದೆಹಲಿಯಿಂದ ಬರುತ್ತ, ಮೂರು ಬಾರಿ. ದೇಶದಲ್ಲಿ ಉದ್ದಕ್ಕೂ ಸಣ್ಣ ಗುಡ್ಡಗಳು ಕಂಡವು. ಪಕ್ಕದಲ್ಲಿ ಅಷ್ಟೇನೂ ಎತ್ತರದವು ಅಲ್ಲದ, ಬಹಳ ಒತ್ತು ಅಲ್ಲದ, ಮರಗಳ ಕಾಡು. ವನವೋ ಉಪವನವೋ ಎಂಬಂತೆ ಇರುವುವು. ಒಂದೊಂದು ಸಲವೂ ಈ ವನಗಳಲ್ಲಿ ನಾನು ಕೆಲವು ನವಿಲನ್ನು ಕಂಡೆನು. ಎರಡುಬಾರಿ ಹುಲ್ಲೆಗಳನ್ನು ಕಂಡೆನು. ಇಷ್ಟರಿಂದ ಈ ದೇಶದ ಒಂದು ಭಾಗವನ್ನು ಕುರಿತು ಮಾಡಿಕೊಂಡ ಕಲ್ಪನೆಯನ್ನು ನಾಟಕದಲ್ಲಿ ಕೊಟ್ಟಿದೇನೆ. ಮೇಘದೂತದ ರಾಮಗಿರಿಯನ್ನು ಆ ಪ್ರದೇಶದ ಮುಖ್ಯಪುರ ಎಂದು ಮಾಡಿ ಕಾಳಿದಾಸ ರಾಮಗಿರಿ ಸೀಮೆಯ ಅರಸನ ಮಗ ಎಂದು ಕಲ್ಪಿಸಿದ್ದೇನೆ.

೩೩ನೆಯ ಪುಟದಲ್ಲಿ ಗುರು "ಸೀತಾಪುರ" ಎಂದಿರುವ ಊರು

ಸೂತ್ರಧಾರ ನಾಲ್ಕನೆಯ ಪುಟದಲ್ಲಿ ಜಾನಕೀಪುರ ಎಂದು ಕರೆದಿರುವ ಪಟ್ಟಣದ ಒಂದು ಭಾಗ ಎಂದು ಗ್ರಹಿಸಬೇಕು. (ಬೆಂಗಳೂರಲ್ಲಿ ಸಿದ್ದಿಕಟ್ಟೆ, ಸೀಗೇಬೇಲಿ ಇದ್ದಂತೆ).

ಮಹಾಕಾಳ ಕ್ಷೇತ್ರವನ್ನು ಕುರಿತ ಇಲ್ಲಿಯ ಚಿತ್ರ ವಸ್ತುಸ್ಥಿತಿಯಿಂದ ಬೇರೆಯಾಗಿರುವುದು ಸಾಧ್ಯ. ಈ ಪಕ್ಷದಲ್ಲಿ ಕ್ಷೇತ್ರದ ಆವರಣ, ಹಿಂಬದಿ, ಇಲ್ಲಿ ವರ್ಣಿಸಿರುವಂತೆ ಇದ್ದುವೆಂದು ಕತೆಗಾಗಿ ಗ್ರಹಿಸಬೇಕು.

ಋತುಸಂಹಾರ ಕಾವ್ಯದಿಂದ ಉದ್ಧರಿಸಿರುವ ಶ್ಲೋಕಗಳನ್ನು ನಾನು ಸೋದರಕವಿ ಶ್ರೀ ಪರಮೇಶ್ವರಭಟ್ಟರ "ಕಾಳಿದಾಸ ಮಹಾಸಂಪುಟ"ದಿಂದ ಅವರ ಅನುಮತಿಯ ನಿರೀಕ್ಷೆಯ ಮೇಲೆ ತೆಗೆದುಕೊಂಡಿದ್ದೇನೆ. ತೆಗೆದುಕೊಳ್ಳುವಲ್ಲಿ ಇಲ್ಲಿ ಅಲ್ಲಿ ಒಂದು ಅಕ್ಷರವನ್ನು ಬೇರೆ ಮಾಡಿದ್ದೇನೆ. ಈ ಸಂಪುಟವನ್ನು ನಿರ್ಮಿಸಿ ಪ್ರಕಟಿಸಿ ಶ್ರೀ ಭಟ್ಟರು ಕನ್ನಡ ಜನತೆಗೆ ಬಹು ಹಿರಿಯ ಉಪಕಾರ ಮಾಡಿದ್ದಾರೆ; ಅದರ ಫಲವಾಗಿ ತುಂಬ ಕೀರ್ತಿಯನ್ನು ಗಳಿಸಿದ್ದಾರೆ. ಪುಸ್ತಕದ ಪ್ರಕಾಶನ ಉತ್ಸವಕ್ಕೆ ನಾನು ಹೋಗಬೇಕಾಗಿತ್ತು. ಆರೋಗ್ಯ ತಪ್ಪಿ ಹೋಗಲಾಗಲಿಲ್ಲ. ಹೋಗಿದ್ದರೆ ಅಲ್ಲಿ ಆಡಿ ತೋರಿಸುತ್ತಿದ್ದ ಮೆಚ್ಚಿಕೆ ಗೌರವವನ್ನು ಈಗ ಇಲ್ಲಿ ಈ ಎರಡು ಮಾತಿನಲ್ಲಿ ಪ್ರಕಟಿಸಿದ್ದೇನೆ. ಮುಂದಾಗಿ ಅನುಮತಿ ಪಡೆಯದ ಬಗ್ಗೆ ಶ್ರೀ ಭಟ್ಟರ ಕ್ಷಮೆಯನ್ನು ಬೇಡಿದೇನೆ.

ನಾಟಕದ ಆರಂಭದಲ್ಲಿ ಕವಿ ಬಾಲ್ಯದಲ್ಲೇ ಕವಿಮನೋಧರ್ಮವನ್ನು ತೋರಿಸಿದನೆಂಬ ಸಂದರ್ಭದಲ್ಲಿ ಹುಡುಗ, ಆಕಾಶ ಒಂದು ಮುಚ್ಚಳ, ಅದರಲ್ಲಿ ಕಂಡಿಗಳಿವೆ, ಮುಚ್ಚಳದ ಆಚೆಗೆ ಬೆಳಕಿದೆ, ಕಂಡಿಗಳಿಂದ ಬೆಳಕು ನಮಗೆ ಕಾಣುತ್ತದೆ, ಆದರಿಂದ ಒಂದೊಂದು ಕಂಡಿಯೂ ನಮಗೆ ಒಂದು ನಕ್ಷತ್ರ ಆಗುತ್ತದೆ, ಎಂದು ಹೇಳುವುದನ್ನು ನಾನು ಒಂದು ಮಗುವನ್ನು ಕುರಿತ ನಮ್ಮ ಸೋದರ ಕವಿ ಒಬ್ಬರ ಒಂದು ಕೃತಿಯಿಂದ ತೆಗೆದುಕೊಂಡಿದೇನೆ. ಕವಿ ಪ್ರಾಯಶಃ ಶ್ರೀ ಪು. ತಿ. ನರಸಿಂಹಾಚಾರ್ಯರು; ಕೃತಿಯ ಹೆಸರು ನೆನಪಿಲ್ಲ. ಕೃತಿಯ ಈ ಮಗುವಿನ ಮನೋಧರ್ಮ, ಅದನ್ನು ಯೋಚಿಸಿ ಕೃತಿಯಲ್ಲಿ ಪ್ರಕಟಿಸಿದ ಮನೋಧರ್ಮ, ಉನ್ನತ ಕವಿ ಮನೋಧರ್ಮ ಎಂದು ನಾಟಕವನ್ನು ಓದುವವರೆಲ್ಲ ಒಪ್ಪುವರೆಂದು ನನ್ನ ಭಾವನೆ.

ಒಂದು ನಾಟಕವೆಂದು ರಚಿತವಾಗಿದ್ದರೂ ಈ ಕೃತಿ ನಮ್ಮ ರಂಗ ಭೂಮಿಯ ಮೇಲೆ ಪ್ರದರ್ಶನ ಪಡೆದೀತು ಎಂದು ನಾನು ನಿರೀಕ್ಷಿಸುತ್ತಿಲ್ಲ. ನಾನು ರಚಿಸಿರುವ ಇತರ ನಾಟಕಗಳು ಒಂದೊ ಎರಡೋ ಬಾರಿ ರಂಗದ ಮೇಲೆ ಬಂದಾಗ ಪ್ರೇಕ್ಷಕರ ಮೆಚ್ಚಿಗೆಯನ್ನು ಪಡೆದವು. ಆದರೆ ಅವು ಆಮೇಲೆ ಪ್ರದರ್ಶನಕ್ಕೆ ಬಂದಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣ ಇವನ್ನು ಪ್ರದರ್ಶಿಸಲು ತುಂಬ ಶ್ರಮವಹಿಸಬೇಕಾಗುತ್ತದೆ ಎನ್ನುವುದು. ನಮ್ಮ ವೃತ್ತಿವಂತ ನಾಟಕ ಸಂಸ್ಥೆಗಳು ಇಂಥ ಶ್ರಮವಹಿಸುವ ಸ್ಥಿತಿಗೆ ಬಂದಿಲ್ಲ. ನಾಟಕ ಪ್ರೇಮಿಗಳ ಇತರ ಸಂಸ್ಥೆಗಳು ಈ ಶ್ರಮವನ್ನು ವಹಿಸಬಲ್ಲವು; ಆದರೆ ಇದಕ್ಕಿಂತ ಸ್ವಲ್ಪ ಸುಲಭವಾದ ಕೆಲಸ ಏನಿರಬಹುದು ಎಂದು ನೋಡುತ್ತಾರೆ. ಕಾಕನಕೋಟೆ ನಾಟಕ, ಹೀಗೆ ಕೆಲವು ಬಾರಿ ಪ್ರದರ್ಶನ ಪಡೆದು ತಟಸ್ಥ ವಾಗಿದ್ದಿತು. ನಾಟ್ಯ ಪ್ರೇಮಿ ಸಂಘ ಎರಡು ಅದನ್ನು ತೆಗೆದುಕೊಂಡು ತುಂಬ ಚೆನ್ನಾಗಿ ಅಭಿನಯಿಸಿ ಅದು ಜನಪ್ರಿಯವಾದ ಒಂದು ನಾಟಕ ಎನ್ನಿಸಿದವು. ಸಂಘಗಳಲ್ಲಿ ಒಂದು ಆಮೇಲೆ ಅದನ್ನು ಚಲನಚಿತ್ರಕ್ಕೆ ಅಳವಡಿಸಿ ನನಗೆ ತಿಳಿಸದಂತೆ ಅನವಶ್ಯಕವಾದ ಕೆಲವು ಮಾರ್ಪಾಡುಗಳನ್ನು ಮಾಡಿ ವಿರೂಪಗೊಳಿಸಿ ಚಲನಚಿತ್ರವಾಗಿ ಪ್ರದರ್ಶಿಸಿತು. ನಮ್ಮ ರಂಗ ಭೂಮಿಯ ಸದ್ಯದ ಸ್ಥಿತಿಯಲ್ಲಿ ನನ್ನ ನಾಟಕಗಳ ಅದೃಷ್ಟ ಇಷ್ಟೇ ಎಂದು ನಾನು ಅತಿಯಾಗಿ ಆಸೆಪಡದೆ ಸಮಾಧಾನವಾಗಿದ್ದೇನೆ.

ನಾಟಕವನ್ನು ಓದುವ ನಮ್ಮ ಜನ ನನ್ನ ಇತರ ಕೃತಿಗಳಿಗೆ ತೋರಿಸಿರುವ ಆದರವನ್ನು ಇದಕ್ಕೂ ತೋರಿಸಿಯಾರು ಎಂದು ನಂಬಿದ್ದೇನೆ.

ನನ್ನ ಕಣ್ಣಿಗೆ ಪರೆ ಬಂದು ನಾನು ಸದ್ಯ ಮೂರುಪಾಲು ಕುರುಡಾಗಿ ದ್ದೇನೆ. ಈ ಸ್ಥಿತಿಯಲ್ಲಿ ನಾನು ಬರೆದ ಅರೂಪದ ಬರಹವನ್ನು ನನ್ನ ಹಿರಿಯ ಅಳಿಯಂದಿರು ಶ್ರೀ ಶೇಷಾದ್ರಿ ಅವರು, ನನ್ನ ಕಿರಿಯ ಮಗಳು ಸೌಭಾಗ್ಯವತಿ ಅರವಿಂದಮ್ಮ, ಶುದ್ಧವಾಗಿ ಮತ್ತೆ ಬರೆದು ಹಸ್ತಪ್ರತಿಯನ್ನು ಸಿದ್ಧಪಡಿಸಿದರು. ಅಚ್ಚಿನ ಕರಡನ್ನು ತಿದ್ದುವ ಕೆಲಸದಲ್ಲಿ ಈ ನನ್ನ ಚಿರಂಜೀವಿಗಳು ನೆರವು ನೀಡಿದ್ದಾರೆ. ಈ ನೆರವಿದ್ದದ್ದರಿಂದಲೇ ನಾಟಕವನ್ನು ಅಚ್ಚುಮಾಡುವುದು ಸಾಧ್ಯವಾಯಿತೆನ್ನುವುದನ್ನು ನಾನು ಇಲ್ಲಿ ಹೇಳಬೇಕು.

ನಾಟಕ ನನ್ನ ಹಿರಿಯ ಮಿತ್ರರಾಗಿದ್ದ ಶ್ರೀ ಸುಬೋಧ ರಾಮರಾಯರು ಸ್ಥಾಪಿಸಿದ ಸುಬೋಧ ಮುದ್ರಣಾಲಯದಲ್ಲಿ ಅಚ್ಚಾಗಿದೆ. ಶ್ರೀ ರಾಮರಾಯರ ಕುಮಾರರು ತಮ್ಮ ತಂದೆಯ ಮಿತ್ರರೆಂಬ ಕಾರಣದಿಂದ ನನ್ನ ವಿಷಯದಲ್ಲಿ ತುಂಬ ಅಕ್ಕರೆಯಿಂದ ನಡೆದುಕೊಳ್ಳುತ್ತಿದಾರೆ; ನಾಟಕವನ್ನು ತುಂಬ ಶ್ರದ್ಧೆಯಿಂದ ಅಚ್ಚುಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ನಾನು ಇವರಿಗೆ ವಂದನೆಯನ್ನು ಸಲ್ಲಿಸುತ್ತೇನೆ.

ಕಾಳಯುಕ್ತಿ ವೈಶಾಖ ಶುದ್ಧ
ಸಪ್ತಮಿ, ಭಾನುವಾರ
೧೪–೫–೧೯೭೮ } **ಶ್ರೀನಿವಾಸ**

ಟಿಪ್ಪಣಿ

ಅಚ್ಚಿನಲ್ಲಿ ಬಿದ್ದಿರುವ ಕೆಲವು ತಪ್ಪುಗಳನ್ನು ಮುಂದೆ ತೋರಿಸಿರುವಂತೆ ತಿದ್ದಿಕೊಳ್ಳಬೇಕೆಂದು ಬೇಡಿದೆ.

ಪುಟ	ಪಂಕ್ತಿ	ತಪ್ಪು	ಸರಿ
೨೭	೧೯	ಬೆಡಗು	ಬೆಗಡು
೫೬	೧೨	ಮೊಳೆವ	ಮೊರೆವ
೬೨	೨೫	....ದಾಲಯುವ	....ದಾಲಯುದ.
೧೪೧	೨೭	ಕೊಂದೆನು	ತೊರೆದೆನು
೧೪೯	೯	ಅಹುದು	ಇಹುದು

೧೫೯ನೆಯ ಪುಟದ ಕೊನೆಯ ಪಂಕ್ತಿಯ "ಹೊರಟರು" ಪದವನ್ನು ಬಿಟ್ಟು ಓದಬೇಕು.

ಕಾಳಿದಾಸ

ಪಾತ್ರಗಳು

ಗುರು	ರಾಮಗಿರಿಯ ದೊರೆ ಮನೆತನದ ಗುರು
ಕಾಳಿದಾಸ	ರಾಮಗಿರಿಯ ಅರಸು ಮಗ
ಮಕ್ಕಳು	ಹುಡುಗರು, ಹುಡುಗಿಯರು
ಅಪರ್ಣಾ	ಗುರುವಿನ ಮಗಳು
ಸಚಿವ	ಭರತಪುರದ ರಾಜನ ಆಸ್ಥಾನದ ಒಬ್ಬ ಸಚಿವ
ತಾಯಿ	ಕಾಳಿದಾಸನ ತಾಯಿ
ಮಾಲತಿ, ಮಂಜರಿ	ಭರತಪುರದ ರಾಜನ ಜವಳಿ ತಂಗಿಯರು; ಮಾಲತಿ ಕಾಳಿದಾಸನ ಹೆಂಡತಿ
ಅರಸ	ಭರತಪುರದ ರಾಜ
ಋತ್ವಿಕ	ಉಜ್ಜಯಿನಿ ಅರಮನೆಯ ಧರ್ಮಾಧಿಕಾರಿ, ರಾಮಗಿರಿ ಗುರುವಿನ ಜ್ಞಾತಿ (ಸೋದರ)
ಯಜಮಾನಿ	ಋತ್ವಿಕನ ಹೆಂಡತಿ
ಪ್ರಭು	ಮಾಲವದೇಶದ ಚಕ್ರವರ್ತಿ
ಕವಿಶೇಖರ	ಉಜ್ಜಯಿನಿಯ ಪ್ರಭುವಿನ ಆಸ್ಥಾನ ಕವಿಗಳ ಗೋಷ್ಠಿ ಪ್ರಮುಖ
ಶರ್ಕರಕ, ವನಮಾಲ, ಚಂದ್ರಾಂಶು	ಆಸ್ಥಾನದ ಕವಿಗಳು
ಒಡತಿ	ಉಜ್ಜಯಿನಿ ಅರಮನೆಯ ನೃತ್ಯಗೀತ ಶಾಲೆಯ ಪಾಲಕಿ
ರಾಣಿ	ಪ್ರಭುವಿನ ಪತ್ನಿ
ಗೊತ್ತುಗಾತಿ	ಅರಮನೆಯ ಚೇಟಿ
ಮಾಧವೀ	ಪ್ರಭು ರಾಣಿ ಇವರ ಕಿರಿಯ ಮಗಳು
ವಿಷ್ಣುಶರ್ಮ	ಗುರುವಿನ ಸೋದರಳಿಯ ಮತ್ತು ಅಳಿಯ; ಅಪರ್ಣಾಳ ಗಂಡ
ಕುಮಾರ	ಮಂಜರಿಯ ಗಂಡ
ಸೇವಕ	ಅರಮನೆಯ ಒಬ್ಬ ಕಂಚುಕಿ
ಅರ್ಚಕ	ಮಹಾಕಾಳ ದೇವಾಲಯದ ಒಬ್ಬ ಸೇವಕ

ಕಾಳಿದಾಸ

ಸೂತ್ರಧಾರ

ಭರತವರ್ಷದ ಕಾವ್ಯಲೋಕದಲಿ ಗೀರ್ವಾಣ
ಸಾಹಿತ್ಯ ಅತ್ಯಂತ ಪ್ರಾಚೀನ. ವೇದಗಳ
ದ್ರಷ್ಟಾರ ಋಷಿವರೇಣ್ಯರು ನಮ್ಮ ಕವಿಕುಲದ
ಆದಿಪುರುಷರು. ಬಳಿಕ ಅಂತೇ ಮಹರ್ಷಿಗಳು,
ರಾಮಾಯಣದ ಮಹಾಭಾರತದ ರಚಯಿತರು,
ಆದಿಕವಿ ವಾಲ್ಮೀಕಿಗಳು, ವ್ಯಾಸಮುನಿವರರು,
ಪರಮಪೂಜ್ಯ ಸ್ಥಾನಗಳನಲಂಕರಿಸಿಹರು.
ಈ ಮಹಾತ್ಮರ ಬಳಿಕ ಬಂದ ಕವಿಗಳ ಜನರು
ಋಷಿ ಎಂದು ಕರೆದಿಲ್ಲ. ಋಷಿಯಲ್ಲದವನಿಂದ
ಕಾವ್ಯವಾಗದು ಎಂದು ಪೂರ್ವಿಕರ ವಚನ ಇದೆ.
ಎನೆ, ಯೋಗ್ಯಕವಿ ಎಲ್ಲ ಅಂತರ್ಯದಲಿ ಋಷಿ.
ಗೀರ್ವಾಣ ಸಾಹಿತ್ಯದಿಂಥ ಕವಿಪಂಕ್ತಿಯಲಿ
ಪ್ರಾಜ್ಞರೊಮ್ಮತದಿಂದ ಕವಿ ಕಾಳಿದಾಸನಿಗೆ
ಅಗ್ರಪೀಠವ ಸಲ್ಲಿಸಿಹರಲೆ. ಮಹಾಕವಿ
ಈತನನು ಕುರಿತು ಇತಿಹಾಸ ತಿಳಿಸುವ ವಿವರ
ಬಹು ಕಡಮೆ. ಜನಜನಿತ ದಂತಕಥೆ ಹಲವಿಹವು.
ಕವಿಯ ಕೃತಿಗಳಲಿ ಅಲ್ಲಲ್ಲಿ ಅವನಭಿರುಚಿ
ಅನುಭವವ ಕುರಿತ ವಿವರಗಳು ತಲೆ ಇಕ್ಕಿಹವು.
ವಿವರ ಕತೆ ಸೂಚನೆಗಳಿವನೆಲ್ಲ ಆಧರಿಸಿ
ವಿವರ ಕೆಲವನು ಬಿಟ್ಟು ಬೇರೆಯವ ಮಾರ್ಪಡಿಸಿ
ಊಹೆಯಲಿ ನಿರ್ಮಿಸಿದ ಹಲವು ವಿಷಯವ ಬೆರಸಿ

ಎಲ್ಲ ಅಂಶವ ಸಮನ್ವಯಗೊಳಿಸಿ ಕವಿವರನ
ಜೀವನದ ಚಿತ್ರವನು ಕೊಡುವ ದೃಶ್ಯವಿದೊಂದ
ತಮ್ಮೆದುರು ತೋರಲಿರುವೆವು. ದೋಷ ಏನಿಹವು
ಅವನು ಮನ್ನಿಸಿ, ಅಲ್ಪಗುಣ ಏನು ಇರಬಹುದು.
ಅವನು ಸಹೃದಯದಿಂದ ಹಿರಿದೆಂದು ಭಾವಿಸಿ,
ತಾವು ಸಂತಸಗೊಂಡು ನಮ್ಮ ಸಂತಸಪಡಿಸಿ
ಎಂದು ಬೇಡುವೆವು.

ಈ ನಾಟಕದ ಭೂಮಿಕೆ
ಇಂತಿಹುದು.

ಕಾಳಿದಾಸನ ಹುಟ್ಟುನೆಲ ನಮ್ಮ
ಭರತವರ್ಷದ ಮಧ್ಯಭೂಮಿ ಮಾಲವದೇಶ.
ಅದನೊಬ್ಬ ಚಕ್ರಾಧಿಪತಿ ಆಳುತಿರುವನು.
ಉಜ್ಜಯಿನಿ ಚಕ್ರವರ್ತಿಯ ರಾಜಧಾನಿ. ಆ
ದೇಶದಲಿ ಹಲವು ನಾಡಿಹವು. ಅವುಗಳಲೊಂದು
ರಾಮಗಿರಿ ನಾಡು. ನಾಡಲಿ ಐದು ಸೀಮೆ ಇವೆ.
ರಾಮಗಿರಿ, ಸೀತಾದ್ರಿ, ಅನುಜಗಿರಿ, ಭರತಾದ್ರಿ,
ಅರಿಹಾದ್ರಿ. ಒಂದೊಂದರಲು ಒಬ್ಬ ಕಿರಿಯರಸ.
ರಾಮಗಿರಿ, ಜಾನಕೀಪುರ, ಅನುಜಪುರ, ಐದಿಯ
ಭರತಪುರ, ಅರಿಹಾರ, ಅವರ ಪಟ್ಟಣಗಳು.
ರಾಮಗಿರಿ ಕಾಳಿದಾಸನ ಊರು. ಅವನದರ
ಅರಗುವರ. ತಂದೆಯನು ಕಳೆದುಕೊಂಡಿಹ ತರುಣ
ಇನಿತರಲೆ ಅರಸಾಗಬೇಕು. ಜನ್ಮತಃ ಕವಿ.
ಅರಮನೆಯ ಗುರು ಇವನ ಕವಿಯಾಗಿ ಬೆಳೆಸಿಹನು.
ಭರತಪುರದಲಿ ಒಬ್ಬ ಅರಸ. ಕೆಲವೇ ವರ್ಷ
ಹಿರಿಯ ಇವನಿಗೆ. ಇವರ ಹಿರಿಯರಲಿ ಈ ಮುನ್ನ
ವಿರಸವಿದ್ದುದು ಉಂಟು. ಭರತಪುರದರಸನಿಗೆ
ಯಮಳ ಸೋದರಿಯರಿಬ್ಬರು ಇಹರು. ಚೆಲುವೆಯರು.

ಇರುತ ಬಹು ಜಂಭಪವರೆಂದು ಹೆಸರಾದವರು.
ಇನಿಸು ದುಡುಕುವರು ಸಹ. ಅವರಲ್ಲಿ ಹಿರಿಯಳು
ಕಾಳಿದಾಸನನೊಮ್ಮೆ ನೋಡಿ ಅವನನು ತಾನು
ಹಸೆ ನಿಲಲು ಬಯಸುವಳು. ಅವಳಣ್ಣ ಇದ ತಿಳಿಸಿ,
ನಮ್ಮ ಹಿರಿಯರ ನಡುವೆ ಬೆಳೆದಿದ್ದ ವಿರಸ ಅದು
ಅವರೊಡನೆ ಮುಗಿಯಿತೆಂದೆಂಬ, ಸೀಪೀ ನನ್ನ
ತಂಗಿಯನು ಮದುವೆಯಾಗಿರಿ, ಎಂದು ಇವನಿಗೆ
ಬಿನ್ನಹವ ಕಳುಹುವನು. ಕಾಳಿದಾಸನ ತಾಯಿ,
ಅರಮನೆಯ ಗುರು ಒಬ್ಬ ವೃದ್ಧರು, ಇದನೊಪ್ಪಿ
ಮದುವೆ ನಡೆಯುವುದು. ಮದುವೆಯ ಮಾರನೆಯ ದಿವಸ
ತಾಯಿ, ಗುರು ಭರತಪುರದಿಂದ ಊರನು ಕುರಿತು
ಪಯಣವನು ಬೆಳೆಸುವರು. ಅರಸ ಬೇಡಿದನೆಂದು,
ಮದುಮಗಳು ಪತಿಯೊಡನೆ ಅಲ್ಲಿನ್ನು ಮೂರುದಿನ
ಅಣ್ಣನೊಡನಿದ್ದು ಆ ಬಳಿಕ ಊರಿಗೆ ಬರಲಿ
ಎಂದೊಪ್ಪಿ ಹೊರಡುವರು. ಮದುಮಗಳ ಸೋದರಿ,
ಅವಳಂತೆಯೇ ಕಾಣುವವಳು, ಚೆಲ್ಲಾಟದಲಿ
ತುಂಟಮಾತಾಡಿ ಭಾವನ ಮನವ ಕೆಡಿಸುವಳು.
ಸತಿಯಂತೆಯೇ ಕಾಂಬ ಇವಳು ತಾ ಹಸೆನಿಂದ
ತರುಣಿಯೇ ಎಂದು ಭಾವಿಸಿ ಅವಳ ಈ ಭಾವ
ತನ್ನ ಸತಿ ಬಹು ಅಹಂಕಾರಿ ಎಂದೆಣಿಸುವನು.
ಆ ಬಳಿಕ ಸತಿ ತಾನು ಅವನ ಕಂಡುದು ಎಂದು
ಎಂದು ಸಂದರ್ಭವನು ಬಣ್ಣಿಸಲು ಇವಳೊಬ್ಬ
ವೇಶ್ಯೆ ಎಂದೇ ಅವನು ಮನದಿ ನಿಶ್ಚಯಿಸುವನು.
ಅವಳಣ್ಣ ತಮ್ಮ ಮನೆತನಗಳಲಿ ಬೆಳೆದಿದ್ದ
ಹಗೆಯ ಮನಸಿನಲಿಟ್ಟು ಅದನು ತೀರಿಸಿಕೊಳಲು
ತನಗೊಬ್ಬ ಗಣಿಕೆಯನು ಕೊಟ್ಟು ಹಸೆನಿಲಿಸಿಹನು,
ಈ ಹಿಂದೆ ಇವನಜ್ಜ ತನ್ನ ಹಗೆಯೊಬ್ಬನಿಗೆ

ಇಂತು ಮಾಡಿದನೆಂದು ಚರಿತೆಯಲಿ ಕತೆ ಇಹುದು,
ಇವನು ಅಜ್ಞನ ದುಷ್ಟತನವ ಪ್ರತಿಮಾಡಿಹನು,
ಇವನ ಈ ವಂಚನೆಗೆ ಏಕ ಪ್ರತಿಕ್ರಿಯೆ,
ಇವಳ ತೊರೆದೆತ್ತಲೋ ತೊಲಗಿ ಹೋಗುವುದೊಂದೆ,
ಎಂದು ಮನಮಾಡಿ ದೇಶಾಟನದಿ ತೊಡಗುವನು.
ಐದು ವರುಷದ ಬಳಿಕ ಉಜ್ಜಯಿನಿಗೈತಹನು.
ಐದು ವರುಷದ ಕಾಲ ಕವಿಶಕ್ತಿ ಬೆಳೆದಿರಲು
ಅರಸುತನಕಿಂತ ರುಚಿ ಹಿರಿಯು ಕವಿ ಆಗುವುದು
ಎಂದು ನಿರ್ಣಯಿಸಿ, ತಾನಾರೆಂದು ತಿಳಿಸದೆ
ಉಜ್ಜಯಿನಿಯಲಿ ಚಕ್ರವರ್ತಿಯಾಸ್ಥಾನದಲಿ
ಕವಿಯಾಗಿ ಸೇರುವನು. ಇವನು ಸತಿಯನು ತೊರೆದು
ಹೋದ ದಿನ ಇವನ ನಾದಿನಿ, ತನ್ನ ಸೋದರಿ,
ಕಾಳಿದಾಸನ ಪತ್ನಿ, ಗಂಡ ತನ್ನನು ಬಿಟ್ಟ
ಎಂಬ ದುಃಖದಲಿ ಅಗ್ನಿಯ ಹೊಕ್ಕು ಸತ್ತಳು,
ಎಂದು ಕತೆಯನು ಹುಟ್ಟಿಸಿದಳು. ಇದು ದಿಟ ಎಂದು
ಜನವೆಲ್ಲ ನಂಬಿಹರು. ಕವಿ ಕಾಳಿದಾಸ ಇದ
ಕೇಳುವನು ; ಜೊತೆಗೆ ಆ ತನ್ನ ಸತಿ ದಿಟದಲೇ
ಅರಗುವರಿ, ಗಣಿಕೆಯಲ್ಲೆಂಬುದನು ತಿಳಿಯುವನು.
ಕವಿಯ ಋತುಸಂಹಾರ ಕಾವ್ಯವನು ಪ್ರಭು ಮೆಚ್ಚಿ
ದೇಶದ ನಿವಾಸಿ ಕವಿಗಳಿಗೆ ವಿದ್ವಾಂಸರಿಗೆ
ಪ್ರತಿಗಳನು ಕಳುಹಿರಿ ಎಂದು ಕವಿಮುಖ್ಯನಿಗೆ
ಬೆಸಸುವನು. ಒಂದು ಪ್ರತಿ ರಾಮಗಿರಿಗೈತಹುದು.
ಕಾಳಿದಾಸನ ತಾಯಿ ಆ ಮುನ್ನ ತೀರಿಹಳು.
ಗುರು ಕಾವ್ಯವನು ನೋಡಿ ತನ್ನ ಶಿಷ್ಯನ ರಚನೆ
ಎಂದು ಗುರುತಿಸಿ ಅವನ ಕಾಣಲಾಶಿಸಿ ಒಡನೆ
ಉಜ್ಜಯಿನಿಗೈತಹನು. ಇದರ ಪರಿಯನು ತಿಳಿದು,
ಕಾಳಿದಾಸನ ಪತ್ನಿ ಮನೆಯ ಗುರು ಇವನೊಡನೆ

ನಗರಿಯನು ಸಾರುವಳು. ಈ ದಿನಗಳಲಿ ಕವಿ,
ತಾ ನೆನೆಯದಿದ್ದ ಮಟ್ಟದಲಿ ಮನ್ನಣೆಗಳಿಸಿ,
ನೆನೆಯದಿದ್ದಿನ್ನೊಂದು ತೆರದಿ ಬೇಸರಗೊಂಡು,
ಆಸ್ಥಾನವನು ತೊರೆದು ನಡೆಯುವನು. ಕವಿ ಪತ್ನಿ,
ಚಕ್ರವರ್ತಿಯ ಪತ್ನಿ ತನ್ನ ಬಂಧುವ ಕಂಡು
ಪತಿಭಿಕ್ಷೆ ಬೇಡುವಳು. ದೈವ ಕೃಪೆ ಅಂತಿರಲು
ನಮ್ಮ ಕವಿ ನಗರದ ಸಮೀಪದ ಮಹಾಕಾಳ
ಕ್ಷೇತ್ರದಲಿ ಇಹನೆಂದು ತಿಳಿಯುವುದು. ಬಹುಕಾಲ
ಅಗಲಿದ್ದ ಪತಿಪತ್ನಿ ದೈವ ಸಾನ್ನಿಧ್ಯದಲಿ
ಮರಳಿ ಜೊತೆಗೂಡುವರು. ಎಲ್ಲವೂ ಚೆನ್ನಹುದು.

ಅಂಕ ಒಂದು

ಸ್ಥಾನ ೧

ರಾಮಗಿರಿಯ ಊರ ಮುಂದಿನ ತೋಪು; ಬಾವಿ. ತೋಪಿನ ಅಂಚಿನಲ್ಲಿ **ಕಾಳಿದಾಸ** ಜೊತೆಯ ಕಿರಿಯರೊಂದಿಗೆ ಇದಾನೆ. ಗುರು ಅವನೆಡೆಗೆ ಬರುತ್ತಾನೆ. ಎದುರಲ್ಲಿ ಇಬ್ಬರು ಹುಡುಗರು ಇಬ್ಬರು ಹುಡುಗಿಯರು ಒಂದು ಬದಿಗೆ ನಿಂತು ಇವರ ಕಡೆ ನೋಡುತ್ತಿದಾರೆ. ಗುರು ಬಂದಂತೆ

ಕಾಳಿದಾಸ.—ಗುರುಗಳಿಗೆ ವಂದನೆ. ದಯಮಾಡಿ.

ಗುರು.— ಶುಭಮಸ್ತು.
ಏನು ಅಣ್ಣಯ್ಯ ನೀನೀಗ ನಡಸುತಲಿರುವ
ಅಭ್ಯಾಸ ಇದು? ಬಂದು ನೋಡಿ ಎಂದೆಯೆ. ಬಂದೆ
ನೋಡೋಣ ಎಂದು.

ಕಾಳಿದಾಸ.— ಋತುಗಳ ದೊರೆ ವಸಂತನಿಗೆ
ವನದೇವಿ ಎಂತು ಒಳ್ಬರವ ನೀಡಿದಳೆಂದು
ವರ್ಣಿಸುವ ಪದ್ಯವನು ಬರೆದಿಹೆನು. ಅದನಿವರು
ಕಲಿತಿಹರು. ಆಟದಲಿ ತೋರುವರು. ಆದ ತಾವು
ನೋಡಲೆಂದೆನ್ನಾಸೆ. ಅದರಿಂದ ಕರೆದೆನು.

ಗುರು.—ಸಂತೋಷ ಅಣ್ಣಯ್ಯ. ಪದ್ಯವನು ಹೇಳಿಸು.

ಕಾಳಿದಾಸ.—(ಮಕ್ಕಳಿಗೆ)

ಎಲ್ಲಿ ಪದ್ಯವ ಹೇಳಿ ಗುರುಗಳಿಗೆ ಕೇಳಿಸಿರಿ.

ಮಕ್ಕಳು.—"ಏನೇ ವಕುಳಾ !" "ಏನಕ್ಕ ಪಾದರಿ !"
"ನಗೆಮೊಗವಾಗಿಹೆಯೇ ಕಿರಿ ಸೋದರಿ."
"ನಿಮಿಷಕೆ ಹಿಂದೆ ದಕ್ಷಿಣ ಮಾರುತ
ಕುಸುಮಾಕರ ನೈತರವನು ಸಾರುತ
ಹರಿವನು ಅಕ್ಕಾ. ಜೊತೆಗಿದ ಸಾರಿ
ಎಂದನು. ಕೇಳುತ ಸಂತಸ ಮಿಾರಿ
ನಗುತಿಹೆ ನಾನು." "ಒಳ್ಳೆಯ ಸುದ್ದಿ.
ಎಲ್ಲರು ಬಲ್ಲೆವು ನಿನ್ನತು ಬುದ್ಧಿ
ಬಹು ಬಹು ಸೂಕ್ಷ್ಮ. ಅದರಿಂದವನು
ಸಾರಲು ಬಯಸಿದ ಸುದ್ದಿಯ ಹವಣು
ಮೊಟ್ಟ ಮೊದಲಿಗೇ ನಿನ್ನನು ಸೋಕಿತು."
"ಬಿಡಿಬಿಡಿ ಅಕ್ಕಾ, ನಿಮ್ಮಲಿ ಏಕಿದು
ತಂಗಿಯ ಬುದ್ಧಿಯ ಸೂಕ್ಷ್ಮದ ಮಾತು ?
ಹಿರಿಯರು ನೀವು ವರ್ಷವು ನೋತು
ಬರಲೆಂದೆಳಸಿರೆ ಬರುತಿಹನಿನಿಯು.
ಅವನಾ ದೂತನ ಸಾರುವ ದನಿಯು
ಅವನೈತಹ ದಾರಿಯು ಬದಿಗಿದ್ದು
ಮೊದಲಲಿ ಕೇಳಿದೆ. ಇದು ಇಹ ಹುರುಳು.
ಇದ ನನ್ನಕ್ಕರೆಯಕ್ಕನ ಕರುಳು
ತಂಗಿಯ ಬುದ್ಧಿಯ ಸೂಕ್ಷ್ಮ ಎನುತಿದೆ."
"ಒಳ್ಳಿತು. ದೊರೆಯೈತರುತಿಹ ಸುದ್ದಿಯ
ಎಲ್ಲೆಡೆ ಹರಡು. ಕಾನನ ನಿದ್ದೆಯ
ತೊರೆದೆದ್ದೇಳಲಿ. ಕೆಳೆ ಜೊತೆಗೂಡಲಿ.
ಬರುವರಸಗೆ ಸುಸ್ವಾಗತ ನೀಡಲಿ."

ವಕುಳದ ಬುಡದಲಿ ಕುಳಿತಿಹ ನಾನು,
ಹೂಗಳು ಮಾತಾಡುವುವೆ ಇದೇನು,
ಎನ್ನುತ ಸೋಜಿಗದಲಿ ಕಿವಿಗೊಟ್ಟು
ಈ ಪರಿಯರಿತೆನು. ಆಕ್ಷಣ ಒಟ್ಟು
ವನವನು ವಕುಳದ ಸಂತಸ ತಟ್ಟಿ
ಶಿಶಿರದ ನಿರಾಶೆಯನು ಹೊರಗಟ್ಟಿ
ಹರ್ಷದೊಳಾಳಿತು: ಆಲ, ಬೇಲ,
ಮಾವುಬೇವು, ಅಶ್ವತ್ಥ ತಮಾಲ,
ಕಗ್ಗಲಿ, ಚುಜ್ಜಲು, ಗೊಬ್ಬಳಿ, ಗೋಣಿ,
ಮರ ನೂರಿಂಥವು, ಮನುಜನವಾಣಿ
ಕಾಣದ ಹೆಸರವು, ಪೊದೆ ಗಿಡ ಬಳ್ಳಿ,
ಅಂತೇ ನೋಡಲು ಜೊಂತೆಯ ಕಳ್ಳಿ,
ನಾಗದಾಳಿ ಕತ್ತಾಳೆಯು, ಒಪ್ಪಿದೆ
ಎನ್ನುತ ನಕ್ಕು ಚಿಗಿದವು ತಪ್ಪದೆ.
ವನ ಚೇತನಗಳ ಹರ್ಷವ ನೋಡಿ
ನನ್ನೆದೆಯಲಿ ಸಂತಸ ಮಡುಗೂಡಿ
ನುಡಿಕಗ್ಗದ ಈ ಹಾಡನು ಹಾಡಿ
ಕವಿಯೆನ್ನಲು ಬಾರದ ತಿಳಿಗೇಡಿ
ನಲಿದೆನು. ನೀವೂ ಕುಸುಮಾಕರನ
ಮೋಡಿಯ ಮೋಹಕ ಶಕ್ತಿಯ ತೆರನ
ಕೊರಡಿದು ಕೊನರಿರುವುದರಲಿ ನೋಡಿರಿ.
ನೀವೂ ಅವನ ಅನುಗ್ರಹ ಬೇಡಿರಿ.
ಏನೇ ಬೇಸರ ಇರೆ ಅದ ಮಾಣಿರಿ.
ಬಾಳಲಿ ಸಂತಸ ಇರುವುದ ಕಾಣಿರಿ.
ಉಕ್ಕಲಿ ಲೋಕದ ಹೃತ್ಪರಿತೋಷ
ವಸಂತ ರಾಜನ ವಿಜಯದ ಘೋಷ.

(ಮಕ್ಕಳು ಹಾಡುವುದನ್ನು ನಿಲ್ಲಿಸುತ್ತಾರೆ.)

ಗುರು.—ರಚನೆ ಮುಗಿಯಿತು ಅಲ್ಲ ?

ಕಾಳಿದಾಸ.— ಮುಗಿಯಿತು ಗುರುಗಳೆ.

(ಸ್ವಲ್ಪ ಹೊತ್ತು ತಡೆದು, ಗುರು ಏನೂ ಹೇಳಲಿಲ್ಲವೆಂದು ಗ್ರಹಿಸಿ)
ರಚನೆ ತಮಗೊಪ್ಪಿತೇ ?

ಗುರು.— ಒಪ್ಪದಿರುವುದೆ, ಕವಿ ?
ನಿನ್ನನೊಪ್ಪಿಹ ನನಗೆ ನಿನ್ನೆಲ್ಲ ರಚನೆಯೂ
ಒಪ್ಪಹುದೆ ದಿಟ. ಹಸುಳೆ ನುಡಿದ ತೊದಲನು ತಾಯಿ
ಮೆಚ್ಚಿಕೊಂಬಂದ ನಾ ನಿನ್ನ ನುಡಿಯನು ತೀರ
ಎಳೆತನದ ದಿನದಿಂದ ಮೆಚ್ಚಿಯೇ ಬಂದಿಹೆನು.
ಇಂತಿರುತ ಬೆಳೆದ ಮಗು ನುಡಿವ ಜಾಣಿನ ನುಡಿ
ತಾಯ್ಗೆ ಮೆಚ್ಚದೆ ಇಹುದೆ ? ನಿನ್ನ ಈ ಅನುಭವ
ಕವಿಯಾದವನಿಗೆ ವಿಲಾಸಲು. ಅಲ್ಲದಾತನಿಗೆ
ಏನೆಗೆಯ್ಯಲಿ ಲಭ್ಯವಲ್ಲ. ನೀ ಒಂದುದಿನ
ಕೊಳದ ನೀರಿನಮೇಲೆ ಮಂಜು, ಹೊಗೆಯೆಂಬಂದ,
ಮುಚ್ಚಿರಲು, 'ಅಜ್ಜ, ಕೊಳದಡಿಗೆ ಉರಿಯನು ಹಾಕಿ
ನೀರು ಕಾದಿದೆಯು' ಎಂದುದು ನಿನಗೆ ನೆನಪಿಪೆಯೆ ?
ಇನ್ನೊಮ್ಮೆ ಇರುಳಿನಲಿ ನಕ್ಷತ್ರಗಳ ನೋಡಿ,
ಬಾನ ಮುಚ್ಚಳದಾಚೆ ತುಂಬಿರುವ ಬೆಳಕು ಅದು,
ನಮಗೆ ಕಂಡಿಗಳಿಂದ ಕಾಣುತಿದೆ, ಎಂದೊರೆದೆ.
ಮತ್ತೊಮ್ಮೆ ಗಿರಿಯಿಂದ ಉತ್ತರಕೆ ಹರಿಯುತಿಹ
ಮೋಡಗಳ ನೋಡಿ, ' ಈ ಮೋಡಗಳ ಹಿರಿಹಿಂಡು
ಇದ ನಡೆಸಿಕೊಂಡು ಹೋಗುವರಾರು ಕಾಣರು '
ಎಂದು ಹೇಳಿದೆ. ಗಿರಿಯ ದೇಗುಲಕೆ ಹೋದಂದು,
ಹೆಂಡತಿಯ ಬಿಟ್ಟು ದುಃಖಿಸಿದ ಯಕ್ಷನ ಕತೆಯ
ಕೇಳಿ ಆವನೀಗಲೂ ಇಲ್ಲಿಹನೆ ಎಂದವನ
ಹುಡುಕ ನೋಡಿಪೆ. ಇಂಥ ಮನ ಕವಿಯ ಮನ, ಅಪ್ಪ

ಕಾಳಿದಾಸ.—ಸಂತೋಷ ಗುರುಗಳೆ. ಈಗ ನಾನೇನು ಅದು,
ದೈವ ನಿರ್ಮಿಸಿದ ಶಿಲೆ, ತಾವು ಕಡೆದಿಹ ರೂಪು.
ನನ್ನೆಲ್ಲ ಗೆಯ್ಮೆಯಲಿ ನಾನು ಇದು ಗುರುಗಳಿಗೆ
ಚೆನ್ನವೆನಿಸಲಿ ಎಂದು ಬಯಸುವೆನು.

ಗುರು.— ಅಣ್ಣಯ್ಯ,
ನಿನ್ನ ಇಂದಿನ ಕವಿತೆ ನಿನ್ನ ಅನುಭವ ಹರೆಯ
ಇವಕೆ ಒಪ್ಪುವ ಕವಿತೆ. ದಿನ ಕಳೆದಿರಲು, ಬಾಳು
ಅನುಭವದಿ ಪಳಗಿರಲು, ಅದಕೆ ತನ್ನಂತೆ ಅದು
ಆನಂದ ಖೇದ ಆಶ್ಚರ್ಯ ಗಾಂಭೀರ್ಯವನು
ಪಡೆಯುವುದು. ಇನಿತೆ ಎಲ್ಲಾ ಹೊತ್ತಿನಲು ನೀನು
ನಿನ್ನ ಅನುಭವವ ನುಡಿ, ಅದನು ನಿಜವಾಗಿ ನುಡಿ.
ನಿಜವಾಗುವಂತೆ ನುಡಿ ಚೆನ್ನವೂ ಆಗಿರಲಿ.
ಅನುಭವದ ದಿಟ ಎಲ್ಲ ದಿಟದ ಕವಿತೆಯ ತಿರುಳು.
ಊಹೆ ತಹ ಅನುಭವದ ಸೋಗು ಕವಿತೆಯ ಟೊಳ್ಳು
ಮಾಡುವುದು. ನಿನ್ನ ಕೃತಿ ಈ ತೆರನ ಟೊಳ್ಳಲ್ಲ.
ಇದು ನನಗೆ ಸಂತೋಷ. ಕವಿಯಹೆನು ಎನ್ನುವನು
ರಚನೆಯಲಿ ಪೂರ್ವಕವಿಗಳಲಿ ಉನ್ನತರಹರ
ಮೇಲ್ಪಂಕ್ತಿಯನು ಹಿಡಿದು ನಡೆಯುವುದು ಒಳ್ಳಿತು.
ಇಂತು ನಡೆಯುತಲಿಹೆನೆ ಎನ್ನುವುದು ತಿಳಿವುದಕೆ
ಸಹೃದಯರಿಗದು ಎಂತು ಕಾಂಬುದದ ಕೇಳುವುದು
ಸರಿ. ಇರಲಿ.
ಇಂದು ಈ ಮಾತನೆತ್ತಿಹೆನಾಗಿ
ಎರಡು ವಿವರವ ನಿನಗೆ ತಿಳಿಸ ಬಯಸುವೆನಪ್ಪ.
ಈಗಲೇ ತಿಳಿಸಲೇ? ನಿನಗೆ ಬೇರೆಯ ಕೆಲಸ
ಇರೆ ಹೇಳು. ಆಮೇಲೆ ತಿಳಿಸುವೆನು.

ಕಾಳಿದಾಸ.— ಬೇರೆಯದು
ಅಂತಪ್ಪ ಕೆಲಸ ಏನಿದೆ ನನಗೆ? ತಮ್ಮ ಮನ

ಏನು ಅದ ತಿಳಿಯುವುದು ನನಗೆ ದಿಟದಲಿ ಹಬ್ಬ !
ಗುರು.—ಒಳ್ಳಿತು. ದೈವ ಯಾವನನು ಕವಿಯಾಗೆಂದು
ಜಗಕೆ ಕಳುಹುವುದು ಅವನನು ತುಂಬು ಕಷ್ಟದಲಿ
ನಡೆಸುವುದು. ಕವಿ ಮನದ ಎಲ್ಲ ಅನುಭವ ತೀವ್ರ.
ಒಂದು ಕೇಡನು ನೋಡಿ ಸಾಮಾನ್ಯ ಜನ ನಾವು
ಪಡುವ ನೋವಿನ ಹತ್ತು ಮಡಿಯು ಕವಿ ನೋಯುವನು.
ಹುಟ್ಟು ಕವಿಯಾದವನ ಕರಣಗಳ ಪಾಟವ
ಸಾಮಾನ್ಯ ಜನ ನಮ್ಮ ಕರಣಗಳ ಪಾಟವದ
ಹತ್ತುಮಡಿಯಷ್ಟಿಹುದು. ಕರಣ ಎಂತಂತವನ
ಊಹೆಯೂ ತೀವ್ರ. ಅದರಿಂದವನು ಎಲ್ಲೆಡೆಯು
ಇತರರಿಗೆ ಕಾಣದಿಹ ನೂರಾರು ಬಣ್ಣವನು
ಕಾಣುವನು. ಇಲ್ಲದುದನುನ್ಮತ್ತನೆಂಬಂದ
ಇದೆಯೆಂದು ಭ್ರಮಿಸುವನು. ತನಗೆ ತಾನೇ ತನ್ನ
ಸ್ವರ್ಗವನು ನರಕವನು ಮನದಿ ಕಲ್ಪಿಸಿಕೊಂಡು
ನಲಿಯುವನು ತೊಳಲುವನು. ಇಂಥ ಕವಿ ಉಸಿರೊಂದು
ನಿನ್ನುಸಿರು. ಕವಿಮನಕೆ ಎಳೆತನದಿ ಸೊಗವೀವ
ಚೆಲುವು ಸೊಗಸು ವಿಲಾಸ ಬಾಳುವೆಯ ಒಂದಂಗ.
ಅದು ಮನವ ಮುಟ್ಟಲೇ ಬೇಕು. ಆದರೆ ಅದು
ಬಾಳುವೆಯ ಒಂದಂಗ ಅಸಿತೆ. ಉಳಿದವು ಅಂಗ
ಹಲವಿಹವು. ಕವಿಜನ್ಮ ಸಫಲವಾಗಲಿ ಎನಲು
ಕವಿಯಾದವನು ಜಗದಿ ತೀವಿರುವ ಕಷ್ಟವನು
ಬೇನೆಯನು ದುಃಖವನು, ದುರ್ಲಕ್ಷ್ಯ ಅಪಮಾನ
ದೌರ್ಜನ್ಯಗಳ ಪರಿಯ, ತಿಳಿಯಲೇ ಬೇಕಣ್ಣ.
ಇವ ತಿಳಿಯುವುದು ಎಂತು ? ಜೊತೆಯ ಜೀವರು ಪಡುವ
ಕಷ್ಟವನು ಬೇನೆಯನು ದುರ್ಲಕ್ಷ್ಯ ದುಃಖವನು
ಅಪಮಾನ ದೌರ್ಜನ್ಯಗಳನು ಗಮನಿಸಬೇಕು.
ಕಂಡ ನೋವೆಲ್ಲವನು ತನ್ನ ಬಾಳಲಿ ಬಂದ

ಅಸುಖ ಎಂಬಂದ ಅನುಭವಿಸಿ ಕವಿಯಾದವನು
ಅನ್ಯರನು ಕುರಿತ ಕನಿಕರದಿ ಕರಗಿರಬೇಕು.
ಕೆಲವೇಳೆ ದೈವ ಈ ಕಷ್ಟವನು ಅವನಿಗೇ
ನೀಡುವುದು. ಬರುವ ದಿನಗಳಲಿ ನಿನ್ನಯ ದೈವ
ನಿನ್ನನೆಂತಹ ನೋವು ಬೇವುಗಳ ಮಧ್ಯದಲಿ
ನಡೆಸುವುದೊ ! ಅಂತಾಯ್ತೆ, ಕವಿಯಾದವನ ಜೀವ,
ಕೆಂಡಗಳ ಹೊಂಡದಲಿ ಬೆಂದುಕ್ಕಿ ತಾನೊಂದು
ಕೆಂಡವೇ ಆದಂತೆ, ಬಣ್ಣ ಬರಲೆಂದೆಳಸಿ
ಮಿಸುನಿ ಮೂಸೆಯ ಹೊಕ್ಕು ಕರಗಿ ನೀರಪ್ಪಂತೆ,
ತನ್ನ ಅನುಭವದಿಂದ ಬೆಂದು ಕರಗಿ ನೊಂದು
ಸೊಕ್ಕಿ, ಸೊಕ್ಕನು ಮಿಕ್ಕು ಉಕ್ಕಿಹುದು. ನೀರಾಗಿ
ಕರಗಿದ್ದು ಮತ್ತೆ ಘನಿಸುವುದು. ಘನಿಸಿದ ಬಳಿಕ
ಅಪರಂಜಿ ಹೊನ್ನಹುದು. ಆದರೇನಣ್ಣಯ್ಯ,
ಹುಚ್ಚನರಿಯಲು ನೀನು ಹುಚ್ಚಾಗು ಎನೆ ದೈವ,
ಅಂತೆ ಆಗಲಿ ಎನ್ನ ಬರುವುದೇ ? ಎನಲಿಲ್ಲ
ಬಿಡುವುದೇ ? ಇದ ನೆನೆದ ಹೊತ್ತಿನಲಿ ನಾ ನಿನ್ನ
ದೈವದಲಿ ಬೇಡುವುದು ಇದು : "ನನ್ನ ಮಗು ಇವನ
ಎಷ್ಟು ಸಾಧ್ಯವೊ ಅಷ್ಟು ಅಲ್ಪವಹ ಕಷ್ಟದಲಿ
ಹಾಯಿಸೋ, ತಂದೆ ; ಹಾಯಿಸುವ ಆ ಹೊತ್ತಿನಲಿ
ಒಳಗಿದ್ದು ಅದ ಸಹಿಸಿಕೊಂಬ ಶಕ್ತಿಯ ನೀಡು."
ನಾನಿನ್ನು ಬಹುಕಾಲ ನಿನ್ನ ಜೊತೆಗಿಹನಲ್ಲ.
ಅದರಿಂದ ಹೇಳುವೆನು. ಎಲ್ಲ ಹೊತ್ತಲು ನೀನು,
"ದೈವ ನನ್ನನು ರಕ್ಷಿಸುತ್ತಿಹುದು," ಎಂದೆಣಿಸು.
ಈ ಭಾವ ಅಂತರ್‍ಯದಲಿ ಭದ್ರವಾಗಿರಲು
ಬಾಳು ತಹ ದುರ್ದೈವ ಏನಿರಲಿ ಎಂತಿರಲಿ
ಧೈರ್‍ಯದಲಿ ನಡೆಯುವುದು ಸಾಧ್ಯವಪ್ಪುದು ನಿನಗೆ.
ತಿಳಿಯಿತೇ ?

ಕಾಳಿದಾಸ.— ತಿಳಿಯಿತು.

ಗುರು.— ಎರಡನೆಯ ಮಾತು ಇದು.

ನಿನ್ನ ಕೃತಿ ನಿನಗೆ ಇನ್ನೆನಿತು ಚೆನ್ನೆನಿಸಿದರು
ನೀನದನು ಹೊಗಳುವುದು ಬೇಡ. ಬೇಡದ ಮಂದಿ
ತೆಗಳಿರಲು ಅದ ಸಮರ್ಥಿಸ ತೊಡಗುವುದು ಬೇಡ.
ಇದಕು ಮಿಗಿಲಾಗಿ ನೀ ಬಹು ಉನ್ನತಿಯ ಸಾರಿ
ನಿನಗೆ, ಯಾರೂ ನಿನ್ನ ಸಮನಲ್ಲ ಎನಿಸಿದರು,
ನಿನ್ನ ಎನಿಸಿಕೆ ಅದಕೆ ಮನದಲೆಡೆಗೊಡಬೇಡ.
ಮನ ಇದಕೆ ಒಪ್ಪದೇ, ವಿಧಿಯಿಲ್ಲ, ಎಡೆಗೊಡು ;
ಆದರಾಭಾವನೆಯ ನೀನೆ ನುಡಿವುದು ಬೇಡ.
ಚಕ್ರಾಧಿಪತಿ ಯಯಾತಿಯ ಕತೆಯ ಕೇಳಿರುವೆ.
ಇಂದ್ರಸಭೆಯಲಿ ಅವನ ಜೊತೆ ಒಬ್ಬನಿರಲಿಲ್ಲ.
ದಿಟ. ಇರುತ ತನಗೆ ಸಮ ಇಲ್ಲಿ ಯಾರೂ ಇಲ್ಲ
ಎಂದು ಅವನೆಂದೊಡನೆ ನಾಶವಾಯ್ತಾ ಹಿರಿಮೆ.
ಸತ್ಯವನು ನುಡಿ ಎಂಬ ವಚನ ಸಲ್ಲುವುದಿಲ್ಲ
ಇಲ್ಲಿ, ಕಂಡೆಯ ? ಆದಿಕವಿ ತನ್ನ ರಾಮನನು
ವೀರ್ಯವಾ಼್, ಎಂದು, ಮಹತಾ ಸ್ವೇನ ವೀರ್ಯೇಣ
ನ ತು ವಿಸ್ಮಿತಃ, ಎಂದು ಹೊಗಳಿದನು. ಹನುಮಂತ
ಬೇರೆ ವಾನರ ವೀರ ಯಾವನೂ ಸಾಧಿಸದ
ಸಾಗರೋಲ್ಲಂಘನವ ಸಾಧಿಸಿದ ಮರುದಿವಸ,
ತಾಯ ಸನ್ನಿಧಿಯಲ್ಲಿ, ಸುಗ್ರೀವ ಸಮ್ಮುಖದ
ದಕ್ಷ ವಾನರರಲ್ಲಿ ತಾನೆ ಕಡೆಯವನೆಂದ.
ಅವನ ನುಡಿ ಸುಳ್ಳೇ ? ಅಲ್ಲ. ಅವನ ನಿಸರ್ಗ
ವಿನಯ ಅದನವನ ಮನಸಿಗೆ ಸತ್ಯ ಎನ್ನಿಸಿತು.
ವಿನಯ ಶಕ್ತಿಗೆ ಸಹಜ ಉತ್ಕೃಷ್ಟ ಭೂಷಣ.
ಮೇಲಾಗಿ ಕವಿಯ ರಚನೆಯ ಶಕ್ತಿ ಬೆಳೆವಂತೆ
ಅವನಾತ್ಮ ಒಂದು ತತ್ತ್ವವನು ಮನವರಿಯುವುದು.

ಬರೆಯುವವನು ತಾನಲ್ಲ, ದೈವ. ತಾ ಅದು ಹಿಡಿದ
ಲೆಕ್ಕಣಿಕೆ ಮಾತ್ರ. ಎನೆ, ನಾನು ಬರೆದೆನು ಎಂಬ
ಸಂತಸವೆ ಇಲ್ಲವಾಯಿತೆ, ಎನ್ನ ಬೇಡಣ್ಣ.
ದೈವ ತಾ ಬರೆವ ಬರಹವ ಬರೆಯೆ ನಿನ್ನನು
ಲೆಕ್ಕಣಿಕೆಯಾಗಿರಲು ಆರಿಸಿತು ಎನ್ನುವುದು
ಸಂತಸದ ತುದಿ ಅಪ್ಪ. ಬಹು ದಿವಸದಿಂದ ಇದ
ನಿನಗೆ ತಿಳಿಸುವ ಎಂದು ಕಾದಿದ್ದು, ಇಕೊ ಇಂದು
ತಿಳಿಸಿಹೆನು. ಇದರಿಂದ ನಿನಗೆ ಒಳಿತಾಗಲಿ.
ದಿನದಿನವು ಇದ ನಿನ್ನ ಮನಸಿನಲಿ ತಿರುಹುತಿರು.
ಈ ಎಲ್ಲ ತತ್ತ್ವ ಮನಸಿಗೆ ಪಾಠವಾಗಲಿ.
ಇವನು ಹಿಡಿದೇ ಬಾಳು. ಇವ ಮೀರುವುದು ಬೇಡ.
ಏನೆಂಬೆ?

ಕಾಳಿದಾಸ.— ಏನೆಂಬೆ, ಗುರುಗಳೆ? ಒಪ್ಪಿಹೆನು.
ತಮ್ಮ ಅಪ್ಪಣೆಯಂತೆ ಅಭ್ಯಾಸಮಾಡುವೆನು.
ಅಭ್ಯಾಸ ಸಿದ್ಧಿಸಲಿ ಎಂದು ಹರಸಿರಿ ತಾವು.
ದೈವ ಸಿದ್ಧಿಯನನುಗ್ರಹಿಸುವುದು.

ಗುರು.— ಚೆನ್ನನುಡಿ,
ಅಣ್ಣಯ್ಯ.

ಕಾಳಿದಾಸ.— ಅಕ್ಕ ಯಾರನೊ ಕರೆದುತರುತಿಹರು

ಗುರು.—ಯಾರು? ಅಪರ್ಣಾ?

ಕಾಳಿದಾಸ.— ಅಹುದು.

(ಅಪರ್ಣಾ ಒಬ್ಬ ಅತಿಥಿಯನ್ನು ಕರೆದುಕೊಂಡು ಬರುತ್ತಾಳೆ)

ಅಪರ್ಣಾ.— ಅಣ್ಣಯ್ಯ,
ಪೂಜ್ಯ ಹಿರಿಯರು ಇವರು ನಿನ್ನ ನೋಡಲು ಎಂದು
ಬಂದರು. ಅಮ್ಮಾಜಿ ಇವರ, ಅಪ್ಪನ ನೋಡಿ
ಎಂದುದೇ ನಮ್ಮೆಡೆಗೆ ಕಳುಹಿದರು. ನಾ, ಅಪ್ಪ

ನಿನ್ನೊಡನೆ ಇಲ್ಲಿಹರು. ಎಂಬೆನು. ಹಿರಿಯರು
ಒಮ್ಮೆಗೇ ಇಬ್ಬರನು ಇಲ್ಲಿ ನೋಡುವ ಎಂದು
ಜೊತೆಗೆ ಐತಂದಿಹರು.

ಕಾಳಿದಾಸ.— ಬರಲಕ್ಕ, ಒಳ್ಳಿತು.

ಅತಿಥಿ.—ಆರ್ಯರಿಗೆ ನಮಿಸುವೆನು.

ಗುರು.— ಅತಿಥಿ ದೈವಕೆ ನಮನ.
ದಯಮಾಡಿ ; ಕುಳ್ಳಿರಿ ; ತಮ್ಮ ಪರಿಚಯ ತಿಳಿಸಿ.

ಅತಿಥಿ.—ನೆರೆಸೀಮೆ ಭರತಪುರದರಸರಾಸ್ಥಾನದಲಿ
ನಾನೊಬ್ಬ ಸಚಿವ. ನಮ್ಮರಸರಪ್ಪಣೆ ಹೊತ್ತು,
ತಮ್ಮ ಶಿಷ್ಯರು, ನಾಡ ಪ್ರಭುಕುಮಾರರ, ಕಾಣ
ತಮ್ಮ ಪಟ್ಟಣಕೆ ಬಂದೆನು.

ಗುರು.— ತುಂಬ ಸಂತೋಷ.

ಸಚಿವ.—ಪ್ರಭುಮಂದಿರದಲಿ ಒಡತಿಯರು, ತಮ್ಮ ಕುಮಾರ
ಗೋಪಾಲರೊಡನೆ ವನವೆಡೆಗೆ ಸಾರಿಹರೆಂದು,
ಅವರೊಡನೆ ಆಡಲೆಳಸುವ ಮಾತ ನಾ ತಮ್ಮ
ಗುರುಗಳಲಿ ಬಿನ್ನವಿಸಬಹುದೆಂದು ತಿಳಿಸಿದರು.
ಇಂತಾಗಿ ನಾ ತಮ್ಮ ದರ್ಶನಕೆ ಬಂದಿಹೆನು.

ಗುರು.—ಇನಿತು ನಯವನು ಬಲ್ಲ ಸಚಿವರನು ಪಡೆದಿಹುದು
ನಿಮ್ಮ ಒಡೆಯರ ಭಾಗ್ಯ. ಅರಸರಪ್ಪಣೆ ಏನು ?

ಸಚಿವ.—ಆರ್ಯರಿಗೆ ತಿಳಿದೆ ಇರಬಹುದು ನಮ್ಮರಸರಿಗೆ
ಸೋದರಿಯರಿರುವರಿರುವರು. ತಂದೆ ಪ್ರಭು ಈಗ
ನಾಲ್ಕು ವರ್ಷದ ಹಿಂದೆ ದೈವ ಸನ್ನಿಧಿ ಸೇರಿ
ಕುವರ ಪ್ರಭು ಎಳೆತನದಲೇ ನಾಡರಕ್ಷಣೆಯ
ಕಾರ್ಯವನು, ಅಂತೆ ಮನೆತನದೆಲ್ಲ ಕಾರ್ಯವನು,
ನಡೆಸ ಬೇಕಾಗಿ ಬಂದಿತು. ಹಿರಿಯ ಸೋದರಿಯ
ಮದುವೆಯುತ್ಸವನ ಈವರ್ಷ ನಡಸುವ ಎಂದು
ಅವರು ಮನ ಮಾಡಿಹರು. ತಮ್ಮ ಪ್ರಭುಪುತ್ರರಿಗೆ

ಮದಿವೆಯಹ ಹರೆಯ ಎಂಬುದು ತಿಳಿದು ಅರಸರು,
ಇಲ್ಲಿ ಪ್ರಭುಮಂದಿರದಿ ತಮ್ಮಿಚ್ಛೆಯಿಂತೆಂದು
ಬಿನ್ನವಿಸಿ ಇವರ ಮನವನು ತಿಳಿದು ಬರಲೆಂದು
ನನ್ನ ಬಳಿಯಟ್ಟಿದರು. ಇಲ್ಲಿಯೂ ತಂದೆ ಪ್ರಭು
ಈ ಮುನ್ನ ದಿವವ ಸಾರಿಹ ಸಂಗತಿಯನವರು
ಬಲ್ಲರಾದುದರಿಂದ ಅರಗುವರರನೆ ಕಂಡು
ಪ್ರಸ್ತಾಪ ಮಾಡುವುದು ಎಂದೆನಗೆ ಬೆಸಸಿದರು.
ಇಂತಾಗಿ ನನಗೆ ಗುರುಸನ್ನಿಧಿಯ ದರ್ಶನದ
ಈ ಲಾಭ.

ಗುರು.— ಮತ್ತೊಮ್ಮೆ ತಮ್ಮ ಸಂಭಾಷಣೆಯು
ನಯ ನನಗೆ ಆಪ್ಯಾಯಮಾನವಾಗಿದೆಯೆಂದು
ವಿಜ್ಞಪ್ತಿ. ನಮ್ಮ ಪ್ರಭುಪುತ್ರರಿಗೆ ಹಸೆನಿಲುವ
ಹರೆಯ ಸರಿ. ಒಡತಿಯರು ಈ ಮುನ್ನ ಇದಕುರಿತು
ಯೋಚಿಸಿದುದೂ ಉಂಟು. ಇರುತ, ಈ ವ್ಯವಹಾರ
....

(ಮಾತಿನಲ್ಲಿ ಸ್ವಲ್ಪ ತಡೆಯುವನು)

ಸಚಿವ.—ಏನನೇ ತಿಳಿಸಲೂ ಆರ್ಯರಿಗೆ ಹಿಂಜರಿವು
ಬೇಡ. ನಮ್ಮರಸರೂ ಹಿಂದಣವು ಸಂಗತಿಯ
ಕೇಳಿ ಬಲ್ಲರು. ಹಿಂದೆ ಹಿರಿಯರಿಬ್ಬರ ಮಧ್ಯೆ
ನಡೆದ ಅರುಚಿಯ ಮಾತು ಒಂದೆರಡು ಯಾವವವು,
ಅವರ ಮಧ್ಯದ ಮಾತು, ಆ ಮಾತು ಅವರೊಡನೆ
ಮರೆಯಾದವೆಂದು ತಿಳಿಯುವ, ಎಂದು ಇವರಿಚ್ಛೆ.
ಈ ಹದನ ಸುಸ್ಪಷ್ಟಪಡಿಸೆಂದು ದೊರೆ ನನಗೆ
ಬೆಸಸಿಹರು.

ಗುರು.— ತಾವು ಗೋಪಾಲಕರ ಸಂತತಿ
ಇವರು ಕುರುಬರು ಎಂದು ನಿಮ್ಮ ಒಡೆಯರ ತಂದೆ
ಹಳಿದು ನುಡಿದರು. ಅವರ ನುಡಿಯಿಂದ ಮನನೊಂದ

ಇವರ ಹಿರಿಯರು ದೂರ ನಿಂತರು. ಆ ಸುದ್ದಿಯ
ಮರೆವ ಎಂಬರು ನಿಮ್ಮ ಪ್ರಭು.

ಸಚಿವ.— ಅಹುದು.

ಗುರು.— ಒಳ್ಳಿತು.
ನಿಮ್ಮೊಡೆಯ ಸಜ್ಜನರು ಎಂದೆನಗೆ ಕಾಣುತಿದೆ.
ಇಂಥ ಸುದ್ದಿ ಒಂದಲ್ಲ, ಹತ್ತಾದರೂ, ಜನರು
ಮರೆತು ಸೌಹಾರ್ದದಲಿ ಬಾಳುವುದೆ ಮಂಗಲ.
ಒಡತಿಯರಿಗಿದನು ಬಿನ್ನವಿಸುವೆನು. ಅಣ್ಣಯ್ಯ,
ತಾಯವರ ಸನ್ನಿಧಿಯಲೀ ಹದನ ಬಿನ್ನವಿಸಿ
ಅವರ ಅಪ್ಪಣೆ ಏನು ತಿಳಿಯಬೇಕಲ್ಲ?
ಮಂದಿರಕೆ ಹೋಗೋಣವೇ?

ಕಾಳಿದಾಸ.— ಆಯ್ತು, ಗುರುಗಳೆ.

(ಎಲ್ಲರೂ ಹೊರಡುವರು.)

ಸ್ಥಾನ ೨

ರಾಮಗಿರಿಯ ಪ್ರಭುಮಂದಿರದ ಒಂದು ಕೋಣೆ. ಕಾಳಿದಾಸನ ತಾಯಿ. ಗುರು ಕಾಳಿದಾಸ ಇದ್ದಾರೆ.

ತಾಯಿ.— ಇವರ ಹಿರಿಯರು ನಮ್ಮ ಯಜಮಾನರಿಗೆ ಮುದ್ದ್ಯ
ಕುಲದ ಮಾತಿಗೆ ಹಿಂದೆ ವಿರಸ ಮಾಡಿದ ಪರಿಯ
ಈಗಿನೀ ಅರಸ ಎಂಬವರು ಬಲ್ಲರು ಅಲ್ಲ?

ಗುರು.— ಬಲ್ಲನಿತೆ ಅಲ್ಲ. ಆ ಮಾತನಾಡಿದ ಬಳಿಕ
ಕೆಲವೆ ದಿನದಲಿ ತಮ್ಮ ತಂದೆ ತಾವಾಡಿದುದು
ತಪ್ಪು ಮಾತಾಯಿತೆಂಬುದ ಕಂಡುಕೊಂಡರು
ಎಂದು ಹೇಳುವರಂತೆ. ಸಚಿವರಿದ ತಿಳಿಸಿದರು.

ತಾಯಿ.— ಈ ಅರಸನಜ್ಜನೋ ಮುತ್ತಜ್ಜನೋ ಒಮ್ಮೆ
ತನಗಾಗದೊಂದು ಬುಸೆಕನೊಬ್ಬ ತರುಣನಿಗೆ

ತನ್ನ ಮಗಳನು ಕೊಡುವೆನೆಂದು ಆಸೆಯನಿತ್ತು
ಕೆಳಜಾತಿ ಬೇರೆ ಹೆಣ್ಣಾಪ್ಪುದನೊ ಕೊಡಿಸಿದರು
ಎಂದೊಂದು ಕಥೆ ಉಂಟು.

ಗುರು.— ಅಜ್ಜ ಮುತ್ತಜ್ಜರದು
ಕಥೆ ಏನೆ ಇರಲಿ, ಅದನಿವರಿಗನ್ವಯಿಸುವುದು
ಸರಿಯೆನಿಸಲಾರದು. ಈ ಸಚಿವ ಕೃತ್ರಿಮಕೆ
ಎಡೆಗೊಡುವ ತೆರನಲ್ಲ. ಇವರ ನಡೆನುಡಿ ಎಲ್ಲ
ಸತ್ಯವಂತನವೆಂದು ಸುಸ್ಪಷ್ಟ ಕಾಣುವುದು.

ತಾಯಿ.— ಹುಡುಗಿ ತುಂಬಾ ಚೆಲುವೆ ಎಂದು ಜನ ಹೇಳುವುದ
ಕೇಳಿಹೆನು. ಜಾಣೆಯೂ ಅಹುದಂತೆ. ತಾನು ಬಹು
ಜಾಣು ಎಂದವಳು ತಿಳಿದಿಹಳು ಎನ್ನುವರು ಜನ.
ತಾನು ಬಹು ಚೆಲುವೆ ಬಹುಜಾಣು ಎನ್ನುವ ತುಂಬು
ಜಂಬದೀ ಹುಡುಗಿ, ಇವಳನು ಮದುವೆಯಾಗುವೆಯ
ಅಣ್ಣಯ್ಯ ?

ಕಾಳಿದಾಸ.— ನಿನ್ನೊಡನೆ ಮೂರುದಿನ ನಡೆದಿರಲು
ಎಂಥವಳ ಜಂಬಗಾತಿಯು, ಹೆಣ್ಣ ನಡತೆಯಲಿ
ನಯವೆ ಸರಿ, ಜಂಬ ಸರಿಯಲ್ಲ, ಎಂಬುದ ಕಲಿತು
ಸುಗುಣಿಯಾಗುವಳಕ್ಕ.

(ತಾಯಿ ಗುರು ಇಬ್ಬರೂ ನಗುವರು)

ಗುರು.— ದಿಟ ನುಡಿದೆ ಅಣ್ಣಯ್ಯ.
ಮೇಲಾಗಿ, ಮೂರುದಿನ ಅಣ್ಣಯ್ಯನೊಡನಿದ್ದು
ತಾ ಜಾಣೆ ಎಂದುಕೊಳ್ಳುವ ಒಂದು ಕಡು ವೊದ್ದು
ಹೆಣ್ಣು ಇರುವುದು ಸಾಧ್ಯ ಎನ್ನುವಿರ, ಅಮ್ಮಾಜಿ ?

(ತಾಯಿ ಮಗ ನಗುವರು.)

ತಾಯಿ.— ಅಂತಿರಲು ಸಂಬಂಧ ನಮಗೆ ಸಮ್ಮತ ಎಂದು
ಅರಸರಿಗೆ ಗುರು ಹೇಳಿ ಕಳುಹಿಸಿರಿ.

ಗುರು.— ಒಳ್ಳಿತು.

ಸಚಿವರಿಗೆ ಇದ ತಿಳಿಸಿ ನನ್ನ ಮನೆಯಲಿ ಅವರ
ಸತ್ಕರಿಸಿ ಮಧ್ಯಾಹ್ನ ಕಳುಹಿಕೊಡುವೆನು. ಸರಿಯೆ ?

ತಾಯಿ.—ಸರಿ, ಗುರುವೆ. ತಂದೆ ಇಲ್ಲದ ನಿಮ್ಮ ಶಿಷ್ಯನಿಗೆ
ನಿಮ್ಮನುಗ್ರಹ ಸರ್ವದಾ ರಕ್ಷೆಯಾಗಿರಲಿ.

ಸ್ಥಾನ ೩

ಆ ಮಧ್ಯಾಹ್ನ ಗುರುವಿನ ಮನೆ. ಗುರು, ಸಚಿವ. ಸಚಿವ ಊರಿಗೆ ಹಿಂದಿರುಗುವನಾಗಿದ್ದಾನೆ.

ಸಚಿವ.—ತಮ್ಮನುಗ್ರಹದಿಂದ ನಮ್ಮ ಅರಸರ ಇಚ್ಛೆ
ಕೈಗೂಡುವಂತಾಗಿ ಅವರು ನನ್ನನು ತುಂಬ
ದಕ್ಷನೆಂದೆಣಿಸುವರು. ಬಾಳ ಸಾವಿರ ಮುಖವ
ನೋಡಿ ಹಣ್ಣಾಗಿರುವ ತಮ್ಮೆದುರಿನಲಿ ನಾನು
ಮರೆಮಾಚಿ ನುಡಿಯಲೇತಕೆ ? ಬೆಳೆದ ತಂಗಿಯರು
ಮದುವೆಯಾಗದೆ ಇಹರೆ ಎಂದು ನಮ್ಮರಸರಿಗೆ
ಬಹು ಚಿಂತೆ. ಮದುವೆಯಾಗುವೆನೆಂದು ಬಂದವರ
ಹುಡುಗಿಯರು ಅಂತಿಂತು ಕೊಂಕಿನವು ಏತರವೊ
ನುಡಿ ನುಡಿದು ತಬ್ಬಿಬ್ಬು ಮಾಡುವರು. ಈ ಎಗ್ಗ
ಜನರನೊಲ್ಲೆವು ನಾವು ಎನ್ನುವರು. ನಾಲ್ಕು ಸಲ
ಇಂತಾಗಿ, ಐದನೆಯ ಎಗ್ಗನಾಗಿರೆ ಯಾವ
ತರುಣನೂ ಬರಲೊಲ್ಲ. ವರನ ಹಿಡಿಯಲು ಅಣ್ಣ
ಏನ ಮಾಡುವುದೆಂದು ಚಿಂತಿಸುತಲಿದ್ದರು.
ಸ್ಥಿತಿ ಇಂತು ಇರುವಲ್ಲಿ ಹಿರಿಯ ಸೋದರಿಯವರು
ನಾಲ್ಕು ತಿಂಗಳ ಹಿಂದೆ ಅನುಜಪುರಿಯುತ್ಸವಕೆ
ಹೋಗಿದ್ದು ಹಿಂತಿರುಗಿ ಬಂದ ದಿನ ಅಣ್ಣನಿಗೆ,
ತಾವಲ್ಲಿ ನಿಮ್ಮ ಶಿಷ್ಯರನು ಕಂಡೆನು ಎಂದು,
ಇವರ ನಡೆನುಡಿ ರೂಪು ತನಗೆ ಒಪ್ಪಿದವೆಂದು,

ಅಣ್ಣ ಇವರನು ಕಂಡು ಮನೆಯಳಿಯನಾಗೆಂದು
ಕೇಳಬೇಕೆಂದು, ಬೇಡಿದರು. ನಮ್ಮರಸಂಗೆ
ಪೇಚಿಗಿಟ್ಟಿತು. ಅಳಿಯನಾಗುವಾತನ ತಂದೆ,
ಮದುವೆಯಾಗುವ ಎಂದು ಕರೆವ ಈಕೆಯ ತಂದೆ,
ಕುಲದ ಮಾತಿಗೆ ಎದುರು ಬದುರು ಮಲೆತಿದ್ದವರು.
ತಂದೆ ಕೀಳೆಂದು ಕರೆದಿದ್ದ ಈ ಮನೆತನದ
ಮಗ ಇವರ, ನನ್ನ ತಂಗಿಯ ಮದುವೆ ಆಗೆಂದು
ಕರೆಯುವುದೆ? ಕರೆದರು. ಎದುರಾಳಿ ಕಟುವಾಗಿ
ಪ್ರತಿ ಹೇಳಿದರೆ ಏನು ಮಾಡುವುದು? ಇಂತೆಂದು
ಚಿಂತಿಸುತ ಇವರು ದಿನ ವಾರಗಳ ನೂಕಿದರು.
ತಂಗಿ, ವಾರಕೆ ಒಮ್ಮೆ ಎರಡು ವಾರಕೆ ಒಮ್ಮೆ,
ಅವರ ಕೇಳಲು ಜನವ ಕಳುಹಿಸಿವೆಯಾ ಅಣ್ಣ,
ಎಂದಿವರ ಕೇಳುವರು. ಏಗೆಯ್ವ ಎಂದು ಪ್ರಭು,
ತಮ್ಮ ಮನದಲೆ ಆಳೆದು ಸುರಿದು, ತಮಗಪಮಾನ
ಆದರಾಗಲಿ, ತಂಗಿಯಾಸೆ ಮುರಿವುದು ಬೇಡ,
ಎಂದು ನಿಶ್ಚಯಿಸಿದರು. ನನ್ನಸಿಲ್ಲಿಗೆ ಇಂತು
ಕಳುಹಿದರು. ಕೆಂಡವೋ ಎಂದು ತುಡುಕಲು ಅಂಜಿ
ನೋಡಿದುದು ವಸ್ತುಅದು ರತ್ನವಾಗಿಹುದಲ್ಲ.
ಈ ಮುನ್ನ ನಾಲ್ವರನು ಮನಕೆಡಿಸಿ ಕಳುಹಿಸಿದ
ತರುಣಿಯರು ತಮ್ಮ ಶಿಷ್ಯರನೆಂತು ಕಾಣುವರೊ
ಎಂಬ ಯೋಚನೆ ಬೇಡ. ತಾಯ್ತಂಪೆ ಇಲ್ಲದೆ,
ಹಿರಿಯ ಹೆಣ್ಮಂದಿ ಎಂಬವರೊಬ್ಬರಿಲ್ಲದೆ,
ಅಕ್ಕರೆಯ ಅಣ್ಣನೆದುರಲಿ ಬೆಳೆದ ಬಾಲೆಯರು
ಇನಿತಶಿಕ್ಷೆಯ ತೆರದಿ ಹಿಂಪೆ ನಡೆದುದು ಉಂಟು.
ಮದುವೆಯಾಗುವ ಅಕ್ಕ ತಾವೆ ಒಪ್ಪಿದ ತರುಣ
ಇವರ ವಿಷಯದಲಿ ಚೆನ್ನಾಗಿಯೇ ನಡೆಯುವರು.
ಪ್ರಾಣವನೆ ಕೊಟ್ಟು ಗಂಡನನು ರಕ್ಷಿಸಿಕೊಂಡ

ಸಾವಿತ್ರಿಯೆಂತಂತೆ ಈ ತಮ್ಮ ಶಿಷ್ಯರನು
ಕಾಯ್ದುಕೊಂಬರು, ದೇವರೆಂಬಂದ ಪೂಜಿಸರು.
ಆವರಿವರ ಮಾತು ಕಿವಿಯಲಿ ಬಿದ್ದು ಮನಸಿನಲಿ
ಶಂಕೆ ಇದ್ದೀತೆಂದು, ಆರ್ಯರಲಿ ಉದ್ದೆನೆಯು
ಬಿನ್ನಪವ ಮಾಡಿಹೆನು. ಮಾತು ಅತಿಯಾಯಿತೆನೆ
ಹಿರಿಯರೆನ್ನನು ಮನ್ನಿಸಿರಿ.

ಗುರು.— ತಮ್ಮ ನುಡಿಯೆಲ್ಲ
ಸಜ್ಜನರ ನುಡಿ. ನಿಮ್ಮ ಒಡೆಯ ಅರಸರ ಶುಭವ
ಸಾಧಿಸುವ ನುಡಿ ಅಂತೆ. ಅವರೊಡನೆ ನಡೆಯಲಿಹ
ಬೇರೆಯವರೊಳ್ಳಿತನು ಸಾಧಿಸುವ ನುಡಿ. ನಿಮ್ಮ
ಸಾಚಿವ್ಯ ನಿಮ್ಮೊಡೆಯ ಅರಸರಿಗೆ ಬಹುಕಾಲ
ಲಭಿಸಿರಲಿ. ನಿಮ್ಮೆಲ್ಲ ಆರಂಭ ಜಯಿಸಿರಲಿ.

ಸಚಿವ.—ಆರ್ಯರೇ ತಮಗೆ ಬೇಸರವಾಗದಿರೆ ತಮ್ಮ
ಹಿತವ ಬಯಸುವ ನಾನು ತಮ್ಮ ಕೇಳುವುದೊಂದು
ಮಾತು ಇದೆ, ಈಗ ಮನಸಿನಲಿ ಮುಖವಿಟ್ಟಿಹುದು.
ಪ್ರಶ್ನೆ ಅನುಚಿತ ಎಂದು ತಮಗೆ ಕಂಡರೆ ನನಗೆ
ಅದನು ತಿಳಿಸಲು ತಾವು ಹಿಂಜರಿಯುವುದು ಬೇಡ.

ಗುರು.—ತಾವು ನನ್ನನು ಕೇಳ ಬಯಸ ಬಹ ಯಾವುದೇ
ಪ್ರಶ್ನೆ ಅನುಚಿತವಪ್ಪುದಿಲ್ಲ, ಸಚಿವರೆ. ಮನಸು
ಒಳ್ಳಿತಾಗಿರೆ ಪ್ರಶ್ನೆ ಒಳ್ಳಿತೇ ಆಗುವುದು.
ಕೇಳಿರಿ.

ಸಚಿವ.— ತಮ್ಮ ಈ ಕುವರಿ. ಈಕೆಗೆ ಮದುವೆ
ಆಗಿಹುದು ?

ಗುರು.— ಆಗಿಹುದು.

ಸಚಿವ.— ಅಳಿಯದಿರು ಕಾಣರೇ.
ಸದ್ಯ ಕೆಲದಿನ ಎಲ್ಲಿಗಾದರೂ ಹೋಗಿಹರೆ ?

ಇಲ್ಲವೇ ಬೇರೆ ಕಾರಣ ಏತರದೊ ಇಪೆಯೆ ?
ಎಂದು ನನಗಾತಂಕ.

ಗುರು.— ಹಿತವ ಬಯಸುವ ತಮ್ಮ
ಮನಸಿನೀ ಆತಂಕ ತಕ್ಕುದೇ ಸಚಿವರೆ.
ಏನು ಸಂಗತಿ ಹೇಳುವೆನು. ಕೇಳ ಬಿಡುವಿದೆಯೆ ?

ಸಚಿವ.—ಇದೆ. ಅನುಗ್ರಹಮಾಡಿ.

ಗುರು.— ನನ್ನಪರ್ಣಾ ನನ್ನ
ಒಂದೆ ಮಗು. ನನ್ನ ಸತಿ ಈ ಮಗುವ ಹೆತ್ತವಳು
ಚಿಕ್ಕಂದೆ ತೀರಿಕೊಂಡಳು. ಮಗಳ ಚಿಕ್ಕಂದು
ಎಂದಲ್ಲ ನನ್ನರ್ಥ. ತಾಯಿಗೇ ಚಿಕ್ಕಂದು.
ತಾಯ್ ಎಂದರೇನೆಂದು ಕಾಣದೀ ತಬ್ಬಲಿಯ
ನಾನು ಕನಿಕರದಿಂದ ಸಾಕಿದೆ. ಮಲತಾಯ
ತರಲಿಲ್ಲ. ಅವಳಿವಳ ಎಂತು ಕಾಂಬಳೊ, ಎಂದು
ಭಯ. ಮಗಳು ಬೆಳೆದಿಹಳು. ಉದ್ವಾಹಕೊದಗಿಹಳು.
ವರ ಎಲ್ಲಿ ? ನನಗೊಬ್ಬ ತಂಗಿ ಇರುವಳು. ಅವಳು
ಸೀತಾಪುರದ ಒಬ್ಬ ಪುಣ್ಯವಂತರ ಪತ್ನಿ.
ಹಿರಿಯನಿಗೆ ಮದಿವೆಯಾಗಿದೆ. ಅವನ ತಮ್ಮನಿಗೆ
ಮದಿವೆಯಾಗುವ ಹರೆಯ. ತಂಗಿ ಬಂದಳು, ತನ್ನ
ಈ ಮಗಗೆ ಸೊಸೆ ಇವಳ ಕೊಡು ಎಂದು ಕೇಳಿದಳು.
ಹುಡುಕುತಿದ್ದುದು ಬಳ್ಳಿ ತೊಡರಿತ್ತು ಕಾಲಿಗೆ
ಎಂಬಂದ ಬಂದ ತಂಗಿಯು ಬೇಡಿಕೆಗೆ ನಾನು
ಒಡನೆ ಒಪ್ಪಿದೆನಪ್ಪ. ಸೋದರಳಿಯನೆ ಮನೆಯ
ಅಳಿಯನಾಗಿರ ಬರಲು ಬೇಡ ಎನ್ನುವರುಂಟೆ ?
ಒಡಹುಟ್ಟ ಮಕ್ಕಳಿವರಿಬ್ಬರೂ ಚಿಕ್ಕಂದು
ನನ್ನಮನೆಯಲ್ಲಿಲ್ಲಿ, ಅವರಮನೆಯಲ್ಲಲ್ಲಿ,
ಹತ್ತೊಮ್ಮೆ ಒಡನಾಡಿ ಸಲಿಗೆಯಲಿ ಬೆಳೆದವರು.
ಮದುವೆಯಹೆನೆನ್ನುವುದು ಇಬ್ಬರಿಗು ಸಂತೋಷ.

ಯಜಮಾನರಾರೋಗ್ಯ ಚೆನ್ನಿಲ್ಲ, ಮದುವೆಯನು
ನನ್ನ ಮನೆಯಲಿ ಮಾಡು ಎಂದು ತಂಗಿಯ ಸಲಹೆ.
ಅಂತೆ ಆಯಿತು. ಮದುವೆ ಆದುದೇ ಈ ಮಗಳು
ಗಂಡನಿಗೆ, ನಾನಿಲ್ಲಿ ನಿನ್ನೊಡನೆ ನಿಂತೆನೇ
ರಾಮಗಿರಿಯಲಿ ಮುದಿಯ ಅಪ್ಪನಿಗೆ ದಿಕ್ಕಿಲ್ಲ,
ನೀನು ಅಲ್ಲಿಗೆ ಬಂದು ನಿಲ್ಲೆಂದು ಹೇಳಿದಳು.
"ನನಗಲ್ಲಿ ಕೆಲಸವೇನೂ ಇಲ್ಲ, ನನ್ನೂರೆ
ನನಗೆ ಸಾಕೆನಿಸಿತ್ತು. ನನ್ನೂರ ಬೇಹಾರಿ
ಹಿರಿಯಾತನೊಬ್ಬ ಉಜ್ಜಯಿನಿಯಲಿ ತನ್ನವು
ವ್ಯವಹಾರ ಹಲವಿಹವು, ಅವ ನೀನು ನೋಡಿಕೋ,
ಆದಾಯದಲಿ ಒಂದು ಪಾಲು ತೆಗೆದುಕೊ ಎಂದು
ನನಗೆ ಹೇಳಿಹನು. ನಗರಕೆ ಹೋಗಿ ಬಾಳುವ.
ಜೊತೆಗೆ ಬಾ," ಎಂದಿವಳ ಕರೆದನು. ಅಪ್ಪನಿಗೆ
ದಿಕ್ಕಿಲ್ಲದಾಗುವುದೆ ಎಂಬುದೊಂದೇ ಇವಳ
ಮರು ನುಡಿ. ನಾನು ಮಗಳಿಗೆ "ಅಮ್ಮ, ನನಗಾಗಿ
ನಿನ್ನ ಮನೆಯನು ಬಿಟ್ಟು ನೀನಿಲ್ಲಿ ನಿಲ್ಲುವುದು
ಸರಿಯಲ್ಲ," ಎಂದೆನು. ಅಳಿಯ, ಮಾವನ ಮಾತ
ಕೇಳಿದೆಯ, ಎಂದನು. ಇವಳು, "ಮಾವನ ಮಾತು
ನಿನಗೆ ರುಚಿಸಿತು ಎಂದು ನೀನದನು ಕೇಳೆಂಬೆ,
ನಿನ್ನಪ್ಪನಣ್ಣ ಸೋದರ ಮಾವ ಇನ್ನೆನಿತು
ಘಾಸಿ ಪಡುವನು ಅದನು ನೀನು ಯೋಚಿಸುತಿಲ್ಲ,"
ಎಂದಳು. ನಾನಿವರ ಜೊತೆಗೆ ಹೋಗೋಣೆನಲು
ಒಂದಡ್ಡಿ. ಪ್ರಭು ಸಾವ ಹೊತ್ತಿನಲಿ ನಾ ತಮ್ಮ
ಮಗ ಬೆಳೆವವರೆಗೆ ಅವನನು ನೋಡಿಕೊಳಬೇಕು
ಎಂದು ನನ್ನಿಂದ ವಚನವ ಪಡೆದುಕೊಂಡರು.
ಏನ ಮಾಡುವುದು? ಪ್ರಭುಪುತ್ರ ನೀ ಮದುವೆಯನು
ಮಕ್ಕಳ ಸುಸ್ಥಿತ ತಾನೇ ಏರ್ಪಡಿಸಿತು ಎಂದು

ಹೇಳ ಸಲ್ಲುವುದು. ಈ ಮದುವೆಯುತ್ಸವ ನಡೆದು
ಪ್ರಭುಪುತ್ರ ಸತಿಯೊಡನೆ ಇಲ್ಲಿಗೈತಂದುದೇ,
ನಾನು ಒಡತಿಯರ ಅಪ್ಪಣೆ ಬೇಡಿ ಮಗಳೊಡನೆ
ನಗರವನು ಸಾರುವನು. ನಗರದಲಿ ಬಾಳುವುದು
ಸಂತೆಯಲಿ ಬಾಳುವುದು ಎಂತಂತು ಅರುಚಿ. ಸರಿ.
ಇರುತ, ಮಕ್ಕಳಿಗಾಗಿ ಅದ ಸಹಿಸಿಕೊಂಬೆನು,
ಮಕ್ಕಳಿಬ್ಬರ ಸುಖದ ಬಾಳ್ವೆಯಲಿ ಸುಖಿಸುವೆನು.
ಕಥೆ ದೊಡ್ಡದಾಯಿತು.

ಸಚಿವ.— ಚೆನ್ನ ಕಥೆಯಾಯಿತು.
ಶೀಘ್ರದಲಿ ಮಕ್ಕಳಿಬ್ಬರು ಸುಖವ ಕಾಣಲಿ.
ಅವರ ಸುಖವನು ಕಾಂಬ ಸುಖ ತಮಗೆ ಲಭಿಸಲಿ.

ಗುರು.—ಸನ್ಮನದ ತಮ್ಮ ನುಡಿ ಕ್ಷಿಪ್ರದಲಿ ಫಲಿಸುವುದು.
ಹೋಗಿ ಬನ್ನಿರಿ.

ಸಚಿವ.— ಬರುವೆ. ನನಗೆ ಆಶೀರ್ವಾದ
ತಮ್ಮೆಲ್ಲ ವಚನ. ಬೀಳ್ಕೊಡುವನುಗ್ರಹಮಾಡಿ.

ಅಂಕ ಎರಡು

ಸ್ಥಾನ ೧

ಒಂದು ತಿಂಗಳ ಬಳಿಕ. ಭರತಪುರದ ಅರಮನೆಯ ವಿಹಾರ ಭವನದ ಮುಂದೆ ಅರಸ, ಗುರು, ಕಾಳಿದಾಸ ಇರುವರು.

ಗುರು.—ಸೋದರಿಯ ಮದಿವೆಯನು ತುಂಬು ವೈಭವದಿಂದ
ನಡೆಸಿದಿರಿ. ನಾವಿನ್ನು ಊರತ್ತ ಹೊರಡುವೆವು.
ಅಳಿಯದಿರು ಸತಿಯೊಡನೆ ಊರಸಾರುವ ಮುನ್ನ
ಮೂರು ದಿನ ಇಲ್ಲಿದ್ದು ತಮ್ಮೊಡನೆ ತಮ್ಮೆಲ್ಲ
ಪರಿವಾರದೊಡನೆ ಪರಿಚಯ ಬೆಳಸಿ ನಡೆವಾಡಿ

ಸುಖವೀಯಲೆಂದು ಬಯಸಿಹಿರಿ. ದಂಪತಿಗಳಿಗೆ
ಊರಸಾಗಿದ ಮೇಲೆ ದಿನದಿನದ ಬಾಳುವೆ
ಕಾದಿಹುದು. ಮೂರುದಿನ ಇಲ್ಲಿ ಇನ್ನಾವುದೇ
ಚಿಂತೆಯಿಲ್ಲದೆ ಅವರು ವಿಹರಿಸಲಿ ಎನ್ನುವುದು
ತಮ್ಮ ಯೋಚನೆ. ನಮ್ಮ ಅಮ್ಮಾಜಿ ಇದು ಯುಕ್ತ
ಎಂದಿಹರು. ಇನ್ನೀಗ ಬೀಗರನು ಬೀಳ್ಕೊಡಿರಿ.
ಮೂರುದಿನ ಕಳೆದು ಮಂಗಳಮುಹೂರ್ತವ ನೋಡಿ
ದಂಪತಿಗಳನು ಕಳುಹಿಕೊಡಿರಿ. ನಮ್ಮನು ಇಲ್ಲಿ
ಬಹು ಚೆನ್ನ ನೋಡಿಕೊಂಡಿರಿ. ಇದಕೆ ಅಮ್ಮಾಜಿ
ವಂದನೆಯ ತಿಳಿಸಿಹರು. ಇನ್ನು ನಮಗಪ್ಪಣೆಯೆ ?

ಅರಸ.—ಅಪ್ಪಣೆಯ ಮಾಡುವುದು ಈ ಮನೆಗೆ ನಮ್ಮ ಹೊಸ
ಸಂಬಂಧ ಇದರಿಂದ ಮಾತೃಸಮರಾಗಿರುವ
ಅಮ್ಮಾಜಿ, ಅಂತೆ ಅವರಿಗೆ ಗುರುಗಳಾಗಿರುವ
ತಮಗೆ, ಸಂದಧಿಕಾರ. ನಾವು ತಮ್ಮಪ್ಪಣೆಯ
ನಡೆಸುವಾತಗಳು. ತಂದೆಯ ಕಳೆದುಕೊಂಡಿರುವ
ವರ, ಇವನ ಮದುವೆಯಲಿ ಬಹಳ ಸಂಭ್ರಮ ಬೇಡ,
ಉತ್ಸವವ ಒಂದುದಿನ ಮಾತ್ರ ನಡೆಸಲು ಒಳಿತು
ಎಂದು ಬೀಗಿತಿ ರಾಣಿ ಬೆಸಸಿದರು. ಅಂತೆಯೇ
ಉತ್ಸವವ ಹಗುರದಲಿ ನಡೆಸಿದುದ ಕಂಡಿಹಿರಿ.
ಹಸೆ ನಿಲುವ ದಿನವಲ್ಲ, ಅದರ ಮಾರನೆಯ ದಿನ,
ನವ ವಧೂವರರಿವರ ದಾಂಪತ್ಯದಾರಂಭ,
ಎಂಬ ನಮ್ಮರಮನೆಗಳಾಚಾರ ಇದರಿಂದ
ಮನೆಮಗಳು ಅಳಿಯದಿರು ಸಂತಸವೊಳಿದ್ದುದನು
ನಾವಿಲ್ಲಿ ಒಂದು ದಿನವಾದರೂ ನೋಡುವುದು
ಇಲ್ಲವಾಯಿತೆ ಎಂದು ನಾನು, ದಂಪತಿಗಳು
ಮೂರು ದಿನ ಇಲ್ಲಿ ನಿಲ್ಲಲಿ, ಎಂದು ಪೂಜ್ಯರಲಿ
ಬಿನ್ನವಿಸಿದೆನು. ಪೂಜ್ಯ ಹಿರಿಯರದಕೊಪ್ಪಿದಿರಿ.

ಕಿರಿಯರಿಲ್ಲಿರಲಿ, ಹಿರಿಯರು ನಾವು ಊರತ್ತ
ಸಾರುನೆವು, ಎಂದಿಹಿರಿ. ತಮ್ಮಿಚ್ಛೆ ಇಂತಿರಲು
ಹಿರಿಯರೀವೇಳೆ ಪಯಣವ ಬೆಳೆಸಿ. ಕಿರಿಯರು
ಮೂರುದಿನ ಇಲ್ಲಿರಲು ಸಮ್ಮತಿಸಿ ತಾವೆಮಗೆ
ಹಿರಿದಹ ಅನುಗ್ರಹವ ಮಾಡಿಹಿರಿ. ಮರುದಿನವೆ
ಅಳಿಯದಿರು ಸತಿಯೊಡನೆ ಶುಭಮುಹೂರ್ತದಿ ಹೊರಟು
ಮಾರನೆಯ ದಿನ ತಮ್ಮ ರಕ್ಷೆಯನು ಸಾರುವರು.
ಅಮ್ಮಾಜಿಯವರಿಗಂತೇ ತಮಗೆ ನಾವೆಲ್ಲ
ಸುಖದ ಪಯಣವ ಬಯಸುವೆವು. ನಮ್ಮ ಜನ ತಮ್ಮ
ಅನುಚರಿಸಿ ಬರುತಿಹರು.

ಗುರು.— ಸಂತೋಷ ವಂದನೆ.

ಸ್ಥಾನ ೨

ಅದೇ ಸ್ಥಳ. ವಿಹಾರ ಭವನದ ಒಂದು ಕೋಣೆ. ಸ್ವಲ್ಪ ಹೊತ್ತಿನ ಮೇಲೆ. ನವ ವಧು ಮಾಲತಿ, ತಂಗಿ ಮಂಜರಿ.

ಮಂಜರಿ.—ಏನಕ್ಕ, ಈ ಭಾವ ಕೋಣೆಯಲಿ ಕುಳಿತವರು
ಹೊರಗೆ ಬರಲೊಲ್ಲರೇ. ಯಾವುದೋ ಚಿಂತೆಯಲಿ
ನಿದ್ರಿಸುವ ತೆರ ಕಾಣುವರು.

ಮಾಲತಿ.— ಎಲ್ಲ ಹೊಸ ಮುಖ.
ಸುತ್ತೆಲ್ಲವೂ ಹೊಸತು.

ಮಂಜರಿ.— ಬಾಳದಿನ ಎಲ್ಲವೂ
ಹಳ್ಳಿಗಾಡಲಿ ಬಾಳಿ ಬಂದವರು ಅರಮನೆಯ
ವೈಭವಕೆ ಬೆಡಗುಗೊಂಡಿಹರೆನ್ನುವಂತಿಹರು.
ತುಂಬ ಚೆಲುವಾದ ಮುಖ. ಮನ ಹಸುಳೆ ಮನ. ಇವರ
ಇಸಿಸು ಅಡಿಸುವ ಎನಿಸಿದೆ ನನಗೆ. ಅಕೊ ಅವರು
ಉದ್ಯಾನದತ್ತ ಹೊರಟಿಹರು. ನಾನೂ ಹೋಗಿ
ಇವರ ನಿದ್ರೆಯನು ಬಿಡಿಸುವೆನು.

ಮಾಲತಿ.— ಎಚ್ಚರ, ಮಂಜೂ ;

ಕೋಪಗೊಳಿಸೀಯೆ.

ಮಂಜರಿ.— ಇಲ್ಲಕ್ಕ, ಅಂತೆಸಗುವೆನೆ ?

ಸ್ಥಾನ ೩

ಅದೇ ಸ್ಥಳ. ವಿಹಾರ ಭವನದ ಉದ್ಯಾನದಲ್ಲಿ ಒಂದು ಶಿಲಾಪೀಠ. ಸ್ವಲ್ಪ ಹೊತ್ತಿನ ಮೇಲೆ ಅವರೆದುರ ದಾರಿಯಲ್ಲಿ ಕಾಳಿದಾಸ ನಡೆಯುತ್ತಿದಾನೆ. ಮಂಜರಿ ಬಂದು ಪೀಠದ ಮೇಲೆ ಕುಳಿತುಕೊಳ್ಳುತ್ತಾಳೆ. ದಾರಿಯಲಿ ನಡೆಯುತ್ತ ಕಾಳಿದಾಸ ಇವಳನ್ನು ನೋಡಿ ತನ್ನ ಪತ್ನಿ ಎಂದು ಬಗೆದು ಹತ್ತಿರ ಬಂದು ಪಕ್ಕದಲ್ಲಿ ಕುಳಿತು,

ಕಾಳಿದಾಸ.—ಮರಗಳೆಡೆ ಕುಳ್ಳಿರುವ ಎನ್ನಿಸಿತೆ, ದೇವಿ ?

ಮಂಜರಿ.—ಎನ್ನಿಸಿತು. ಏನು ಇದು ಇನಿಸೊಂದು ಸಲಿಗೆ ?

ಕಾಳಿದಾಸ.—ಸಲಿಗೆ ?

ಮಂಜರಿ.— ಸಲಿಗೆಯೆ ? ಸದರವೆ. ನಾ ಯಾರು ?

ಕಾಳಿದಾಸ.—ಯಾರು ?

ಮಂಜರಿ.— ಯಾರು ? ಅವೆ ನಾನು ಕೇಳುವುದು.

(ಎನ್ನುತ್ತಾ ಸಿಡುಕು ಮುಖಮಾಡಿ ಹೊರಟು ಹೋಗುವಳು)

ಕಾಳಿದಾಸ.— ನಾ ಯಾರು ?

ಏನಿವಳ ಮಾತು ಇದು ? ಏನ ಹೇಳಿದೆ ನಾನು ?

(ಎಂದು ನಡೆಯುತ್ತ ಹೋಗುವನು.)

ಸ್ಥಾನ ೪

ಅದೇ ಸ್ಥಳ. ಮತ್ತೊಂದು ದಾರಿ. ಮತ್ತೊಂದು ಶಿಲಾಪೀಠ. ಮತ್ತೆ ಸ್ವಲ್ಪ ಹೊತ್ತಿನ ಮೇಲೆ ಮಂಜರಿ ಬಂದು ಅದರ ಮೇಲೆ ಕುಳಿತುಕೊಳ್ಳುವಳು. ನಿಮಿಷದ ಬಳಿಕ ಕಾಳಿದಾಸ ಅಲ್ಲಿ ಬರುವನು. ತಲೆ ತಗ್ಗಿಸಿ ನಡೆದು ಬರುತ್ತ ಪೀಠ ಹತ್ತಿರ ಬಂದಾಗ ಅವಳನ್ನು ನೋಡಿ,

ಕಾಳಿದಾಸ.—ಮತ್ತೆ ಕಂಡೆನೆ ನಿನ್ನ ? ಒಳಿತಾಯ್ತು. ಕಂಡಂದು

ಒಂದು ಮಾತನು ಕೇಳ ಬಯಸಿಪೆನು. ಈಗದನು

ಕೇಳುವೆನು.

ಮಂಜರಿ.— ಏನು ಅದು ?
ಕಾಳಿದಾಸ.— ನಿನಗೆ ಬೇಸರ ತರುವ
ತೆರನೇನ ಮಾಡಿದೆನು ನಾನು ?
ಮಂಜರಿ.— ಈ ನೀ ಎಂಬ
ಬಾ ಎಂಬ ಹೋಗೆಂಬ ಮರ್ಯಾದೆ ಮರೆತ ನುಡಿ
ಇದು ನನಗೆ ಬೇಸರ.
ಕಾಳಿದಾಸ.— ಮದಿವೆಯಲಿ ಜೊತೆಯಾದ
ಜನರ ಮಧ್ಯದಲಿ ಮರ್ಯಾದೆಯದು ಬಹುವಚನ
ಇರಬೇಕೆ ?
ಮಂಜರಿ.— ಇರಬೇಕು. ಹಾಡಿಯಲಿ ಗೌಡರಲಿ
ತಗುವ ತೆರ ಅರಮನೆಗೆ ತಗದು.
ಕಾಳಿದಾಸ.— ಅಂತೇ ? ಒಳಿತು.
ಇದ ನನಗೆ ತಿಳಿಸಿಹಿರಿ. ಇದು ಹಿರಿಯ ಉಪಕಾರ.
(ಎಂದು ಮುಂದಕ್ಕೆ ಹೋಗುವನು.)

ಸ್ಥಾನ ೫

ಒಂದು ಗಳಿಗೆಯ ಬಳಿಕ ಭವನದ ಒಂದು ಕೋಣೆಯಲ್ಲಿ ಒಂದು ಕೂರ್ಚಾಸನದ ಮೇಲೆ ಮಾಲತಿ ಕುಳಿತಿರುವಳು. ಕಾಳಿದಾಸ ಬಾಗಿಲಿಂದ ಒಳಕ್ಕೆ ಬರುವನು.

ಮಾಲತಿ.—(ಎದ್ದು ನಗುಮುಖದಿಂದ) ಉದ್ಯಾನದಲಿ ನಡೆದುದಾಯಿತೇ? ಬನ್ನಿರಿ.
(ಎಂದು ತಾನು ಕುಳಿತಿದ್ದ ಸ್ಥಳದ ಪಕ್ಕವನ್ನು ಕೈಯಿಂದ ತೋರುವಳು.)
ಕಾಳಿದಾಸ.—(ಇವಳ ರೀತಿಯಿಂದ ಸ್ವಲ್ಪ ವಿಸ್ಮಯಗೊಂಡು)
ಉದ್ಯಾನ ಚೆನ್ನವಾಗಿಹುದೆಂದು ಕಂಡಿತು.
ಮರಗಳಡಿ ನಾಲ್ಕು ದಾರಿಯ ನಡೆದು ಬಂದೆನು.
(ಎಂದು ಅವಳು ತೋರಿಸಿದ ಕಡೆ ಕುಳಿತುಕೊಳ್ಳುತ್ತಾನೆ. ಅವಳು ಪಕ್ಕದಲ್ಲಿ ಕುಳಿತುಕೊಳ್ಳುತ್ತಾಳೆ.)
ಮಾಲತಿ.—ಬಂಧುಗಳು ಹೊರಟುಹೋದರು ಎಂದು ಮನಸಿಗೆ
ಕಷ್ಟವಾಗಿದೆಯೆ ? ಹೊಸ ಬಂಧುಗಳು ನಾವಿಹೆವು.

ಕಾಳಿದಾಸ.—ಅದು ದಿಟವೆ. (ತನ್ನಲ್ಲಿ ತಾನು)
ಆಗಿನವು ಆ ಮಾತು, ಈಗಿನವು
ಈ ಮಾತು, ಹೊಂದುವುದು ಎಂತು ?

ಮಾಲತಿ.—(ಇವನು ತಾನೇ ಮಾತನಾಡಿಕೊಳ್ಳುವುದನ್ನು ಗಮನಿಸಿ ಸ್ವಲ್ಪ ಸುಮ್ಮನಿದ್ದು)
ಸಚಿವರು ನೀವು
ಒಬ್ಬ ಹಿರಿಕವಿ ಎಂದು, ಕವಿತೆ ರಚಿಸಿಹಿರೆಂದು,
ನಿಮ್ಮತ್ತಣಿಂದ ಬಂದವರಿಲ್ಲಿ ತಿಳಿಸಿದರು.
ನೀವು ರಚಿಸಿದ ಕವಿತೆಯೊಂದರದು ಪ್ರತಿಯೊಂದ
ತಂದಿದ್ದು ಅದನಿಲ್ಲಿ ಓದಿದರು.

ಕಾಳಿದಾಸ.— ಒಂದು ಪ್ರತಿ
ಇರಲೆಂದು ಬಯಸಿದರು. ಅದರಿಂದ ಕೊಟ್ಟೆನು.
ಕವಿತೆ ಒಪ್ಪಿತೆ ?

ಮಾಲತಿ.— ಒಪ್ಪದಿರುವುದೇ ? ಒಪ್ಪಿಯೂ
ಇನ್ನನಿತು ಭಾವ ಇರಬಹುದಿತ್ತು ಎಂದರು
ಇಲ್ಲಿರುವ ಬಲ್ಲವರು.

ಕಾಳಿದಾಸ.— ಅದು ಸರಿಯೆ. ಯಾವುದೇ
ಕವಿತೆಯನು ಕುರಿತರೂ ಈ ಮಾತು ಸಲ್ಲುವುದು.

ಮಾಲತಿ.—ಈ ಮಾತು ಸಹ ಸರಿಯೆ. ಅದು ಇರಲಿ. ಈ ಮುನ್ನ
ನನ್ನ ನೋಡಿದುದು ನೆನಪಿಗೆ ಬಹುದೆ ?

ಕಾಳಿದಾಸ.—(ಸ್ವಲ್ಪ ನಿಟ್ಟಿಸಿ ನೋಡಿ,) ಈ ಮುನ್ನ ?
ಪ್ರಶ್ನೆ ಕೇಳಿದ ಮೇಲೆ ಎಲ್ಲಿಯೋ ನೋಡಿದ್ದೆ
ಎನಿಸುತಿದೆ. ಎಲ್ಲಿ ನೋಡಿದೆ, ಎಂದು ನೋಡಿದೆ,
ಇದ ಕಾಣೆ.

ಮಾಲತಿ.— ಆರು ತಿಂಗಳ ಹಿಂದೆ ಈ ಸಲದ
ಅನುಜಪುರಿಯಾಲಯದ ಮಹೋತ್ಸವದ ದಿವಸ
ಸಂಗೀತ ಸೇವೆಯಲಿ ಹಾಡಿದೊಬ್ಬಳ ನೀವು
ಕಣ್ಣಿಕ್ಕಿ ನೋಡಿದಿರಿ.

ಕಾಳಿದಾಸ.— ಆ ಕಂಠ ಅಂತಿತ್ತು.
ದೇವಲೋಕದ ಒಬ್ಬ ಅಪ್ಸರೆಯ ಕಂಠ ಅದು.
ಮಾಲತಿ.—ಅದು ನನ್ನ ಕಂಠ.
ಕಾಳಿದಾಸ.— ರಾಮೋತ್ಸವದ ಆ ಸೇವೆ
ಗಣಿಕೆಯರ ಸೇವೆ.
ಮಾಲತಿ.— ನಾ ಚೆನ್ನ ಹಾಡುವೆನೆಂದು
ಅರಮನೆಯ ನಮ್ಮ ಜನ ಎಲ್ಲರೂ ಹೊಗಳುವರು.
ಬೇರೆ ಜನ ನಾನು ಯಾರೆಂದು ತಿಳಿಯದ ಮುಂದಿ
ಇಂತು ಹೇಳುವರೆ? ಇದ ತಿಳಿಯ ಬೇಕೆನ್ನುವುದು
ನನ್ನ ಮನದಲಿ ಒಂದು ಆಸೆ. ಅಂತೇ ನನ್ನ
ಹಾಡು ಆಲಯದ ರಾಮೋತ್ಸವದ ಸೇವೆಯಲಿ
ದೇವರಿಗೆ ಸೇರಲೆನ್ನುವುದು ಇನ್ನೊಂದಾಸೆ.
ಎರಡಾಸೆಯೂ ಸೇರಿ ನಾನು ಆ ಗಣಿಕೆಯರ
ಸ್ವಾಮಿನಿಯ ಕೇಳಿ ಒಪ್ಪಿಸಿ ಅವರ ಮಧ್ಯದಲಿ
ಕುಳಿತು ಆ ಹಾಡ ಹಾಡಿದೆನು.
ಕಾಳಿದಾಸ.— ಅಂತೇ?
ಮಾಲತಿ.— ಅಂತೆ.
ಸಂದೇಹವೇ? ಬಂದೆ.
(ಎಂದು ಒಳಗಡೆ ಹೋಗಿ ನಿಮಿಷ ಬಿಟ್ಟು ಬೇರೆ ವಸ್ತ್ರ ಒಂದನ್ನು ಉಟ್ಟು ಉತ್ತರೀಯವನ್ನು ಹೊದ್ದು ಬಂದು.)
ಈಗ ಅಹುದೆನಿಸುವುದೆ?
ಕಾಳಿದಾಸ.—(ಮನಸ್ಸಿಗೆ ಬಂದ ಬಲವಾದ ಸಂದೇಹವೊಂದನ್ನು ಅವುಕಿ ಹಿಡಿದು)
ಎನಿಸುವುದು.
ಮಾಲತಿ.— ಆ ಸಂಜೆ ಆಲಯದ ಪಶ್ಚಿಮದ
ಆವರಣ ಭಿತ್ತಿಯೊತ್ತಿನಲಿ ಇಳಿಹೊತ್ತಿನ
ವರ್ಣ ವೈಭವವ ನೋಡುತ ನೀವು ನಿಂತಿಹಿರಿ.
ನಾನಿಮ್ಮ ನುಡಿಸಲೆಳಸಿದೆನು. ಸ್ವೈ ಅನು ತಪ್ಪಿ

ತಂಗಿ ಬಂದಿರಲಿಲ್ಲ. ನಾನು ಗೆಳತಿಯ ಜೊತೆಗೆ
ನಿಮ್ಮತ್ತ ಬಂದೆನು. ನೀವೆನ್ನ ನೋಡಿದಿರಿ.

ಕಾಳಿದಾಸ.—ಅಹುದು. ನೋಡಿದೆ.

ಮಾಲತಿ.— ನೋಡಿದಿರಿ. ನೋಡದವರಂತೆ,
ಇವರು ಸಹ ಆಗಸದ ಚೆಲುವ ನೋಡಲು ಜಹರು
ನಾನಿರಲು ಇವರು ಸಂಕೋಚ ಪಡುವರು ಎಂದೊ,
ಇಲ್ಲ ಬೇಸರ ಇಲ್ಲ ನಿರ್ಲಕ್ಷ್ಯದಿಂದಲೋ,
ನಮ್ಮ ಕಂಡೊಡನೆಯೇ ಆಸ್ಥಳವ ಬಿಟ್ಟವರು
ವೇಗದಲಿ ಎತ್ತಲೋ ಹೊರಟು ಹೋದಿರಿ. ನಾನು
ನುಡಿಸಲಾಗದೆ ಹೋಯಿತೆನ್ನುವ ನಿರಾಶೆಯಲಿ
ಅಲ್ಲಿಂದ ಹಿಂತಿರುಗಿದೆನು. ಊರ ಸೇರಿದುದೆ,
ಅಣ್ಣನಿಗೆ ನನ್ನ ಮನಸನು ತಿಳಿಸಿ ಮದುವೆಯಿದ
ಏರ್ಪಡಿಸು ಎಂದು ಬೇಡಿದೆನು. ಅವರಂತೆಸಗಿ
ನಿಮ್ಮ ಸತಿಯಹ ಭಾಗ್ಯವನು ಈಗ ಕಂಡಿಹೆನು.

(ಇವಳು ಈ ಮಾತನ್ನೆಲ್ಲ ಹೇಳುತ್ತಿರಲು ಕಾಳಿದಾಸ ಅವಳತ್ತಲೇ ನೋಡುತ್ತಾ ಮನಸ್ಸಿನ ಒಂದು ಶಂಕೆ ದೃಢವಾಗಿ, ಮೆಲ್ಲನೆ ಎದ್ದು ನಿಲ್ಲುವನು. ಇದು ಏನು ಎಂದು ಮಾಲತಿ ನೋಡುತ್ತಿರುವಂತೆ ಮೆಲ್ಲನೆ ತನ್ನ ಕೋಣೆಯತ್ತ ಹೋಗುವನು. ಮಾಲತಿ ಮಾತನಾಡಿಕೊಳ್ಳುವಳು.)

ಏನಾಯಿತಾಣ್ಮನಿಗೆ? ಏತರವೊ ಬೇಸರ.
ಗಣಿಕೆಯರ ಜೊತೆ ಕುಳಿತೆನೆಂದೆ? ಹಾಡಿದೆನೆಂದೆ?
ಇವರ ನುಡಿಸುವ ಎಂದು ಬಳಿಗೆ ಸಾರಿದೆನೆಂದೆ?
ಏನೆಂದು? ಏನೆಂದೊ ಗಳಿಗೆಯಲಿ ತಿಳಿಯುವುದು.
ಆಗ ಬೇಸರ ಕಳೆವ ಮಾತೇನು ಅದನಾಡಿ
ಸರಿಪಡಿಸಬೇಕು. ಒಳ್ಳಿತು. ಬೇಸರಿಳಿಯಲಿ.

(ಎಂದು ಚಿಂತಿಸುತ್ತಾ ಕುಳಿತಿರುವಳು.)

ಸ್ಥಾನ ೬

ಅದೇ ಮನೆ. ಕಾಳಿದಾಸನ ಕೋಣೆ. ಅವನು ಶತಪಥ ನಡೆಯುತ್ತಾ ಮಾತನಾಡಿ ಕೊಳ್ಳುತ್ತಾನೆ.

ಕಾಳಿದಾಸ.—ಸಂದೇಹವೇ ಇಲ್ಲ. ಇವಳೊಬ್ಬ ಗಣಿಕೆಯೆ.
ಅರಗುವರಿ ಗಣಿಕೆಯರ ಮಧ್ಯದಲಿ ಕುಳಿತೆನು
ಎಂಬಿವಳ ನುಡಿ ಸುಳ್ಳು. ಅರಸನಿಗೆ ಸೋದರಿಯೆ
ಅಹುದೆನಲು ಇವರಪ್ಪ ಕೂಡಿಕೊಂಡಿದ್ದೊಬ್ಬ
ವಾರವನಿತೆಯು ಮಗಳು ಗಣಿಕೆ ಇವಳಿಗೆ ಅರಸ
ನನ್ನನಾವಾವ ಮಾತಿಂದ ಹಂಗಿಸಬೇಕು
ಎಂದು ಸಹ ಕಲಿಸಿಹನು. ಅದರಿಂದಲೇ ಇವಳು
ಒಲುಮೆಯಲಿ ನುಡಿಯೆ ಏನೀ ಸಲಿಗೆ ಎಂದಳು.
ನಿನಗೇಕೆ ಬೇಸರಿನೆ ವಚನದಲಿ ಮರ್ಯಾದೆ
ಸಾಲದೆಂದಳು. ನಾನು ಕುರುಬ ಗೌಡ ಎಂದು
ಮುಖಭಂಗ ಮಾಡಿದಳು. ಬಳಿಕ ಅರೆಗಳಿಗೆಯಲಿ
ಪಕ್ಕದಲೆ ಕುಳಿತು ಬಹು ನಯದ ಮಾತಾಡಿದಳು.
ಅರಗುವರಿ ಗಣಿಕೆಯರ ಕೂಟದಲಿ ಸೇರುವಳೆ ?
ತರುಣನೊಬ್ಬನ ಕಂಡು ಅವನ ನುಡಿಸಲು ಎಂದು
ಅವನ ಬಳಿ ಹೋಗುವಳೆ ? ಗಣಿಕೆಯೇ ಸರಿ ಇವಳು.
ಇವಳ ಗುರು ಈ ಅರಸ. ನಮ್ಮಪ್ಪ ತಮ್ಮಪ್ಪ
ಇವರ ಮಧ್ಯದ ವೈರವನು ಬೆಳೆಸಿ ಈ ಅರಸ,
ಹೆತ್ತಜ್ಜ ಮುತ್ತಜ್ಜ ಆಗದವರಿಗೆ ಒಬ್ಬ
ಕೀಳುಜಾತಿಯ ಹೆಣ್ಣ ಮದುವೆ ಮಾಡಿಸಿ ಎಂತು
ಹಗೆಯ ತೀರಿಸಿಕೊಂಡರಂತು, ಇದೆ ನನಗೆ ಈ
ಗಣಿಕೆಯಿವಳನು ಕೊಟ್ಟು ಮದುವೆ ಮಾಡಿಸಿ ತನ್ನ
ಹಗೆಯ ತೀರಿಸಿಕೊಂಡಿಹನು. ಎಂಥ ವಂಚನೆ !
ಆಯ್ತು. ವಂಚಕನಾಗಿ ಇವನು ಗೆದ್ದನು. ಇವನ

ವಂಚನೆಗೆ ಪಕ್ಕಾದ ನಮಗೆ ಗತಿ ಈಗೇನು ?
ಇವನ ಉದ್ದೇಶವನು ಮುರಿಯಬಲ್ಲ ಚಿಕಿತ್ಸೆ
ಯಾವುದು ? ಒಡನೆಯೇ ಇದರ ಮಾತನು ಎತ್ತಿ,
ವಂಚಿಸಿದೆಯಾ ನೀಚ ಎಂದು ಖಂಡಿಸುವುದು.
ಅದು ಒಂದು ದಾರಿ. ಖಂಡಿಸಿದೆ. ನಗುವನು ಇವನು.
ಏನಾಯಿತೆಂಬುದನು ನಾಡೆಲ್ಲ ಕೇಳುವುದು.
ಹತ್ತು ಜನ, ಮೋಸ ಹೋದರೆ ಪಾಪ ಎನುತಿರಲು.
ನೂರು ಜನ ನಮ್ಮ ಎಗ್ಗರು ಎಂದು ನಗುವುದು.
ಇಂದು ಖಂಡಿಸಲಿಲ್ಲ. ಮೂರು ದಿನ ಇಲ್ಲಿದ್ದು
ಇವಳ ಊರಿಗೆ ಒಯ್ವುದೆ? ಒಯ್ದು ಬಳಿಕಿವನು
ತನ್ನ ವಿಜಯದ ಕಥೆಯನೆಲ್ಲೆಡೆಯು ಹರಡುವನು.
ವಂಚನೆಗೆ ಪಕ್ಕಾದ ಎಗ್ಗಜನ ನಾವೆಂದು
ನಾಲ್ಕುದಿನದಾಚೆಗಾದರು ನಾಡು ತಿಳಿಯುವುದು.
ನಮ್ಮ ಕೆಡಿಸುವ ಎಂದು ಈ ಪಾಪಿ ನಡೆಸಿರುವ
ಮದುವೆಯನು ಮುರಿಯುವುದು ಒಂದೆ ನನಗಿಹ ದಾರಿ.
ಸತಿ ಎಂಬವಳ ಬಿಟ್ಟು ಊರ ಸೇರುತ ನಾನು,
ಅಮ್ಮಾಜಿಗಂತೆ ಗುರುಗಳಿಗೆ ವಿಷಯವ ತಿಳಿಸಿ,
ಮೋಸದಲಿ ಮಾಡಿದೀ ಮದುವೆ ಮದುವೆಯೆ ಅಲ್ಲ
ಎಂದು ಈ ಅರಸನಿಗೆ ಹೇಳಿಕಳುಹಲು ಬಹುದು.
ಅಂತೆಸಗಿದೆನು ಎಂಬ. ಮದುವೆ ಮುರಿಯಿತು ಸರಿ
ಆದರೋ ಮಗನ ಗತಿ ಇಂತಾಯಿತೇ ಎಂದು
ಅಮ್ಮಾಜಿ ಎದೆಬಿರಿದು ಸಾಯುವುದು ನಿಶ್ಚಯ.
ಗುರುಗಳೋ ಬೆಳ್ಳಗಿಹುದೆಲ್ಲವೂ ಹಾಲೆಂದು
ತಾನು ನಂಬಿದೆನು, ಆದರಿಂದ ಈ ಬಾಲಕಗೆ
ಇಂಥ ಅನ್ಯಾಯ ಆಯಿತು, ಎಂದು ದುಃಖದಲಿ
ಮುಳುಗಿ ಕೊನೆಯಾಗುವರು. ಇಂದು ಖಂಡಿಸಿ ಅಲ್ಲ;
ಬಿಟ್ಟು ಹೋಗಿಯು ಅಲ್ಲ; ಮದುವೆಯನು ಮುರಿವುದಕೆ

ಬೇರೆ ಯಾವುದು ದಾರಿ? ಬೇರೆ? ಬೇರೆ?
ನಾಲ್ಕು ವರ್ಷದ ಹಿಂದೆ ಆಸೆಯಾಯಿತು ನನಗೆ.
ಆರ್ಯಋಷಿದೇಶ ಆರ್ಯಾವರ್ತ ಈಶಾನ್ಯ
ಅಂಗ ವಂಗ ಕಳಿಂಗ ದಕ್ಷಿಣಾಪಥದೆಲ್ಲ
ಈ ನಮ್ಮ ಪುಣ್ಯಭೂಮಿಯ ಮಹಾಕ್ಷೇತ್ರಗಳ
ನೋಡೋಣವೇ ಎಂದು. ತಾಯ ಊರಲಿ ಬಿಟ್ಟು
ಇದ ನಾನು ಮಾಡುವುದು ಎಂತು? ನನ್ನೀ ಮದುವೆ
ತಾಯಬಿಟ್ಟೀ ನೀನು ಇದಮಾಡು ಎನ್ನುತಿದೆ.
ಎನ್ನುತಿದೆ. ಎನ್ನುತಿದೆ. ಇದ ನಾನು ಮಾಡುವೆನು.
ತಾಯಿ ಭುವನೇಶ್ವರಿ, ಮನೆದೈವ, ಒಳಗಿದ್ದು
ಪ್ರೇರಿಸುವ ಧೀಶಕ್ತಿ, ನನಗೆ ದಾರಿಯ ತೋರು.
ತೋರಿಸಿದ ದಾರಿಯಲಿ ನಡೆವ ಬಲವನು ನೀಡು.
ಕಾಲ್ಗೆರಗಿ ಬೇಡುವೆನು ನನ್ನ ಸಂರಕ್ಷಿಸು.

(ಎಂದು ಕೋಣೆಯಿಂದ ಹೊರಟು ಭವನದ ಮುಂಬಾಗಿಲಿಗೆ ಬಂದು ಬೇರೆ ಯಾರೂ ಇಲ್ಲ, ಬಾಗಿಲ ಸೇವಕ ಒಬ್ಬ ಇದಾನೆ, ಎನ್ನುವುದನ್ನು ನೋಡಿ ಏನೂ ಹೇಳದೆ ಊರ ಬಾಗಿಲ ಕಡೆಗೆ ನಡೆಯುತ್ತಾನೆ.)

ಸ್ಥಾನ ೭

ಅದೇ ವೇಳೆ. ಈ ಭವನದ ಪಕ್ಕದ ಅರಸನ ಮಂದಿರದಲ್ಲಿ ನಡುಸಾಲೆ. ಅರಸ ಇದಾನೆ. ಮಂಜರಿ ಬರುತ್ತಾಳೆ.

ಮಂಜರಿ.—ಏನಣ್ಣಾ, ಹೇಳಿ ಕಳುಹಿದೆಯಂತೆ.

ಅರಸ.— ಬಾ ಮಂಜು.

ಬೀಗರನು ಬೀಳ್ಕೊಡುತ ನಾ ನಿನ್ನ ನನ್ನೊಡನೆ
ಬಾ ಎಂದು ಕರೆಯಬೇಕೆಂದಿದ್ದು ಅದ ಮರೆತೆನು.
ಅವರ ಸಾಗಿಸಿ ಬಂದೆನೇ ಈಗ ನೆನಪಾಯ್ತು.
ಅಕ್ಕ ಭಾವನ ಜೊತೆಗೆ ಇರುತ ನೀ ಏತರದೆ
ಮಂಗಾಟ ಆಡುವೆಯೊ ಎನ್ನುವುದೆ ನನಗೆ ಭಯ.

ಆದರಿಂದ ಮನೆಗೆ ಬಂದೊಡನೆ ನಿನ್ನನು ಕರೆಯ
ಆಳನಟ್ಟಿದೆನು.

ಮಂಜರಿ.— ಮಂಗಾಟ ಆಡಿದುದಾಯ್ತು,
ಅಣ್ಣಯ್ಯ.

ಅರಸ.— ಎಲ ತಂಗಿ! ಅದು ಏನು ಮಾಡಿದೆಯೆ
ತುಂಟಮ್ಮ?

ಮಂಜರಿ.— ಭಾವನವರಿಗೆ ತನ್ನ ಹೆಂಡತಿಗೆ
ತಂಗಿ ನಾನಿಹೆನೆಂದು ನಾನು ಅಕ್ಕನ ತೀರ
ಹೋಲುವೆನು ಎಂದು ತಿಳಿಯದು. ಕೋಣೆಯಲಿ ಅವರು
ಒಬ್ಬರೇ ಕುಳಿತಿಹರು. ನಾನಲ್ಲಿ ಹೋದೆನು.
ಒಲುಮೆಯಲಿ ಅವರೆನ್ನ ಬಾಯೆಂದು ಕರೆದರು.
ನಾ ಅಕ್ಕ ಅಲ್ಲ ಎಂಬಳು ನಾನು. ಅನಿತರಲಿ,
ಮನಸಿನಲಿ ಒಂದು ಯೋಚನೆ. ಭಾವನವರ ಈ
ತಪ್ಪು ತಿಳಿವಳಿಕೆಯನು ಬಳಸಿ ಇವರನು ಇನಿಸು
ತಬ್ಬಿಬ್ಬು ಮಾಡುವುದೆ ಎಂದು. ನನ್ನನು ಕರೆದ
ಪರಿ ನನಗೆ ತಿಳಿಯಲಿಲ್ಲೆಂಬಂತೆ ಸುಮ್ಮನೆ
ಹೊರಟು ಬಂದೆನು ನಾನು. ಬಳಿಕ ಉದ್ಯಾನದಲಿ
ಅವರು ನಡೆಯುವ ವೇಳೆ ದಾರಿಯದು ಹಾಲ್ಗಲ್ಲ
ಪೀಠದಲಿ ನಾನು ಕುಳಿತೆನು. ಅವರು ಬಳಿ ಸಾರಿ
ತನ್ನ ಸತಿ ಎಂದೆನ್ನ ಸಲಿಗೆಯಲಿ ನುಡಿಸಿದರು.
ಏನಿನಿತು ಸಲಿಗೆ ಎನ್ನುತ ನಾನು ಅಲ್ಲಿಂದ
ಹೊರಟುಬಿಟ್ಟೆನು. ತನ್ನ ಹೆಂಡಿರೇತಕೆ ಇಂತು
ಕೊಸರಿಕೊಂಡಳು, ಅವರಿಗಿದು ಒಂದು ಸೋಜಿಗ.
ಮತ್ತೊಂದು ದಾರಿಯಲಿ ನಡೆಯುತಿರೆ ಮತ್ತೊಂದು
ಹಾಲ್ಗಲ್ಲ ಪೀಠದಲಿ ಮತ್ತೆ ನಾ ಕುಳಿತಿಹೆನು.
ಮತ್ತೊಮ್ಮೆ ಒಲುಮೆಯಲಿ ಬಳಿಸಾರಿ ಅವರೆನಗೆ
ನಿನಗೇಕೆ ಬೇಸರೆಂದರು. " ನೀನು ನಾನೆಂದು

ಬಾ ಎಂದು ಹೋಗೆಂದು ಹೇಳುವುದು ನಮ್ಮಲ್ಲಿ
ಮರ್ಯಾದೆ ಅಲ್ಲ. ಇದು ಹಾಡಿ ಗೌಡರ ರೀತಿ,"
ಎಂದು ನಾನಲ್ಲಿಂದ ಹೊರಟು ಹೋದೆನು. ಭಾವ
ತುಂಬ ಗೊಂದಲದಲ್ಲಿ ಸಿಲುಕಿಕೊಂಡಿರಬೇಕು.
ನಡೆ ಮುಗಿಸಿ ಒಳಗೆ ಬರರೇ ಅಕ್ಕ ಕಾದಿದ್ದು
ಇವರ ನಯದಲಿ ಕರೆದು ಕುಳ್ಳಿರಿಸಿ ಪಕ್ಕದಲಿ
ತಾ ಕುಳಿತು ನುಡಿಸಿ ಉಪಚರಿಸಿದಳು. ಇದೆ ನನ್ನ
ಮಂಗಾಟ, ಇನ್ನಷ್ಟು ಆಡೆ ಹೊತ್ತಿರಲಿಲ್ಲ.

ಅರಸ.—ತಂಗ್ಯಮ್ಮ, ನೀನಿಂತು ಕೆಟ್ಟಮಾತನು ಆಡಿ
ಮನೆಯಳಿಯನಾದವರ ಮನವ ಕೆಡಿಸಿಹೆಯಲ್ಲ.
ಅವರು ಕೋಪಿಸದಿಹರೆ? ಕೋಪಿಸಲು ಪರಿಹಾರ?
ಏನ ಮಾಡುವುದು?

ಮಂಜರಿ.— ಮಾಡುವುದೇನ ಅಣ್ಣಯ್ಯ?
ಅಕ್ಕನೂ ಭಾವನೂ ನಡುಸಾಲೆಯಲಿ ಕುಳಿತು
ಮಾತಾಡುತಿಹರಲ್ಲ. ಬಾ, ಅಲ್ಲಿ ಹೋಗುವ.
ಅಕ್ಕ ಪಕ್ಕದಿ ಕುಳಿತು ನುಡಿಸುತಿಹ ಹೊತ್ತಿನಲಿ
ಅವಳದೇ ಪ್ರತಿರೂಪ ನಾನು ಎದುರಲಿ ನಿಲಲು,
ಅವರು ಇದು ಯಾರೆಂದು ಕೇಳುವರು. ನಾ, "ನಾನು
ನನ್ನ ಅಕ್ಕನ ತಂಗಿ. ತಾಯ್ತಂದೆ ನನ್ನನು
ಮಂಜರಿ ಎಂದು ಕರೆದರು. ನಮ್ಮ ಅಣ್ಣಯ್ಯ
ನನಗೆ ತುಂಟಮ್ಮ ಎಂದಿನ್ನೊಂದು ಹೆಸರಿಟ್ಟು
ಮಾರ್ಯಾದೆ ಮಾಡಿಹರು. ನೀವು ನಡೆಯುವವೇಳೆ
ಉದ್ಯಾನದಲಿ ಹಾಲುಗಲ್ಲ ಪೀಠದ ಮೇಲೆ
ಕುಳಿತದ್ದು ನಿಮ್ಮೊಡನೆ ಒರಟಾಟ ಆಡಿದುದು
ನಾನು ಈ ತುಂಟಮ್ಮ. ನಿಮ್ಮ ಸತಿ ಈ ಅಕ್ಕ
ಅಲ್ಲ" ಎಂಬೆನು. ತುಂಟು ಈ ನಾದಿನಿಯದೆಂದು
ಭಾವ ತಿಳಿಯುವರು. ತಿಳಿದುದೆ ನಾನು ಅವರಿಗೆ

ನುಡಿದ ಆ ಒರಟು ನುಡಿ ಎಲ್ಲ ನಗೆಯಲಿ ನಡೆದ
ಹುಚ್ಚಾಟವೆಂದವರು ಕಾಣುವರು. ನಾದಿನಿಯು
ಹುಸಿ ಮುನಿಸಿನಿಂದ ಗದ್ದರಿಸಿ ಬದಿಗೆಳೆಯುವರು.
"ನೀನು ನನ್ನನು ಇಂತು ಹಂಗಿಸುವುದೇ" ಎಂದು
ನಗುನಗುತ ಕೇಳುವರು. ಬಾ, ಅಲ್ಲಿ ಹೋಗುವ.
ಅವರಿಂತು ನಡೆವುದನು ನೋಡಿ ಸುಖಪಡುವೆ. ಬಾ.

ಅರಸ.—ಬರುವೆನೇ ತುಂಟಮ್ಮ. ಏನೇನ ಹೇಳುವೆಯೊ
ಹೇಳಿ, ಭಾವನ ನಗಿಸಿ ಮನದ ಬೇಸರ ಹರಿಸಿ,
ಎಲ್ಲವೂ ಚೆನ್ನ ಅಪ್ಪಂತೆಸಗು. ಇದೊ, ಬಂದೆ.
ವಸ್ತ್ರವನು ಹೊದ್ದು ಬರುವೆನು. ಇರು.

ಮಂಜರಿ.— ಬಾ ಅಣ್ಣ.

ಸ್ಥಾನ ೮

ಹತ್ತು ನಿಮಿಷ ಆಚೆ. ಅತಿಥಿ ಮಂದಿರದ ನಡುಸಾಲೆ. ಕೂರ್ಚದ ಮೇ[...]
ಮಾಲತಿ ಕುಳಿತಿದ್ದಾಳೆ. ಅರಸ, ಮಂಜರಿ ಬರುತ್ತಾರೆ.

ಅರಸ.—ಅಳಿಯದಿರು ಎಲ್ಲಿ ತಂಗಿ?

ಮಾಲತಿ.— ಒಳಗೆ ಇಹರಣ್ಣ.
ಕುಳ್ಳಿರಿ. ಬರುವರು.

ಮಂಜರಿ.— ನಾನವರ ಕರೆತಹೆನು.
ಇಲ್ಲಿ ಕುಳ್ಳಿರು ಅಣ್ಣ.
(ಎಂದು ಒಳಗೆ ಹೋಗುವಳು. ಅಲ್ಲಿ ಇಲ್ಲಿ ಹುಡುಕಿ ಹಿಂತಿರುಗುವಳು. ಬಂದು,

ಮಂಜರಿ.—ಭಾವ ಕೋಣೆಯಲಿಲ್ಲ. ಬೇರೆ ಎಲ್ಲಿಯು ಇಲ್ಲ.
ಸೇವಕರ ಕೇಳಿದೆನು. ಕೋಣೆ ಹೊಕ್ಕುದನವರು
ನೋಡಿದರು. ಹೊರಗೆ ಬಂದುದ ನೋಡಲಿಲ್ಲಂತೆ.
ಭಾವ ಕೋಣೆಯಲಿಲ್ಲ. ಬೇರೆ ಎಲ್ಲಿಯು ಇಲ್ಲ.

ಮಾಲತಿ.—ಒಳಗೆ ಇರುವರು ಮಂಜು. ಎಲ್ಲಿಯೂ ಇಲ್ಲವೆ
ಎಲ್ಲಿ ಹೋದಾರು?

ಅರಸ.— ನಾನೇ ಹೋಗಿ ನೋಡುವೆನು.

(ಎಂದು ಒಳಕ್ಕೆ ಹೋಗುವನು. ಸ್ವಲ್ಪ ಹೊತ್ತು ಬಿಟ್ಟು ಹಿಂತಿರುಗುವನು. ಬಂದು)

ಇಲ್ಲ. ನಿನ್ನರಸ ಮನೆಯೊಳಗಿಲ್ಲ. ಸೇವಕರು
ಅವರೆಲ್ಲಿಗಾದರೂ ಹೋದುದನು ಕಾಣರು.
ನನ್ನ ಕಾಣುವ ಎಂದು ಹೋಗಿಹರೊ? ಯಾರಲ್ಲಿ?

(ಸೇವಕ ಒಳಕ್ಕೆ ಬಂದು)

ಸೇವಕ.—ಹಾ ಸ್ವಾಮಿ.

ಅರಸ.— ಅಳಿಯದಿರು ನನ್ನ ನೋಡುವ ಎಂದು
ಅರಮನೆಗೆ ಹೋಗಿಹರೆ, ನೋಡಿ ಬಾ.

(ಸೇವಕ ಹೋಗುತ್ತಾನೆ ಐದು ನಿಮಿಷದ ಬಳಿಕ ಬರುತ್ತಾನೆ. ಬಂದು)

ಸೇವಕ.—ಹಾ ಸ್ವಾಮಿ. ಅಳಿಯ ದೇವರು ಅಲ್ಲಿ ಹೋಗಿಲ್ಲ.

ಅರಸ.—ಒಳಿತು, ಬಿಡು, ಇಲ್ಲಿಲ್ಲ. ಅಲ್ಲಿಲ್ಲ. ಇನ್ನೆಲ್ಲಿ?

(ಮಾಲತಿ ಮುಖಗೆಟ್ಟು ನಿಲ್ಲುತ್ತಾಳೆ. ಕ್ಷಣ ಬಿಟ್ಟು ಒಳಕ್ಕೆ ಹೋಗುತ್ತಾಳೆ. ಮತ್ತೆ ಬರುತ್ತಾಳೆ. ಬಂದು)

ಮಾಲತಿ.—ಅಣ್ಮ ಮನೆಯನು ಬಿಟ್ಟು ಹೋಗಿಹುದು ದಿಟ, ಅಣ್ಣ.
ಎಲ್ಲಿ ಹೋಗಿರಬಹುದು ಹುಡುಕಿಸಿರಿ.

(ಎಂದು ಹೇಳಿ ಪೀಠದ ಮೇಲೆ ಕುಸಿದು ಬೀಳುತ್ತಾಳೆ)

ಮಂಜರಿ.— ಹುಡುಕಿಸಿರಿ,
ಅಣ್ಣ; ಅವರಿಲ್ಲಿ ಹತ್ತಿರದಲೆಲ್ಲೋ ಇಹರು.
ತನ್ನ ಸತಿಯೆಂಪೆಣೆಸಿ ಅವರೆನ್ನ ನುಡಿಸಿದ
ಆ ಒಲವ ಪರಿಯೇನು; ಆ ದನಿಯ ಮೆಲುಪೇನು;
ನೋಟದಕ್ಕರೆಯೇನು; ತುಟಿಯ ಅರೆನಗೆಯೇನು;
ಅವರು ಅಕ್ಕನ ಬಿಟ್ಟು ಎಲ್ಲೆ ಹೋಗುವುದುಂಟೆ?
ಹತ್ತಿರವಲೇ ಎಲ್ಲೊ ಇರುವರು, ಬರುವರು.

ಸ್ಥಾನ ೯

ಅಪರ ಮೂರನೆಯ ದಿನ. ರಾಮಗಿರಿ ಅರಮನೆ. ತಾಯಿ, ಗುರು.

ತಾಯಿ.—ಸಚಿವರೈತಂದಿಹರೆ? ಬರಹೇಳಿ. ಕುಳ್ಳಿರಲಿ.
(**ಸಚಿವ** ಬರುತ್ತಾನೆ. ಗುರು ಹೊರಕ್ಕೆ ಹೋಗುತ್ತಾನೆ)
ಹಿರಿಯರಿಗೆ ವಂದನೆ. ದಯಮಾಡಿ ಕುಳ್ಳಿರಿ.
ನಾಳೆ ದಂಪತಿಗಳೈತರುವ ದಿನ. ಬಹರೆಂದು
ತಿಳಿಸ ದಯಮಾಡಿದಿರ ?

ಸಚಿವ.— ಇಲ್ಲ. ಬೇರೆಯದೊಂದು
ಸಂಗತಿಯನರಿಕೆಮಾಡಲು ನಮ್ಮ ಅರಸರು
ನನ್ನನಟ್ಟಿಹರು.

ತಾಯಿ.— ಸಂಗತಿ ಅಶುಭ ಎನ್ನುವುದು
ತಮ್ಮ ಪರಿಯಿಂದ ಕಾಣುತಿದೆ. ಬೇಗನೆ ಹೇಳಿ.
ಹಿಂತೆಗೆಯುವುದು ಸಾಕು. ಹೇಳಿರಿ. ಏನು ಅದು ?

ಸಚಿವ.—ತಾವಂದು ಆರ್‍ಯರ ಸಮೇತ ನಮ್ಮೂರಿಂದ
ಹೊರವಂಟ ಅದೆ ದಿವಸ, ಮಧ್ಯಾಹ್ನವಾಗಿಲ್ಲ.
ತಾವೆಲ್ಲ ಇಳಿದಿದ್ದ ಅತಿಥಿ ಮಂದಿರದಲ್ಲಿ
ಅಳಿಯದಿರು ಸತಿಯೊಡನೆ ಕೆಲಹೊತ್ತು ಕುಳಿತಿದ್ದು
ಒಳಗಡೆಗೆ ಹೋದರು. ಕೆಲ ನಿಮಿಷ ಕಳೆದಿರಲು
ಅರಸರವರನು ಕಾಣಬೇಕೆಂದು ಬಂದರು.
ತಂಗಿ ಒಬ್ಬರೆ ಇರಲು ಅಳಿಯದಿರು ಎಲ್ಲಮ್ಮ
ಎಂದು ಕೇಳಿದರು. ನೋವರಿ, ಒಳಗೆ ಇಹರೆಂದು
ಹೇಳಿದರು. ಎಷ್ಟು ಹೊತ್ತಾದರೂ ಅಳಿಯದಿರು
ಬರಲಿಲ್ಲ. ಒಳಗಡೆಗೆ ಹೋಗಿ ನೋಡಲು ಅವರು
ಎಲ್ಲಿಯೂ ಇರಲಿಲ್ಲ. ಎಲ್ಲಿ ಹೋಗಿರಬಹುದು
ಎಂದು ನೂರೆಡೆ ಹುಡುಕಿ ಆಯಿತು. ಅವರೆಲ್ಲಿ
ಇದುವರೆಗೆ ತಿಳಿದಿಲ್ಲ. ಅರಸರು ತಂಗಿಯರು

ಎದೆ ಬಿರಿದು ಕುಳಿತಿಹರು. ಈ ದುಃಖ ವಾರ್ತೆಯನು
ತಮ್ಮ ಸನ್ನಿಧಿಯಲ್ಲಿ ಅರಿಕೆಮಾಡೆಂದೆನಗೆ
ಆಜ್ಞೆ ಮಾಡಿದರು. ಬಂದೆನು.

ತಾಯಿ.—(ಕೋಪದಿಂದ ಎದ್ದು) ಪಾಪಿ ಜನ ನೀವು
ಮೂರು ತಿಂಗಳ ಹಿಂದೆ ಬಂದು ಹಿಂದಿನ ಹಗೆಯ
ಮರೆತಿಹೆವು ಎಂದು ಸುಳ್ಳಾಡಿ, ಮಗಸಿಗೆ ಮನೆಯ
ಮಗಳ ಕೊಡುವೆವು ಎಂದು ನಮ್ಮ ಬೆಳ್ಳಿಸಿ ಕರೆದು,
ಮದುವೆ ಮಾಡುವ ಆಟವಾಡಿ ಮಗನನು ಕೊಂದು,
ಏನಾದರೋ ಕಾಣೆನೆಂದು ಬೊಂಕುತಲಿಹಿರಿ.
ಹಗೆಯಾದವನು ನಮ್ಮ ಕೆಡಿಸಬಹನಲ್ಲದೆ
ಉದ್ಧಾರ ಮಾಡಬರುವನೆ ಎಂದು ನಮಗಂದು
ಎಚ್ಚರಿಲ್ಲನೆ ಹೋಯ್ತು. ಆಯಿತೆ ನಿಮ್ಮಿಚ್ಛೆ
ನಡೆದಿಹುದು. ಸಂತೋಷವಾಗಿ ಬಾಳಿರಿ ಹೋಗಿ.

ಸಚಿವ.—ದುಃಖದಲಿ ತಾವಿಂತು ನುಡಿಯುವುದು ಸಹಜವೇ.
ಇರುತ ಬೇಡುವೆನು. ಅರಸರು ತಮ್ಮ ಸೋದರಿಯ
ಮಾಂಗಲ್ಯವನು ಮದುವೆಯಾದ ಮರುದಿನ ತಾವೆ
ಹರಿದರೆನಬರುವುದೇ ?

ತಾಯಿ.— ತಂಗಿಯೋ ಮತ್ತಾರೊ
ಕೀಳು ಜಾತಿಯ ಹೆಣ್ಣೊ.

ಸಚಿವ.— ತಂಗಿಯೇ. ತಂಗಿಯೇ.
ಅಹುದೆಂದು ನಾ ಬಲ್ಲೆ. ಅವರ ಸೇವಕನೆಂದು
ನಾನಿಂತು ಅರಿಕೆ ಮಾಡುತಲಿಲ್ಲ. ನಮ್ಮರಸ,
ನಾ ಸತ್ಯಮಾಡುವೆನು, ಅಂಥ ಪಾತಕಿಯಲ್ಲ.
ತಮ್ಮ ಪುತ್ರರು ಕಾಣದಾಗಿಹರು. ಇದು ತಮಗೆ
ಎನಿತು ದುಃಖದ ಮಾತು ನಮ್ಮರಸರಿಗು ಅನಿತೆ
ಸಹಿಸಬರದೆಂಬ ದುಃಖದ ಮಾತು. ಅಳಿಯದಿರು
ಎಲ್ಲಿ ಹೋಗಿರಬಹುದು ಎಂದು ನೋಡಲು ಅವರು

ಜನಪನಟ್ಟ ಹರು ಬೇಗನೆ ತಮಗೆ ಅವರ ನೆಲೆ
ದೊರೆವುದೆಂಬಾಶೆಯಲಿ ಕಾದಿಹರು. ದೊರೆವುದೇ
ದಿಟವೆಂದು ನಂಬಿಹರು. ದೊರೆತಾಗ ಅದ ತಮಗೆ
ತಿಳಿಸೆ ನಾ ಮತ್ತೆ ಬರುವೆನು. ಅಂತು ಬರುವಂತೆ
ಎರಡು ಮನೆತನದ ದೇವರು ಅನುಗ್ರಹಿಸಲಿ.

(ಎಂದು ಕೈಮುಗಿದು ಹೊರಕ್ಕೆ ಹೋಗುವನು.)

ತಾಯಿ.—ಗುರುಗಳೇ. (ಎಂದು ನೋಡುತ್ತಾಳೆ ; ಗುರು ಇಲ್ಲ.)
ಗುರು ಏಕೆ? ನನ್ನ ಜೊತೆಗಳುವುದಕೆ ?
ದೇವರೇ ನಿನ್ನ ಮಗುವನು ನೀನೆ ರಕ್ಷಿಸು.

(ಎಂದು ಹೋಗುತ್ತಾಳೆ.)

ಅಂಕ ಮೂರು

ಸ್ಥಾನ ೧

ಐದು ವರ್ಷ ಕಳೆದಿದೆ. ಉಜ್ಜಯಿನಿ ನಗರದ ಒಂದು ಬೀದಿ. ಕಾಳಿದಾಸ ಬರುತ್ತಾನೆ.

ಕಾಳಿದಾಸ.—ಭರತಪುರವನು ಬಿಟ್ಟು ದೇಶಾಟನದಿ ತೊಡಗಿ
ಹೊರಟ ಆ ದಿನದಿಂದ ಈ ದಿನಕೆ ಸರಿಯಾಗಿ
ಐದು ವರ್ಷದ ಕಾಲ ಕಳೆದಿಹುದು. ಇದರಲಿ,
ಕೇತಾರನಾಥ ಬದರೀನಾಥ ಶ್ರೀನಗರ
ಗಂಗೋತ್ರಿ ವಿಷ್ಣುಪದ ಸೇತು ಹರಿದ್ವಾರ
ಜ್ವಾಲಾ ಕುರುಕ್ಷೇತ್ರ ವಾರಣಾಸಿ ಪ್ರಯಾಗ
ಗಯೆ ಅಂತೆ ದೂರ ಪೂರ್ವದ ಕಾಮರೂಪ
ಅರ್ಜುನನ ಮಣಿಪುರಿ ಕಾಳಿಘಟ್ಟ ಕಳಿಂಗ
ಆಂಧ್ರ ಕರ್ಣಾಟಕ ದ್ರವಿಡ ರಾಘವಸೇತು
ಕೇರಳ ಮಹಾರಟ್ಟ ಭೂಮಿ ಗೋಮಂತಕ

ಶ್ರೀಕೃಷ್ಣನ ದ್ವಾರಕಾ ಸಿಂಧು ಘೂರ್ಜರ,
ಇನಿತು ದೇಶವ ಸುತ್ತಿ ಇಲ್ಲಿಗೈತಂದಿಹೆನು.
ಎಳೆತನದಿ ನಾ ನೋಡಿದುಜ್ಜಯಿನಿ ಎಳೆಯನಿಗೆ
ಸ್ವರ್ಗಲೋಕದ ಒಂದು ಖಂಡ ಭೂಮಿಗೆ ಬಂದು
ತೊಳಗುತಿಪೆ ಎಂದು ಕಂಡುದು ತೀರ ಸಹಜವೇ.
ಇಂದು ನೋಡುವೆನೆ ಅದು ಬೆಳೆದ ಈ ಕಣ್ಣಿಗೂ
ಅದೆ ಚೆಲುವ ಹಿರಿ ಹೊಗರ ಮೋಹವನು ಬೀರುತಿದೆ.
ಭಾರತದ ಪುಣ್ಯಭೂಮಿಯ ಮಧ್ಯದಲಿ ನೆಲಸಿ,
ಅದರ ಹೃದಯವೆ ಆಗಿ ಬೆಳಗುತಿಹ ಉಜ್ಜಯಿನಿ,
ನನ್ನೊಲವಿನೀ ಪ್ರದೇಶದ ರಾಜಧಾನಿ, ನೀ
ಇಂತೆ ಎಲ್ಲಾ ಕಾಲ ತೊಳಗುತಿರು, ಬೆಳಗುತಿರು.
ಇನ್ನೀಗ ನನ್ನ ದೇಶಾಟನ ಕ್ರಮ ಮುಗಿದು
ನನ್ನ ನಡೆವಳಿ ಏನು ಇದನು ಯೋಚಿಸಬೇಕು.
ಮೊದಲು ಊರಲಿ ತಾಯಿ ಗುರು ಇವರ ಪರಿಯೇನು,
ಬಳಿಕ ಆ ಭರತಪುರದರಸನದು ಪರಿಯೇನು,
ಇದ ತಿಳಿಯಬೇಕು. ಆ ಬಳಿಕ ಊರಿಗೆ ಹೋಗಿ
ಬಾಳುವುದೆ, ಇಲ್ಲಿಯೇ ನಿಲ್ಲುವುದೆ, ಇದ ಕುರಿತು
ನಿರ್ಣಯಕೆ ಬರಬೇಕು. ತಾಯಿ, ಗುರು ಬಹು ನೊಂದು
ಅದು ಏನೆ ಆಗಿರಲು ಅದರಲಚ್ಚರಿಯಿಲ್ಲ.
ಪಾಪ. ನಾ ಹಿರಿಯರಿವರನು ಸಹಿಸಬಾರದ
ದುಃಖದಲಿ, ಶಂಕೆಯಲಿ, ಈಡಾಡಿ ನಡೆದೆನು.
ಆಗ ಇದು ಅಲ್ಲದಿನ್ನೊಂದು ತಗ ಬಹ ದಾರಿ
ಕಾಣಲಿಲ್ಲೆನಗೆ. ಊರಿನ ಸುದ್ದಿಯನು ತಿಳಿಯೆ
ನನ್ನ ಗುರುಗಳ ಅನಿತು ದೂರ ಅಲ್ಲದ ಬಂಧು
ಜ್ಞಾತಿ ಶ್ರೀ ಮಿಶ್ರರು ಈಗಳೂ ಇಹರಾಗೆ
ಅವರ ಕೇಳಲು ಬಹುದು. ನಾನವರ. ಅವರೆನ್ನ,
ಈ ಮುನ್ನ ಕಂಡಿಲ್ಲ. ಅದರಿಂದ ಅವರಿಗೆ

ನಾ ಯಾರು ಎಂಬುದನು ಹೇಳದೆಯೆ ಏತರದೊ
ಮಾತೆಂಬ ತೆರ ಎತ್ತಿ ಏನನೇ ಅರಿತಿಹರೆ
ಅದ ತಿಳಿಯಬೇಕು. ಅವರಿಗೆ ತಿಳಿಯಲಿಲ್ಲೆನಲು
ನಮ್ಮ ನಾಡತ್ತಣಿಂದಿಲ್ಲಿ ನಗರಿಗೆ ಬಂದು
ಬೇಹಾರದಲಿ ತೊಡಗಿ ಬಾಳುತಿಹ ಮಂದಿಯಲಿ
ಬಲ್ಲವರು ಯಾರು ಇರಬಹುದು ಅವರನು ಕಂಡು
ಏನು ತಿಳಿವುದು ನೋಡಬೇಕು. ಈಗಿದೆ ದಾರಿ.

ಸ್ಥಾನ ೨

ಸ್ವಲ್ಪ ಆಮೇಲೆ ರಾಮಮಿಶ್ರರ ಮನೆ. ಮನೆಯ ಮುಂದೆ ಮನೆಯ ಯಜಮಾನಿ ನಿಂತಿದ್ದಾರೆ. ಕಾಳಿದಾಸ ಬರುತ್ತಾನೆ.

ಕಾಳಿದಾಸ.—ತಾಯಿಯವರಿಗೆ ನಮಸ್ಕಾರ. ಇದು ಅರಮನೆಯ
ಋತ್ವಿಕ್ ಮಹಾಶಯರು ರಾಮಮಿಶ್ರರ ಮನೆ
ಎಂದು ಹೇಳಿದರು. ಋತ್ವಿಕರಿಹರೆ ?

ಯಜಮಾನಿ.— ಅರಮನೆಗೆ
ಹೋಗಿಹರು. ಇಷ್ಟರಲೆ ಬರಬಹುದು. ಬನ್ನಿರಿ.
ನೀವು ಯಾರು ?

ಕಾಳಿದಾಸ.— ನಾನು ಅರಿಹಾವರದ ಒಬ್ಬ
ಬೇಸಾಯಗಾರ. ವಿಶ್ವೇಶ್ವರನ ದರ್ಶನಕೆ
ವಾರಣಾಸಿಗೆ ಹೋಗಿ ಇದೆ ಈಗ ಬಂದಿಹೆನು.
ಇಲ್ಲಿ ಕೆಲದಿವಸ ಇರಬೇಕಾಗಿಹುದು. ಋತ್ವಿಕರು
ರಾಮಗಿರಿ ಗುರುಮನೆಯ ರಾಮಮಿಶ್ರರ ಬಂಧು
ಎಂದು ಕೇಳಿದ್ದೆ. ಹಿರಿಯರ ಕಾಣಬೇಕೆಂದು
ಬಂದೆ.

ಯಜಮಾನಿ.—ಸಂತೋಷ. ಕೆಲದಿನ ಇಲ್ಲಿ ನಗರಿಯಲಿ
ನಿಲ್ಲಬೇಕೆನೆ ಅತಿಥಿಗಳಿಗೆಂದೆ ಈ ಕೋಣೆ

ಇಹುದು. ಇದರಲಿ ತಂಗಬಹುದು. ಇನ್ನೇನವರು
ಬರುವ ಹೊತ್ತಾಗಿಹುದು. ಕುಳ್ಳಿರಿ

ಕಾಳಿದಾಸ.— ಆಯ್ತವ್ವ.
ರಾಮಗಿರಿಯಲಿ ತಮ್ಮ ಬಂಧು ಸುಖವಾಗಿಹರೊ ?
ಆ ಹಿರಿಯರನು ಎರಡು ಮೂರು ವರ್ಷದ ಹಿಂದೆ
ನೋಡಿದ್ದೆ. ವೃದ್ಧಾಪ್ಯ ಹೊರತು ಉಳಿದಂತವರ
ದೇಹ ಬಹು ದೃಢ.

ಯಜಮಾನಿ.— ನಾವು ಬಂಧುಗಳೆ ಆದರೂ
ಅವರು ನಾಡಲಿ, ನಾವು ನಗರಿಯಲಿ, ಬಾಳುತ್ತ
ಬಂದು ಹೋಗುವುದನಿತು ಸುಲಭ ಅಲ್ಲೆಂದಾಗಿ
ಒಬ್ಬರೊಬ್ಬರ ಕಾಂಬುದಪುರೂಪ. ಹಿರಿಯರು
ಎಂತಿಹರು ನಾವು ಕಾಣೆವು. ಅವರು ಸುಖವಾಗಿ
ಇರಬೇಕು.

ಕಾಳಿದಾಸ.— ಒಳಿತವ್ವ. ನಾನು ಪೇಟೆಗೆ ಹೋಗಿ
ಋತ್ವಿಕರು ಐತರುವ ವೇಳೆಗಿಲ್ಲಿಗೆ ಬಹೆನು

ಯಜಮಾನಿ.—ಒಳ್ಳಿತು.

ಕಾಳಿದಾಸ.— ನಮಸ್ಕಾರ.

ಯಜಮಾನಿ.— ಒಳ್ಳಿತು ; ಬನ್ನಿರಿ.

ಸ್ಥಾನ ೩

ಅದೇ ಮನೆ. ಮಧ್ಯಾಹ್ನ. ಋತ್ವಿಕ ಕುಳಿತಿದಾನೆ. ಕಾಳಿದಾಸ ಬರುತ್ತಾನೆ.

ಋತ್ವಿಕ.—ಬನ್ನಿರಿ. ಬೆಳಗಾಗ ಬಂದಿದ್ದಿರೆಂದರು.

ಕಾಳಿದಾಸ.—ಅಹುದು. ನಮಸ್ಕಾರ. ಯಜಮಾನಿ ತಾಯವರು,
ಋತ್ವಿಕರು ಇನಿತರಲೆ ಬಂದಾರು, ಕುಳ್ಳಿರಿ,
ಎಂದು ಬೆಸಸಿದರು. ಪೇಟೆಯ ಕೆಲಸ ಇನಿಸಿತ್ತು.
ಮತ್ತೆ ಬರುವೆನು ಎಂದು ಬಿನ್ನವಿಸಿ ಪರಿಚಯದ
ಒಬ್ಬರನು ನೋಡೆ ನಾ ಊರೊಳಗೆ ಹೋದೆನು.

ಋತ್ವಿಕ.—ಒಳ್ಳಿತಾಯಿತು. ಬನ್ನಿ. ರಾಮಗಿರಿ ನಾಡಿಂದ
ಬಂದವರು ಎಂದು ಹೇಳಿದಿರಂತೆ. ರಾಮಗಿರಿ
ಗುರುಮನೆಯ ರಾಮಮಿಶ್ರರು ನಮ್ಮ ಬಂಧುಗಳು
ಎಂಬುದನು ತಾವು ಬಲ್ಲಿರಿ ಎಂದು ಹೇಳಿದರು.
ನನ್ನ ಹೆಸರೂ ರಾಮಮಿಶ್ರ. ಆ ಹಿರಿಯರು
ನನಗಿಂತ ಹಲವರುಷ ಹಿರಿಯರು. ಬಹುನಿಷ್ಠೆ
ನಿಸ್ಪೃಷ್ಟ ಆಚಾರ ನಮ್ಮ ಆ ಹಿರಿಯರದು.
ನಿಮ್ಮೂರು?

ಕಾಳಿದಾಸ.— ಅರಿಹಾವರ. ರಾಮಗಿರಿ ನಾಡು
ಒಳಗೊಂಡ ಐದು ಸೀಮೆಯಲಿ ಅರಿಹಾವರ
ಉತ್ತರದ ಕೊನೆಯದು. ಆರ್ಯರಿದ ಬಲ್ಲಿರಿ
ಎಂದೆಣಿಸುವೆನು.

ಋತ್ವಿಕ.— ಬಲ್ಲೆ.

ಕಾಳಿದಾಸ.— ನಾನಲ್ಲಿಯೇ ಬೆಳೆದು,
ಕಲಿವಿನಲಿ ಮನವಾಗಿ ಬಲ್ಲ ಜನರನು ಸೇರಿ
ಇನಿತನಿತು ವಿದ್ಯೆಯನು ಕಲಿತು, ಈಚೆಗೆ ಕೆಲವು
ಕವಿತೆಗಳ ರಚಿಸಿಹೆನು. ಇಂಥ ಕೆಲಸಕೆ ನಮ್ಮ
ಸಣ್ಣ ಊರುಗಳಲ್ಲಿ ಪ್ರೋತ್ಸಾಹ ಸಾಲದು.
ಬಲ್ಲವರು ಕಡಮೆ. ಜೊತೆ ಬರಹಗಾರರು ಇಲ್ಲ.
ಎನಲು ನಗರವನು ಸೇರುವುದು ಒಂದೇ ಮಾರ್ಗ,
ನನ್ನಂಥ ಜನರಿಗೆ. ಮೇಲಾಗಿ ಇಲ್ಲೀಗ
ಪ್ರಭುಗಳಾಗಿರುವವರು ಕವಿ ಪಕ್ಷಪಾತಿಗಳು,
ಪಂಡಿತರ ಕುಲಕೇ ಉದಾರ ಆಶ್ರಯವೀವ
ಸನ್ಮನದ ದೊರೆ, ಸ್ವಯಂ ಪಂಡಿತರು, ಕವಿಗಳು,
ಎಂದು ನಾಡೆಲ್ಲ ಹೊಗಳುತಲಿಹುದು. ಇಂತಾಗಿ
ನಾನು ಇವರಾಸ್ಥಾನದಲಿ ಆಶ್ರಯವ ಬೇಡಿ
ಇಲ್ಲಿ ನಿಲ್ಲುವ ಎಂದು ಬಂದಿಹೆನು. ನಾ ಬಲ್ಲ

ರಾಮಗಿರಿ ಹಿರಿಯ ಗುರುಗಳ ಬಂಧುಗಳು ತಾವು,
ಅರಮನೆಯ ಧರ್ಮಾಧಿಕಾರಿ ಪದವಿಯೊಳಿರುತ
ಹೊಸ ಜನಕೆ ನೆರವೀವ ಕರುಣಿಗಳು, ನನ್ನಂಥ
ಕವಿ ಜನಕೆ ಪ್ರಭುಗಳಾಸ್ಥಾನದಲಿ ಆಶ್ರಯವ
ಕೊಡಿಸಬಲ್ಲಿರಿ ಎಂದು ಬಲ್ಲ ಜನ ಹೇಳಿರಲು
ತಮ್ಮ ನೆರವನು ಬೇಡಿ ಬಂದಿಹೆನು.

ಋತ್ವಿಕ.— ಸಂತೋಷ.
ಹೆಸರ ಹೇಳಿದಿರ ?

ಕಾಳಿದಾಸ.— ಮನೆಯದು ಹೆಸರು ಬೇರೆ ಇದೆ.
ಕವಿಯಾಗಿ ನಾ ಕಾಳಿದಾಸ.

ಋತ್ವಿಕ.— ಕಾಳೀದಾಸ ?

ಕಾಳಿದಾಸ.—ಲೀ ದೀರ್ಘವಲ್ಲ. ಕಾಲಿ ದಾಸ.

ಋತ್ವಿಕ.— ಸಂತೋಷ.
ಕೃತಿಗಳನು ತಂದಿಹಿರ ?

ಕಾಳಿದಾಸ.— ತಂದಿಹೆನು.

ಋತ್ವಿಕ.— ಅವುಗಳಲಿ
ಕಿರಿದೊಂದ ಓದಿರಿ.

ಕಾಳಿದಾಸ.— ಅಪ್ಪಣೆ. ಈ ಕವಿತೆ
ಐದು ವರ್ಷದ ಹಿಂದೆ ರಚಿಸಿದುದು. ಓದುವೆನು.
ಬಾಲಕನ ರಚನೆ. " ಶ್ರೋತವ್ಯಮನಸೂಯಯಾ ".

ಋತ್ವಿಕ.—ಅನಸೂಯೆ ಅಲ್ಲ, ಆದರದಿಂದ ಕೇಳುವೆನು.
ಸಂಕೋಚ ಬೇಡ, ನಿಶ್ಶಂಕೆಯಿಂದೋದಿರಿ.

ಕಾಳಿದಾಸ.—(" ಏನೇ ವಕುಳಾ ಏನಕ್ಕ ಪಾದರಿ " ಪದ್ಯವನ್ನು ಓದುತ್ತಾನೆ.)

ಋತ್ವಿಕ.—ನಮ್ಮ ಹಿರಿಯರು ಪೂಜ್ಯಗುರು ರಾಮಮಿಶ್ರರು
ನಿಮ್ಮ ವಿದ್ಯಾಗುರುವೆ ?

ಕಾಳಿದಾಸ.— ಅಹುದು.

ಋತ್ವಿಕ್.— ಅವರಿಗೆ ಇದನು ಓದಿ ತೋರಿಸಿದಿರಿ ?

ಕಾಳಿದಾಸ.— ಓದಿಹೆನು.

ಋತ್ವಿಕ್.— ಅವರಿದ ಕುರಿತು ಏನು ಅಪ್ಪಣೆ ಮಾಡಿದರು ?

ಕಾಳಿದಾಸ.— ಆ ವಯಸ್ಸಿಗೆ ಅಂದಿನನುಭವಕೆ ಇದು ತಕ್ಕ ಕೃತಿ ಎಂದರು.

ಋತ್ವಿಕ್.—ತರುಣನನು ಉಬ್ಬಿಸುವ ಮಾತು ಸಲ್ಲದು ಎಂದು ಅವರಂತು ನುಡಿದರೆಂಬೆನು. ನಿಮ್ಮ ರಚನೆ ಇದ ಹಿರಿವಯದ ಹಿರಿ ಅರಿವ ಹಿರಿಯ ಕವಿಗಳು ಕೂಡ ತಮ್ಮದೆಂದೆನೆ ಹೆಮ್ಮೆ ಪಡಬಹುದು. ಈಚಿನವು ರಚನೆಗಳು ಇಹವಲ್ಲ? ಅವುಗಳಲಿ ಚೆನ್ನೆಂಬ ಒಂದೆರಡ ಓದಿ ಹೇಳಿರಿ.

ಕಾಳಿದಾಸ.— ಅನುಗ್ರಹ. ಇದು ನನ್ನ ಈಚಿನ ಒಂದು ಕೃತಿಯಿಂದ ಒಂದು ದಳ.

(ಋತು ಸಂಹಾರ ಕಾವ್ಯದ ಒಂದು ಪದ್ಯವನ್ನು ಓದುವನು.)

ನಳಿನ ವನದ ಕೊಳಗಳಿಂದೆ
ಪಾಟಲಗಳ ಹೂಗಳಿಂದೆ
ತಣ್ಣೀರಿನ ಮೀಹದಿಂದೆ
ಚಂದ್ರಿಕಾ ವಿಹಾರದಿಂದೆ
ಮುತ್ತು ಮಣಿಗಳೊಡವೆಯಿಂದೆ
ಚಂದನದ ವಿಲೇಪದಿಂದೆ
ರಮ್ಯವೆನಿಸಿ ಮೆರೆಯುತಿರುವ
ಇಂಥದೊಂದು ಬಿಸಿಲ ದಿನವು
ಉಪ್ಪರಿಗೆಯ ಸೆಜ್ಜೆವನೆಯು
ವೇಣುಗಾನದುಲಿಯ ಸವಿಯು

ಸೊಗವನಿತ್ತು ಎರೆಯನೆದೆಯ
ಪ್ರೇಮದಮೃತ ರುಚಿಯನಿತ್ತು
ಕಾಂತೆ ನಿನ್ನ ಚಿರಂ ನಲಿಸಿ
ಸಂತಸದೊಳಗಿರಿಸಲಿ.

ಯುಕ್ತಿಕೆ.—ತುಂಬ ಚೆನ್ನಾಗಿದೆಯೆ. ನೀವು ವರಕವಿಯಣ್ಣ. ಇನ್ನೆರಡು ಪದ್ಯಗಳನೋದಿರಿ.

ಕಾಳಿದಾಸ.—(ಓದುತ್ತಾನೆ.)

ನರುಗಂಪು ಸೂಸುತಿಹ ಮೊಲ್ಲೆ ಮಾಲತಿ ಮೆರೆದ
ಬಕುಳ ಮಾಲೆಯ ಕಟ್ಟಿ ತುರುಬಿಗಿಟ್ಟು
ಅರಳಿದೆಳೆನೀಪಗಳ ಚೆಲುವಾದ ಹೊಸದೊಂದು
ಅವತಂಸವನು ರಚಿಸಿ ಕಿವಿಯೊಳಿಟ್ಟು
ನಲ್ಲ ನಲ್ಲೆಯನಲಂಕರಿಸಲೆಂತೆಳಸುವನೊ
ಪ್ರೇಮಪುಳಕಿತನಾಗಿ ರಸಿಕನಾಗಿ
ಕಾಂತಾರ ಕಾಂತೆಯನ್ನಂತಲಂಕರಿಸುವನು
ಮಳೆರಾಯನೊಲುಮೆಯಧಿರಾಜನಾಗಿ.

ಹೊಳೆಯುವ ಸುಂದರ ಮರಿಮೀನುಗಳೆ
ಚಿನ್ನದ ಹೊಸ ಕಟಿ ಸೂತ್ರವೆನೆ
ದಡದಲಿ ಕುಳಿತಿಹ ಬೆಳ್ಳಕ್ಕಿಗಳೆ
ಮುತ್ತಿನ ನವಮಣಿ ಹಾರವೆನೆ
ಹಸರಿಸಿ ತೋರುವ ಪುಳಿನ ವಿತಾನವೆ
ಸುಂದರ ತೋರ ನಿತಂಬವೆನೆ
ಮಂದಗಮನದಲಿ ಹರಿವಳು ವಾಹಿನಿ
ಪ್ರೇಮೋನ್ಮಾದದ ಯುವತಿಯೆನೆ.

ಯುಕ್ತಿಕೆ.—ವಿದ್ಯೆಯಲಿ ಬಲಿತಿರುವ ಶಬ್ದಶಕ್ತಿಯ ಪೂರ್ಣ ಪಾಂಡಿತ್ಯದಿಂದೊಗೆದ ಕವಿತೆಯಲ್ಲಣ್ಣ ಇದು. ತಾನಾಗಿ ಹರಿದು ಬಹ ಹೊಳೆಯ ನೀರೆಂತಂತೆ,

ಕಾನನದ ಸಹಕಾರ ವೃಕ್ಷದಲಿ ಕುಳ್ಳಿರುತ
ಎದೆಯ ಸುಖವನು ತೋಡಿ ಸರಳಗೀತವ ಹಾಡಿ
ವನಕೆ ಉಲ್ಲಸವೀವ ಕೋಗಿಲೆಯ ದನಿಯಂತೆ,
ಆಗಸದಲೆಲ್ಲಿಂದಲೋ ಹೊರಟು ಎಲ್ಲಿಗೋ
ಹಾರಿ ಹೋಗುತಲಿರುವ ಗಿಳಿ ಹಿಂಡು ಹರ್ಷದಲಿ
ಚಿಲುಕು ಚಿಲುಕೆಂದುಲಿವ ಇಂಪಿನದು ಉಲಿವಂತೆ,
ಕವಿಯ ಚೇತನದಿಂದ ಸಹಜ ಸುಂದರವಾಗಿ
ಹರಿದಿರುವ ಸಿರಿಕವಿತೆ. ಸಿರಿಕವಿತೆ. ಇದ ನಮ್ಮ
ಚಕ್ರವರ್ತಿಗಳು ಕೇಳಿದ ಅಪೇಕ್ಷಣ ನಿಮ್ಮ
ಆಸ್ಥಾನ ಕವಿಯೆಂದು ಕರೆದು ಗೌರವಿಸುವರು.
ದೊರೆ ಇದನು ಗೆಯ್ಯುವುದಕೆ ನಿಮಗೆ ಯಾರದೆ ನೆರವು
ಬೇಕಿಲ್ಲ ಕಂಡಿರಾ? ಸಂಜೆ ನಾ ಅರಮನೆಗೆ
ಹೋಗುವೆನೆ ಆಗ ಜೊತೆಯುಲಿ ಬನ್ನಿ. ಭಾಗ್ಯವಶ,
ಈ ಏಳು ದಿನದ ಕವಿಗೋಷ್ಠಿ ಇಂದೇ ಅಹುದು.
ಪ್ರಭು ಅದಕೆ ಮುಖ್ಯರು. ಕವಿಶೇಖರರು ಅದನು
ನಡಸುವರು. ನನಗು ಆ ಗೋಷ್ಠಿಯಲಿ ಎಡೆ ಉಂಟು.
ಪ್ರಭುಗಳಿಗೆ ನಿಮ್ಮ ಪರಿಚಯ ತಿಳಿಸಿ ಈ ನಿಮ್ಮ
ಕೃತಿಗಳನು ಕೇಳಬೇಕೆಂದವರ ಬೇಡುವೆನು.
ಕೇಳುವರು, ಸಂತೋಷಪಡುವರು ; ನಿಮ್ಮಾಸೆ
ಕೈಗೂಡುವುದು. ಸಂಜೆಯವರೆಗೆ ಕೋಣೆಯಲಿ
ಇನಿಸು ವಿಶ್ರಾಂತಿಯನು ಕೊಳ್ಳಿರಿ. ಆಮೇಲೆ
ಅರಮನೆಗೆ ಹೋಗುವ.

ಕಾಳಿದಾಸ.— ತಮ್ಮ ಈ ಸಂತೋಷ
ನಮ್ಮ ಗುರುಗಳು ಪಡುವ ಸಂತೋಷದಂತೆ ಇದೆ.
ತಮ್ಮ ಈ ಪ್ರೋತ್ಸಾಹ ಅವರ ಪ್ರೋತ್ಸಾಹವೆನೆ
ಅವ್ಯಾಜ ವಾತ್ಸಲ್ಯದಿಂದ ತುಂಬಿದೆ. ನನಗೆ
ಗುರುಗಳೇ ಎದುರಿನಲಿ ಕುಳಿತು ಮಾತಾಡಿದರೊ

ಎಂಬಂದ ತಮ್ಮ ನುಡಿ ಆಸೆಯನು ತಣಿಸಿದೆ.
ಇದಕಾಗಿ ಬಂದನೆ. ತಮ್ಮ ಅಪ್ಪಣೆಯಂತೆ
ಸಂಜೆ ನಾ ತಮ್ಮೊಡನೆ ಬರುವೆನು. ನಮಸ್ಕಾರ.

ಋತ್ವಿಕ.—ಕಡತ ನನ್ನೊಡನಿರಲಿ. ಸಾಧ್ಯವೇ, ಪ್ರಭುಗಳಿಗೆ
ಗೋಷ್ಠಿ ನೆರೆಯುವ ಮುನ್ನ ಅದನು ತೋರಿರುವೆನು.

(ಎಂದು ಕಡತವನ್ನು ತೆಗೆದುಕೊಳ್ಳುತ್ತಾನೆ.)

ಸ್ಥಾನ ೪

ಆ ಸಂಜೆ ಉಜ್ಜಯಿನಿ ಅರಮನೆಯ ಸಭಾಮಂದಿರ. ಇತರ ಕವಿಗಳು, ಋತ್ವಿಕ, ಕಾಳಿದಾಸ, ವಿದ್ವಾಂಸರು. ಪ್ರಭುವನ್ನು ನಿರೀಕ್ಷಿಸುತ್ತ ಎಲ್ಲರೂ ನಿಂತಿದಾರೆ.

ಋತ್ವಿಕ.—(ಕಾಳಿದಾಸನಿಗೆ ಬೇರೆಯಾಗಿ)

ಪ್ರಭುಗಳಿಗೆ ನಿಮ್ಮ ಕೃತಿಯಿಂದ ಕೆಲ ಪದ್ಯವನು
ಓದಿ ಹೇಳಿದೆನು. ಬಹು ಸಂತೋಷಪಟ್ಟರು.
ಅರೆ ಗಳಿಗೆಯಲಿ ಬಂದು ಗೋಷ್ಠಿಯಲಿ ಸೇರುವರು.
ಕವಿಶೇಖರರಿಗು ವಿಷಯವ ಮೊದಲೆ ತಿಳಿಸಿಹೆನು.
ಪ್ರಭು ಬರುವ ಮುನ್ನ ನೆರೆದಿರುವ ಕವಿ ವಿದ್ವಾಂಸ
ಹಿರಿಯರಿಗೆ ನಿಮ್ಮ ಪರಿಚಯ ಮಾಡಿ ಕೊಡುವೆನು.
ಬನ್ನಿ. (ಎಂದು ಕಾಳಿದಾಸನನ್ನು ಕವಿಗಳ, ವಿದ್ವಾಂಸರ, ಮಧ್ಯಕ್ಕೆ ಕರೆದು ಕೊಂಡು ಹೋಗುವನು.)

ಕವಿಶೇಖರರೆ, ನಮನ. ನಾ ಹೇಳಿದೆನೆ
ಕವಿ ಮಹಾಶಯರವರು ಇವರೆ.

ಕಾಳಿದಾಸ.—(ಕವಿಶೇಖರನಿಗೆ) ನಮಸ್ಕಾರ.

ಕವಿಶೇಖರ.—ಕವಿ ಮಹಾಶಯರಿಗೆ ನಮಸ್ಕಾರ. ಬನ್ನಿರಿ.
ತಾವು ಕವಿ ಸಮುದಾಯವನು ಸೇರ ಬಯಸಿಹುದು
ನಮ್ಮ ಸೌಭಾಗ್ಯ. (ಎಂದು ಇತರ ಕವಿಗಳನ್ನು ತೋರಿಸಿ)
ಇವರೆಲ್ಲ ಈ ದಿನ ಮೊದಲು

ತಮ್ಮ ಸೋದರರು. (ಕಾಳಿದಾಸ ಎಲ್ಲರಿಗೂ ತಲೆಬಾಗಿ ಕೈ ಮುಗಿಯುತ್ತಾನೆ. ಅವರೂ ಕೈಮುಗಿಯುತ್ತಾರೆ.)

ಸೌಮನಸ ಕವಿಗಳು ; ಇವರು
ವನಮಾಲ ಕವಿ, ಸೋಮಧರರು, ಶರ್ಕರಕ ಕವಿ ;
ಗಣನಾಥ, ಚಂದ್ರಾಂಶು, ಹರಿಶರಣ, ಕವಿಶಿಷ್ಯ ;
ಎಲ್ಲರೂ ತಮಗೆ ಸುಸ್ವಾಗತವ ನೀಡುವೆವು.
ಋತ್ವಿಕರು ಕಾಳಿದಾಸರ ಕವಿಮತಹೆಸೆಂದು
ತಿಳಿಸಿಹರು. ಕಾಳಿದಾಸರು ಇನ್ನು ನಮ್ಮವರು.
ನಾವು ತಮ್ಮವರೆಂದು ಅವರು ಭಾವಿಸಬೇಕು
ಎಂದು ನಾ ಬೇಡುವೆನು.

ಕಾಳಿದಾಸ.— ಇಂತಪ್ಪ ಅಕ್ಕರೆಯ
ಸ್ವಾಗತವ ನಾ ನಿರೀಕ್ಷಿಸಲಿಲ್ಲ. ತಮ್ಮ ನುಡಿ
ನನಗೆ ಮಿತಿಮೀರಿದಾನಂದವನು ತಂದಿದೆ.
ನಾ ಹೊಸಬ. ನನ್ನ ನಿಮ್ಮವನೆಂಬ ತಾವೆಲ್ಲ
ಪ್ರಭು ಸನ್ನಿಧಿಯ ಸುಪ್ರತಿಷ್ಠಿತ ಕವೀಶ್ವರರು.
ಹಿರಿಯರೆಲ್ಲರು ನಿಮ್ಮ ಕಿರಿಯನಿಗೆ ಕೃಪೆ ತೋರಿ
ನಿಮ್ಮೊಲವ ಮಗುವೆಂದು ಸಲಹಿ ಸಂರಕ್ಷಿಸಿರಿ.

ಕವಿಶೇಖರ.—ಚೆನ್ನ ನುಡಿದಿರಿ ಕಾಳಿದಾಸ ಕವಿಗಳೆ. ಅಕೋ
ಪ್ರಭು ಬಿಜಯ ಮಾಡಿದರು. ಇಲ್ಲಿ ಪಕ್ಕಕೆ ಬನ್ನಿ.

(ಪ್ರಭು ಬರುತ್ತಾನೆ.)

ಎಲ್ಲರೂ.—ಪ್ರಭುಗಳಿಗೆ ವಂದನೆ.

ಪ್ರಭು.— ವಂದನೆ. ಗುರು ಜನ
ಎಲ್ಲರು ಸುಖಾಸೀನರಾಗಿರಿ. ಎಲ್ಲರೂ
ಸೌಖ್ಯವಾಗಿಹಿರೆಂದು ಗ್ರಹಿಸುವೆನು.

ಕುಲಶೇಖರ.— ಎಲ್ಲರೂ
ಪ್ರಭುಗಳ ಕೃಪಾದೃಷ್ಟಿಯಲಿ ಸೌಖ್ಯವಾಗಿಹೆವು.

ಪ್ರಭು.—ಸಂತೋಷ. ದೈವಕೃಪೆಯಲಿ ಎನಲು ಕವಿವಚನ

ಮತ್ತಿಷ್ಟು ಉಚಿತವಾಗುವುದು. ಕವಿ ಋತ್ವಿಕರು
ಕವಿ ಮಹಾಶಯರೊಬ್ಬರನು ಕರೆದು ತಂದಿಹೆನು
ಎಂದು ತಿಳಿಸಿದರು. ಕವಿ ದಯಮಾಡಿಸಿರುವರೆ?

ಕವಿಶೇಖರ.—ಬಂದಿಹರು ಪ್ರಭು. (ಎಂದು ಕಾಳಿದಾಸನೊಡನೆ ಮುಂದಕ್ಕೆ ಬಂದು)
ಇವರೆ ಕಾಳಿದಾಸ ಕವೀಂದ್ರ.

ಕಾಳಿದಾಸ.—(ಪ್ರಭುಭಕ್ತಿಯಲ್ಲಿ ಕೈಮುಗಿದು ಬಾಗಿ,)
ಪೂಜ್ಯರು ಕವೀಂದ್ರನೆನ್ನುವ ನಾನು ಕವಿಕುಲದ
ದಾಸಾನುದಾಸ. ನೆರಳಿದ ಬಯಸಿ ಬಂದಿಹೆನು.

ಪ್ರಭು.—ಚೆಲುವ ನುಡಿ. ಈ ನುಡಿಗೆ ಸದೃಶ ನಿನ್ನಾಕಾರ.
ಕವಿಗಳಿಗೆ ಸುಸ್ವಾಗತವನು ತೋರಿದಿರಲ್ಲ
ಕವಿಶೇಖರರು?

ಕವಿಶೇಖರ.— ನಾನು ಒಬ್ಬನೇ ಅಲ್ಲ, ಪ್ರಭು.
ಕವಿಗೋಷ್ಠಿಯವರೆಲ್ಲ ಸುಸ್ವಾಗತವ ನೀಡಿ
ಇವರ ಬರಮಾಡಿಕೊಂಡೆವು.

ಪ್ರಭು.— ತುಂಬ ಸಂತೋಷ.
ಋತ್ವಿಕರು ಇವರಿಂದ ಇವರ ಋತುಸಂಹಾರ
ಕೃತಿಯ ಕಡತವ ತಂದು ಕೆಲವು ಚರಣವ ನಮಗೆ
ಓದಿ ಹೇಳಿದರು. ಋತುಸಂಹಾರ ಕವಿಕೃತಿಯು
ರಚಯಿತರು ದಿಟದಲಿ ಕವೀಂದ್ರರೆ. ರಚನೆಯನು
ತಾವು ನೋಡಿಲ್ಲ.

ಕವಿಶೇಖರ.— ನೋಡಿಲ್ಲ ಪ್ರಭು.

ಪ್ರಭು.— ನೋಡದೆಯೆ
ಅದರ ಗುಣ ಎನಿತೆಂದು ತಿಳಿದಿಹಿರೆ ಇದು ತಮ್ಮ
ಕವಿಶಕ್ತಿ ಮಾಪನದ ಸೂಕ್ಷ್ಮತೆಯ ಹೊಗಳುತಿದೆ.
ಋತ್ವಿಕರ ಕೈಯಿಂದ ಕೃತಿಯ ಕಡತವ ಪಡೆದು
ನಾವೆ ಬೇರೆಯ ಕೆಲವು ಚರಣಗಳ ನೋಡಿದೆವು.
ಇದು ಒಂದು ಉತ್ಕೃಷ್ಟ ಕೃತಿ ಎಂದು ನಮ್ಮೆಣಿಕೆ.

ಕವಿವರರು ಕೃತಿಯಿಂದ ಚರಣ ಕೆಲವನು ಪಠಿಸೆ
ಕವಿಗೋಷ್ಠಿ ಅನುಮತಿಯು ನೀಡುವುದೆ?

ಕವಿಶೇಖರ.— ನೀಡಿಹುದು,
ಪ್ರಭು. ಗೋಷ್ಠಿಯಧ್ಯಕ್ಷ ಪೀಠವನಲಂಕರಿಸಿ
ಪ್ರಭುಚಿತ್ತ ನೀಡಿರುವ ಅನುಮತಿಯೆ ಕವಿಕುಲದ
ಹೃತ್ಪೂರ್ವಪನುಮತಿ.

ಪ್ರಭು.— ಅಂತಿರಲು ಕವಿವರರು
ಕೃತಿಯಿಂದ ನಾವಾರಿಸಿಹ ಚರಣ ಇವು ಆರ
ಪಠಿಸಿ ಕವಿಗೋಷ್ಠಿಯನು ಸಂತೋಷಪಡಿಸಲಿ.

(ಎಂದು ಹೇಳಿ ಕವಿಶೇಖರನ ಕೈಗೆ ಕಡತವನ್ನು ಜೊತೆಗೆ ಒಂದು ಚೀಟಿಯನ್ನು ಕೊಡುವನು. ಕವಿಶೇಖರ ಅವನ್ನು ಕಾಳಿದಾಸನಿಗೆ ಕೊಡುವನು.)

ಕಾಳಿದಾಸ.—(ಕಡತವನ್ನು ಹಿಡಿದು ಋತ್ವಿಕನ ಕಾಲು ಮುಟ್ಟಿ ನಮಸ್ಕಾರಮಾಡಿ ಬಂದು ಗೋಷ್ಠಿಯ ಮಧ್ಯೆ ಪ್ರಭುವಿನೆದುರಲ್ಲಿ ಹಾಕಿದ್ದ ವ್ಯಾಸ ಪೀಠದಲ್ಲಿ ಕುಳಿತು ಶಾಕುಂತಲ ನಾಟಕದ ಮೊದಲ "ಯಾ ಸ್ರಷ್ಟುರಾದ್ಯಾ" ಪದ್ಯವನ್ನು ಪ್ರಾರ್ಥನೆಯಾಗಿ ಹಾಡಿ ಆಮೇಲೆ ಪ್ರಭು ಗುರುತಿಸಿದ್ದ ಆರು ಪದ್ಯವನ್ನು ಓದುತ್ತಾನೆ.)

ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿಹುತಂ
ಯಾ ಹವಿಃ ಯಾ ಚ ಹೋತ್ರೀ
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯ ಗುಣಾ
ಯಾ ಸ್ಥಿತಾ ವ್ಯಾಪ್ಯವಿಶ್ವಂ
ಯಾಮಾಹುಃ ಸರ್ವಬೀಜಪ್ರಕೃತಿರಿತಿ ಯಯಾ
ಪ್ರಾಣಿನಃ ಪ್ರಾಣವಂತಃ
ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿರವತು ವಃ
ತಾಭಿರಷ್ಟಾಭಿರೀಶಃ

ಬಿಳಿಮುಗಿಲವೋಲಂತೆ ಗಿರಿಯ ಶಿಖರವೊಳೆಸೆದು
ಬೆಟ್ಟದಾವರೆ ಹೂಗಳರಳುತಿರಲು
ಹೊಳೆವ ಮಿಂಚುಗಳಂತೆ ಅಲ್ಲಲ್ಲಿ ಮಿರುಮಿರುಗಿ
ನಿರ್ಝರಗಳೋರಂತೆ ಹರಿಯುತಿರಲು

ಇಂದ್ರ ಚಾಪಗಳಂತೆ ಮನಸೆಳೆದು ನವಿಲುಗಳು
ಸಂತಸದ ಗರಿಗೆದರಿ ಕುಣಿಯುತಿರಲು
ನಭದಂತೆ ಭೂಧರವು ಹೊಸತೊಂದು ಕಾಂತಿಯಲಿ
ನಯನ ಕೌತುಕವಾಗಿ ರಂಜಿಸಿಹುದು.

ಝಣಿರು ಝಣಿರು ಎನುವಂದದ ನೇವುರ
ರಮಣಿಯರಡಿಗಳಲೊಪ್ಪುತಿರೆ
ಮಘಮಘಿಸುವ ಹೊಸ ಮಲ್ಲಿಗೆ ಪೂಸರ
ಸಿರಿಮುಡಿಯಲಿ ರಾರಾಜಿಸಿರೆ
ಅಲತಿಗೆ ರಸದನುಲೇಪನ ಸುಂದರ
ಚರಣ ಕಮಲದಲಿ ರಂಜಿಸಿರೆ
ಲಲನೆಯರಂಗದ ರೂಪವಿಲಾಸಕೆ
ಯುವಜನ ಸೋಲುವುದಚ್ಚರಿಯೆ.

ಕಣ್ಣಿಗಿದು ಹಬ್ಬವೆನೆ ಬಣ್ಣಬಣ್ಣದ ಹಲವು
ಹೂವುಗಳಿನೊಪ್ಪಿರುವ ತರುಲತೆಗಳಿಂದೆ
ಕಿವಿಗಿನಿದು ಕೇಳಲೆನೆ ಹಲವುಬಗೆಯಿಂಚರವು
ಸೂಸುವವೊಲುಲಿಯುತಿಹ ಶುಕಪಿಕಗಳಿಂದೆ
ಶೈಲೇಯಜಾಲಂಗಳಿಡಿದಿರುವ ಹಲಕೆಲವು
ಚಾರುತರ ಶೀತಳ ಶಿಲಾತಳಗಳಿಂನೆ
ರಮಣೀಯಮೆನಲೆಸೆಯುತಿರುವುದೀ ಭೂಧರವು
ಜನರ ಕಣ್ಮನಗಳನು ಸೆಳೆವ ಕತದಿಂದೆ.

ಕನಕ ಕಮಲದವೋಲು ರಮಣಿಯರ ಮೊಗವಿರಲು
ತೊಂಡೆಹಣ್ಣಿನವೋಲು ಚೆಂದುಟಿಗಳಿರಲು
ಕಿವಿವರೆಗೆ ನಿಡಿದಾಗಿ ಕೊನೆಗಳಲಿ ಕೆಂಪಾಗಿ
ರಮಣಿಯರ ನಯನಂಗಳಂದವಾಗಿರಲು

ಸಿಡಿದಾದ ಕಮರಿಭರ ಸೋಗೆವೊಲು ಚೆಲುವಾಗಿ
ಹೆಗಲಿನಿಂದಿಳಿದಂತೆ ಹಸರಿಸಿರಲು
ನಗುನಗುತ ನಿಂದಿರುವ ಗೃಹಲಕ್ಷ್ಮಿಯಂದದೊಳು
ಮನೆಮನೆಯ ಬಾಗಿಲೊಳು ಕುಲವಧುಗಳಿಹರು.

ಸುರಿವ ಮಂಜು ಸೋನೆಯಿಂದ ಶೀತವಾಗಿ ತೋರುತ
ಕ್ರೌಂಚಪಕ್ಷಿಯುಲಿಗಳಿಂದ ಕಿವಿಗೆ ಇಂಪನೆರೆಯುತ
ಬೆಳೆದ ಶಾಲಿವನಗಳಿಂದ ಕಣ್ಗೆ ಸೊಂಪ ಬೀರುತ
ತನ್ನನಂತ ಗುಣಗಳಿಂದ ನಮ್ಮ ಮನವ ಸೆಳೆಯುತ
ಬಂದ ಹೇಮಂತ ಕಾಂತೆ ನಿನಗೆ ಸುಖವನೀಯಲಿ.

ಮಾಮರದ ಚಾರುತರ ಮಂಜರಿಯೆ ಶರವೆನಲು
ಶೋಭಿಸುವ ಕಿಂಶುಕವೆ ಚಾಪವೆನಲು
ಮೊಳೆವ ಭೃಂಗಾವಳಿಯೆ ಮೆರೆವ ಶಿಂಜಿನಿಯೆನಲು
ಅಕಳಂಕ ಚಂದಿರನೆ ಛತ್ರಿಯೆನಲು
ಸುಳಿವ ಮಲಯಾನಿಲನೆ ಮತ್ತವಾರಣವೆನಲು
ಕುಕಿಲಿಡುವ ಪರಭೃತವೆ ವಂದಿಯೆನಲು
ತ್ರಿಜಗವನು ಗೆಲ್ದ ತನು ಚೈತ್ರನೊಡನೈತರಲಿ
ಕಾಂತೆ ನಿನಗಾವಗಂ ಮುದವನೀಯಲಿ.

ಪ್ರಭು.—(ಒಂದೊಂದು ಪದ್ಯದ ಕೊನೆಗೂ ಸಭಿಕರಲ್ಲಿ ಕೆಲವರ ಕಡೆಗೆ ತಿರುಗಿ) ತುಂಬ ಚೆನ್ನಾಗಿಹುದು?

ಹಲವು ಧ್ವನಿ.—ತುಂಬ ಚೆನ್ನಾಗಿಹುದು.

(ಓದು ಮುಗಿದ ಮೇಲೆ)

ಕಾಳಿದಾಸ.—ಮಂಗಳಂ ರಾಮಚಂದ್ರಾಯ ಸೀತಾನಾಥಾಯ ವೇಧಸೇ
ಲೋಕ ರಕ್ಷಣ ದಕ್ಷಾಯ ಮಂಗಳಂ ಪರಮಾತ್ಮನೇ

(ಎಂದು ಮಂಗಳ ಹಾಡಿ ನಿಲ್ಲಿಸುವನು.)

ಪ್ರಭು.—ಮೊದಲಲೇ ನಾನು ವಿಜ್ಞಾಪಿಸಿದ ತೆರ ಕೃತಿ

ಅತ್ಯಂತ ಉತ್ಕೃಷ್ಟವಾಗಿಹುದು ಎಂದು ಈ
ಗೋಷ್ಠಿ ಒಪ್ಪುವುದೆಂದು ನಾನು ತಿಳಿಯುವೆನು.

ಹಲವು ಧ್ವನಿ.— ಸರಿ.
ಒಪ್ಪುವುದು, ಒಪ್ಪುವುದು.

ಪ್ರಭು.— ಅಂತಿರಲು ಸಭೆಯ ಪರ,
ನಮ್ಮ ಪರ, ಮೆಚ್ಚಿಕೆಯ ತಿಳಿಸಿ ಕವಿಶೇಖರರು
ನಾಲ್ಕು ವಾಕ್ಯವ ನುಡಿಯಬೇಕೆಂದು ನಾನವರ
ಬೇಡುವೆನು.

ಕವಿಶೇಖರ.— ಪ್ರಭುಗಳಾಜ್ಞೆಯ ನಾನು ಅತ್ಯಂತ
ಸಂತೋಷದಿಂದ ನಿರ್ವಹಿಸುವೆನು. ನವಕವಿ
ಕಾಳಿದಾಸರು ಎನಿತು ನವ ಅನಿತೆ ವರ ಕವಿ.
ಕವಿಕುಲದ ಮಾತೆ ಕಲ್ಯಾಣಿ, ಅಬ್ಜಜ ರಾಣಿ,
ಪುತ್ರ ಇವರಿಗೆ ಸುಪ್ರಸನ್ನರಾಗಿಹರೆನಲು
ಅಡ್ಡಿಯೇ ಇಲ್ಲ. ಯೋಚನೆ ಊಹೆ ಭಾವನೆ
ಎಲ್ಲವೂ ಉನ್ನತ. ಇವು ಎನಿತು ಉತ್ಕೃಷ್ಟ
ಅನಿತು ರಚನೆಯ ಸರಣಿ ಸಹಜ ಸುಂದರ ಸರಳ.
ಕಂಡುದೇ ಗೋಷ್ಠಿಯಧ್ಯಕ್ಷ ಪ್ರಭುಗಳು ಇನಿತು
ಒಪ್ಪಿಕೊಂಡಿಹರೆನಲು ಪ್ರತ್ಯೇಕವಾಗಿ ನಾ
ಹೇಳುವುದು ಏನೆ ಉಳಿದಿಲ್ಲ. ಕವಿವರರ ಈ
ಗೋಷ್ಠಿ ತನ್ನಲಿ ಒಬ್ಬರೆಂದು ಸುಸ್ವಾಗತವ
ನೀಡಿ ಮನಕಪ್ಪಿಕೊಂಡಿಹುದು. ಸಾಕೇ ಪ್ರಭು?

ಪ್ರಭು.—ಸಾಕು ಕವಿಶೇಖರರೆ. ಗೋಷ್ಠಿ ಮುಗಿದಿದೆ. ಎಲ್ಲ
ವೀಳೆಯವ ಪಡೆದು ಮನೆಗಳಿಗೆ ದಯಮಾಡಿಸಿರಿ.
ಕವಿಶೇಖರರು ಋತ್ವಿಕರು ಕಾಳಿದಾಸರು
ಇನಿಸಿಲ್ಲೆ ಇರಿ. ಆಡುವುದು ಮಾತು ಎರಡುಂಟು.

(ಈ ಮೂವರು ಹೊರತು ಉಳಿದವರು ಹೊರಟುಹೋಗುತ್ತಾರೆ. ಪ್ರಭು ಕವಿಶೇಖರನನ್ನು ಕುರಿತು)

ಕವಿಶೇಖರರೆ ಕವಿಗಳೀ ಕಾವ್ಯವನು ತಮ್ಮ
ವಾಡಿಕೆಯರೀತಿ ಪ್ರತಿಮಾಡಿ ದೇಶದ ನಮ್ಮ
ವಿದ್ವಾಂಸ ಜನಕೆ ಮುಟ್ಟಿಸಿ ಎಂದು ಸೀಮೆಗಳ
ಎಲ್ಲ ಅರಸರಿಗು ಕಳುಹುವಿರ ?

ಕವಿಶೇಖರ.— ಕಳುಹುವೆನು ಪ್ರಭು.

ಪ್ರಭು.—ಅಂತೆ, ಹಿರಿಯರೆ, ಕಾವ್ಯವೀಧಿಯಲಿ ಕವಿಗಳಿಗೆ
ಒದಗಿಸಲು ಯಾವುದೆ ನಿವಾಸ ಬಿಡುವಿರಬಹುದೆ ?

ಕವಿಶೇಖರ.—ಇಹುದು ಪ್ರಭು. ಮೂರು ವರ್ಷದ ಹಿಂದೆ ನಿರ್ಮಿಸಿದ
ನಾಲ್ಕುಮನೆಯಲಿ ಒಂದು ವನಮಾಲಿ ಕವಿಗಳಿಗೆ
ಆವಾಸವಾಯಿತು. ಮೂರು ತೆರಪಾಗಿಹವು.

ಪ್ರಭು.—ಕಾಳಿದಾಸರು ಸದ್ಯ ಋತ್ವಿಕರ ಮಂದಿರದಿ
ಅತಿಥಿಯಾಗಿಹರಲ್ಲ ?

ಋತ್ವಿಕ.— ಅಹುದು ಪ್ರಭು.

ಪ್ರಭು.— ಕವಿಗಳನು
ಕಾವ್ಯವೀಧಿಯಲಿ ಅವರನೆ ಒಂದು ಮನೆಯಲಿ
ವಾಸಮಾಡಲು ತಾವು ಸಮ್ಮತಿಸುವಿರಿ ಅಲ್ಲ ?

ಋತ್ವಿಕ.—ಸಂತೋಷದಿಂದ ಎನ್ನಲು ಮಾತು ತಪ್ಪುವುದು.
ಅತಿಥಿ ಇರುವುದನಿಷ್ಟವೇ ಎಂದು. ಅಂತಲ್ಲ,
ಕವಿಗಳಿಗೆ ಆವಾಸ ದೊರಕಿತು ಎಂದೊಂದು,
ಅದು ನಮ್ಮ ಕವಿಪಕ್ಷಪಾತಿ ಪ್ರಭುಗಳ ದಯೆಯು
ಕೊಡುಗೆ ಎನ್ನುವುದೊಂದು, ಆಸ್ಥಾನ ಕವಿಯಾಗಿ
ಆಶ್ರಯವ ನೀಡಿದೊಡನೆಯೆ ಈ ಅನುಗ್ರಹ
ದೊರಕುತಿದೆ ಎನ್ನುವುದು ಒಂದು, ಇಂತಿದಕಾಗಿ
ಸಂತೋಷ. ಕಾಳಿದಾಸರು ನಾಳೆಯೇ ತಮ್ಮ
ಆವಾಸದಲಿ ಬಂದು ನಿಲ್ಲುವರು.

ಪ್ರಭು.— ಒಳ್ಳಿತು.

ಆವಾಸವನು ಮಾಡಿಕೆಯರೀತಿ ಸನ್ನದ್ಧ
ಕವಿಶೇಖರರು ಮಾಡಿಸುವರು

ಕವಿಶೇಖರ.— ಅಪ್ಪಣೆ ಪ್ರಭು.

ಪ್ರಭು.—ಒಳ್ಳಿತು, ಮತ್ತೆ ಕಾಣುವ.

ಈ ಮೂವರು.— ನಮಸ್ಕಾರ ಪ್ರಭು.

(ಪ್ರಭು ಕೈಮುಗಿದು ಮಂದಿರದೊಳಕ್ಕೆ ಹೋಗುವನು.)

ಸ್ಥಾನ ೫

ಆ ರಾತ್ರಿ ಋತ್ವಿಕನ ಮನೆ ಸೇರುತ್ತ. ಋತ್ವಿಕ, ಕಾಳಿದಾಸ

ಋತ್ವಿಕ.—ನಾನು ನೆನೆದಿದ್ದಂತೆ ಪ್ರಭು ಎಲ್ಲ ತೆರದಲೂ
ಸುಮುಖರಾಗಿದ್ದು ನಿಮ್ಮನು ಒಪ್ಪಿಕೊಂಡರು.
ಇದು ನನಗೆ ಸಂತೋಷ.

ಕಾಳಿದಾಸ.— ಪ್ರಭು ಪೂರ್ಣ ಸಹೃದಯರು.
ಅಂತೇ ಉದಾರಿಗಳು. ಕಾವ್ಯ ವೀಥಿಯಲಿ ಮನೆ
ಎಂದರೇ. ವೀಥಿ ಇದು ಯಾವುದು ?

ಋತ್ವಿಕ.— ಪ್ರಭುಗಳು
ಆಸ್ಥಾನ ಕವಿಗಳಲಿ ಮುಖ್ಯಕವಿಗಳು, ಯಾರ
ಹೊರಗಿಂದ ಬಂದಿಹರು ಇಹರು, ಅಂತಪ್ಪವರ
ಸಲುವಾಗಿ, ಅರಮನೆಗೆ ದೂರವೇನಲ್ಲದ
ಆವಾರವೊಂದರಲಿ ಮನೆಗಳವು ಸಾಲೆರಡ
ನಿರ್ಮಿಸಿರುವರು. ಅದನು ಕಾವ್ಯ ವೀಥಿ ಎಂದು
ಕರೆದಿಹರು. ಆಶ್ರಯವ ಪಡೆದ ಕವಿಹಿರಿಯರು
ತಮ್ಮವೇ ಆವಾಸಗಳ ಹುಡುಕಿ ಅಲ್ಲಲ್ಲಿ
ಚೆಲ್ಲಿರುವ ಪಾಡು ಚೆನ್ನಲ್ಲ ; ಪ್ರಭು ಮಂದಿರಕೆ
ಎಲ್ಲಿಂದಲೋ ದೂರದಿಂದ ಬರುವುದು ಕಷ್ಟ ;
ಮುಖ್ಯರಾದವರು ಸುಲಭದಲಿ ಬರಲಪ್ಪಂತೆ
ಅನುಕೂಲಮಾಡಿಕೊಡಬೇಕು : ಎನ್ನುವುದವರ
ಉದ್ದೇಶ.

ಕಾಳಿದಾಸ.— ಸಂಜೆ ಸಭೆಗೆಂದು ಹೊರಡುವ ವೇಳೆ
ಪ್ರಭು ನನಗೆ ಇನಿತು ಆದರ ಗೌರವವ ತೋರಿ
ನನ್ನ ಅನುಕೂಲವನು ಕುರಿತಿನಿತು ಯೋಚಿಸಿ
ಮನಕೆ ತಹರೆಂಬುದ ನಿರೀಕ್ಷಿಸಿಯೆ ಇರಲಿಲ್ಲ.
ಎಣಿಸದಿದ್ದೀ ಪ್ರೀತಿ ಗೌರವಗಳನು ಪಡೆದು
ಸಂತೋಷದೊಡನೆ ನನಗಿನಿಸು ಭಯ ಆಗುತಿದೆ.

ಯುಕ್ತಿಕ.—ಭಯ ?

ಕಾಳಿದಾಸ.— ಅಹುದು. ಇಂತನುಗ್ರಹದಿಂದ ಕಂಡ ಪ್ರಭು
ಮುಂದೆ ಎಂತಪ್ಪ ರಚನೆಯ ನಿರೀಕ್ಷಿಸುವರೊ,
ಆ ನಿರೀಕ್ಷೆಯನು ಸಲಿಸುವುದು ಸಾಧ್ಯವೆ ನನಗೆ,
ಎಂದು.

ಯುಕ್ತಿಕ.— ಆ ಭಯ ಸರಿಯೆ. ಆದರೂ ಭಯ ನಿಮ್ಮ
ಕವಿಶಕ್ತಿ ಎನಿತೆಂಬ ಒಂದು ಮಾತನು ಅಲ್ಲ,
ಪ್ರಭುಗಳ ನಿರೀಕ್ಷೆ ಎನಿತೆಂಬುದನು ನೆನೆದಹುದು.
ಕಾವ್ಯವನು ಬಲ್ಲ ಜನರಲಿ ಕೂಡ ಬಹುಮಂದಿ
ಕವಿಯಾದವನು ಪಂಕ್ತಿಗಳನು ಬರೆವುದು, ಆಳು
ಕಟ್ಟೆಗೆಯನೊಡೆಯುವುದು, ನೀರಸೇದಿಕ್ಕುವುದು,
ಎಂತಂತು ದಿನದಿನವು ಇನಿತೆಂದು ಗೆಯ್ಯಬಹ
ಕೆಲಸವೆಂದೆಣಿಸುವರು. ನಮ್ಮ ಪ್ರಭು ಅಂತಪ್ಪ
ಅಜ್ಞರೇನಲ್ಲ. ಆದರೆಯು ಬಹು ಜಾಣೆಂಬ
ನಿಮ್ಮಂಥವರು ತುಂಬ ದಿನ ಕಳೆದರೆಯು ಏನೆ
ರಚನೆಯನು ತರದಿರಲು, ಇವನು ಏತಕೆ ಇನಿತು
ಅಲಸನಾಗಿಹನೆಂದು ತಪ್ಪೆಣಿಸಲು ಬಹುದು.
ಪ್ರಭು ಇಂತು ಎಣಿಸರೆನ್ನುವ. ನಿಮ್ಮ ಜೊತೆಯ ಜನ,
ಇವರೆಲ್ಲ, ನೋಡುತಿರೆ ಎನಿತು ಸಜ್ಜನರೆಂದು
ಕಾಣುವರು, ಅನಿತು ಸಜ್ಜನರಲ್ಲ. ಇಬ್ಬರು
ಮೂವರನು ಬಿಟ್ಟು ಉಳಿದೆಲ್ಲರು ಪರಸ್ಪರ

ಈರ್ಷೆಯಲಿ ಬೆಳೆದಿಹರು. ನೀವು ಇವರಂತೆಯೇ
ಸಾಮಾನ್ಯ ಕವಿಯೆ ಆಗಿದ್ದರೆಯು ನೀವಿವರ
ಈರ್ಷೆಗೀಡಾಗುವರೆ. ತಮ್ಮಂತೆ ಅಲ್ಲದೆ,
ಸುಸ್ಪಷ್ಟ ತಮಗಿಂತ ಮಿಗಿಲು ಎನಿಸಿರುವವರು
ನಿಮ್ಮ ಕುರಿತೀರ್ಷೆ ಭುಗಿಲೇಳುವುದು. ಅದರಲಿಯು
ಪ್ರಭು ಬೇರೆ ಯಾರಿಗೂ ತೋರದೊಂದಾದರ
ಗೌರವವ ನಿಮಗಿಂದು ತೋರಿದರೆ, ಇದನಿವರು
ಸಹಿಸಲಾರರು. ತೀರ ಚೇಕಾದ ಜನರಂತೆ
ನಡೆದುಕೊಳ್ಳುತ ಇವರು ಯಾವ ತೆರದಲಿ ನಿಮಗೆ
ಕೇಡ ತರಬಹುದೆಂದು ತಪಮಾಡತೊಡಗುವರು.
ಆ ಭಯಕು ಮಿಗಿಲಾಗಿ ನಿಮಗೆ ಈ ಭಯ ಇರಲಿ.

ಕಾಳಿದಾಸ.—ತಾವಿಂತು ತಿಳಿಸದಿರೆ ನಾನು ಇಲ್ಲಿ ಅಪಾಯ
ಇದೆಯೆಂದು ನೆನೆಯುತಿರಲಿಲ್ಲ. ಪೂಜ್ಯರು, ನನ್ನ
ಹಿತವ ಬಯಸುವರು, ಅಪ್ಪಣೆ ಕೊಡಿಸಿ, ಎಚ್ಚರ
ಎಂದು ನುಡಿದಿಹರಾಗಿ ಎಚ್ಚರವೆ ನಡೆಯುವೆನು.
ಜೋಕೆ ಎಂದಿರೆ ಇದಕೆ ನಾನು ಋಣಿ.

ಯುಕ್ತಿಕ.— ಒಳ್ಳಿತು.

ಅಂಕ ನಾಲ್ಕು

ಸ್ಥಾನ ೧

ಮೂರನೆಯ ದಿನ ಸಂಜೆ. ಕಾವ್ಯ ವೀಧಿಯಲ್ಲಿ ಕಾಳಿದಾಸನ ನಿವಾಸದ ಮುಂದೆ. ಕಾಳಿದಾಸ ಬಾಗಿಲಲ್ಲಿದ್ದಾನೆ. ಅರಮನೆಯ ನೃತ್ಯಶಾಲೆಯ ಒಡತಿ ಬರುತ್ತಾಳೆ.

ಒಡತಿ.—ದೊರೆ ಮಕ್ಕಳಿಗೆ ನಮಸ್ಕಾರ.

ಕಾಳಿದಾಸ.— ದೊರೆ ಮಕ್ಕಳಿಗೆ ?
ನಾವಿಲ್ಲಿ ದೊರೆ ಮಕ್ಕಳಲ್ಲ.

ಒಡತಿ.— ಅಂತೆಂಬಿರಾ ?
ಕವಿಗಳಿಗೆ ಕೈಮುಗಿವೆ. ನೋಡಿದುದು ನೆನಪಿದೆಯೆ ?

ಕಾಳಿದಾಸ.—ನೆನಪಿಲ್ಲ. ನೋಡಿದುದು ಎಂದು ? ಯಾವಲ್ಲಿ ?
ನೆನಪು ಕೊಡಿ. ನೀವು ಯಾರು ?

ಒಡತಿ.— ಐದು ವರ್ಷಗಳ
ಹಿಂದೆ ತಾವನುಜಪುರದಾಲಯದ ಉತ್ಸವಕೆ
ದಯಮಾಡಿಸಿದ್ದಿರೇ ಆಗ ತಮ್ಮನು ನಾನು
ಅಲ್ಲಿ ನೋಡಿದೆನು.

ಕಾಳಿದಾಸ.— ಎಲ, ಎನಿತೊ ವರ್ಷದ ಹಿಂದೆ
ಒಮ್ಮೆ ನೋಡಿದ ಮುಖವನಿಂದು ಗುರುತಿಸುವಿರಾ ?

ಒಡತಿ.—ಎಲ್ಲ ಮುಖಗಳನು ಗುರುತಿಸಬಹುದೆ ? ಒಂದು ಮುಖ
ಮನಮುಟ್ಟಿ ನೆನಪಿನಲಿ ನಿಲ್ಲುವುದು. ಪ್ರಭುಗಳು
ನಿನ್ನೆ ಅಪ್ಪಣೆ ಕೊಟ್ಟ ರೀತಿ ನಿಮ್ಮಾಕಾರ
ಜನಮನವ ಸೆಳೆಯುವಾಕಾರ. ಆ ದಿನ ನಮ್ಮ
ಕೂಟದಲಿ ಕುಳಿತಿದ್ದ ತರುಣಿ ಒಬ್ಬಳು ಒಂದು
ಕೃತಿಯ ಹಾಡಿದ ವೇಳೆ ನೀವು ಹೊರಗಿದ್ದವರು
ಬಾಗಿಲಿಗೆ ಬಂದಿಣಿಕಿದವರು ಆ ಚೆಲುವೆಯನು
ಕಣ್ಣಿಕ್ಕಿ ನೋಡಿದಿರಿ. ನಾ ನಿಮ್ಮ ಗಮನಿಸಿ
ತಾವು ಯಾರೆಂದು ಜನರನು ಕೇಳಿ, ರಾಮಗಿರಿ
ದೊರೆ ಮಕ್ಕಳೆಂದು ತಿಳಿದೆನು.

ಕಾಳಿದಾಸ.— ಗಾಯಕರ ಕೂಟ
ನಿಮ್ಮದೆಂದಿರೆ. ನೀವು ಯಾರು ?

ಒಡತಿ.— ನಾ ಉಜ್ಜಯಿನಿ
ಅರಮನೆಯ ಗಾನ ನರ್ತನ ಕಲಾವಂತೆಯರ
ತಲೆ ಹೆಣ್ಣು. ಅನುಜಪುರದಾಲಯವ ಉತ್ಸವದ
ಸಂಗೀತ ಸೇವೆಯನು ವರುಷ ವರುಷವು ನಾನೆ
ನಡೆಸುವೆನು.

ಕಾಳಿದಾಸ.— ಅಂತೆ ? ಆ ದಿನ ನಾನು ನೋಡಿವೆನೆ
ಆ ಚೆಲುವೆ ನಿಮ್ಮವಳು.

ಒಡತಿ.— ಅಲ್ಲ. ಆ ಹೆಣ್ಣೊಬ್ಬ
ಅರಗುವರಿ ಭರತಪುರದರಮನೆಯ ಹಿರಿಮಗಳು.
" ದೇವರೆದುರಿಗೆ ಹಾಡಿ ಸೇವೆ ಸಲ್ಲಿಸೆ ಆಸೆ
ಆಗುತಿದೆ. ನಿನ್ನೊಡನೆ ಕುಳಿತು ಹಾಡುವೆ. ಇದಕೆ
ಸಮ್ಮತಿಸು," ಎಂದು ಬೇಡಿದರು. ಆ ಬೇಡಿಕೆ
ಸರಿಯಲ್ಲ. ಆದರೇನಂತೆ. ಅವರರಗುವರಿ.
ಮನ ಬೇಡವೆನುತಿದ್ದರೂ ಆಗಲೆಂದೆನು.

ಕಾಳಿದಾಸ.— ಅವಳು ಹಿಂದಿನ ದೊರೆಯು ವೇಶ್ಯೆಯೊಬ್ಬಳ ಮಗಳು
ಎಂದರಲ್ಲವೆ ಜನರು ?

ಒಡತಿ.— ಉಂಟೆ ಪ್ರಭು ? ಅವರವ್ವ
ಇಂದಿನರಸರನು, ಈ ತಂಗಿಯನು, ಇನ್ನೊಬ್ಬ
ತಂಗಿಯನು, ಹಡೆದ ರಾಣಿ. ನಾನು ಇದ ಬಲ್ಲೆ.
(**ಕಾಳಿದಾಸ ಏನೋ ಯೋಚನೆಯಲ್ಲಿ ನಿಲ್ಲುತ್ತಾನೆ**)
ಆಮೇಲೆ ನೀವಿವರ ಮದುವೆಯಾದಿರಿ ಎಂದು,
ಅದು ನಡೆದ ಮರುದಿನವೆ ಈಕೆ ನಿಮಗೇತರದೊ
ಕೆಟ್ಟ ಮಾತನು ಆಡಿ ನೀವು ಇವಳನು ಬಿಟ್ಟು
ಹೊರಟು ಹೋದಿರಿ ಎಂದು, ಹೇಳಿದರು ಜನ. ನೀವು
ತೊರೆದಿರೇ ಎಂದು ದುಃಖದಲಿ ಕಣ್ಣೀರಿಕ್ಕಿ
ಹಲುಬಿ, ಕೆಂಡದ ಹೊಂಡ ಒಂದ ಮಾಡಿಸಿ, ಅದನು
ಹೊಕ್ಕು ಅವರಸುವ ನೀಗಿದರಂತೆ. ಇದು ಕೂಡ
ಜನರು ಹರಡಿದ ಮಾತು. ಮಗ ಹೊರಟು ಹೋದನೇ
ಸೊಸೆ ಸತ್ತಳೇ ಎಂದು ದುಃಖಿಸುತ ನಿಮ್ಮವ್ವ
ಎರಡು ವಾರದ ಹಿಂದೆ ತೀರಿದರು. ಈ ಸುದ್ದಿ
ಅರಮನೆಗೆ ಬಂದಿತು. ಭರತಪುರದರಸರು
ಸೋದರಿಯ ಮದುವೆ ಸಾವಿನ ಎರಡು ಮಾತನೂ

ಹಿರಿಯ ಅರಮನೆ ಇದಕೆ ಪರದಿ ಮಾಡಿಪರಂತೆ.
ಸೀಮೆಗಳ ಅರಮನೆಗಳಿಂಥ ಹದನನು ಇಂತು
ಹಿರಿಯ ಅರಮನೆಗೆ ತಿಳಿಸುವುದೊಂದು ಆಚಾರ.
ಎತ್ತಲೋ ಹೋಗಿದ್ದ ನೀವಿದನು ತಿಳಿದೀಗ
ಮರಳಿ ಬಂದಿರಬೇಕು. ಇರುತ ನಿನ್ನೆಯ ಸಂಜೆ
ಗೋಷ್ಠಿಯಲಿ ನಿಮ್ಮ ರಚನೆಯನಂತು ಓದಿದಿರೆ,
ಇವರ ಚೇತನ ಎನಿತು ಧೀರ ಎಂದೇ ನನಗೆ
ಹಿರಿದು ಸೋಜಿಗ. ತಾವು ಓದಿದವು ರಚನೆಗಳ
ಕೇಳಿದವರೆಲ್ಲರೂ ಬಾಯ್ತುಂಬ ಹೊಗಳಿದರು.
ಹಿಂದೆ ನೋಡಿದ್ದವಳು ನನ್ನತೂ ಸಂತೋಷ
ಎನಿತೆಂದು ಬಿನ್ನವಿಸ ಇಂದಿಲ್ಲಿ ಬಂದೆನು.

ಕಾಳಿದಾಸ.—ಸ್ವಾಮಿನಿ, ಈಗ ನಿಮ್ಮೊಡನೆ ಈ ಮಾತೆಲ್ಲ
ಆಡುವೆನೆ ನನಗೆ ಮನಸಿಲ್ಲ. ಇನ ಎರಡು ದಿನ
ಬಿಟ್ಟು ಮತ್ತೊಮ್ಮೆ ಬನ್ನಿರಿ. ಎಲ್ಲ ಮಾತನೂ
ಆಡೋಣ. ಈಗ ಹೊರಡಿರಿ. ಇರುತ ಆ ಮುನ್ನ
ನಾನು ನಿಮ್ಮಲಿ ಒಂದು ಪ್ರಾರ್ಥನೆಯ ಮಾಡುವೆನು.
ಆದನು ಸಲ್ಲಿಸಿ.

ಒಡತಿ.— ಪ್ರಭುಗಳೇ, ಪ್ರಾರ್ಥನೆ ಶಬ್ದ
ಬೇಡ. ನೀವಾಣತಿಯ ನೀಡುವರು. ನಾವದನು
ನಡಸುವರು. ನೀವು ಕಾಲಿಂದ ತೋರಿದ ಕಾರ್ಯ
ಆದ ನಾನು ತಲೆಯಿಂದ ಮಾಡುವೆನು.

ಕಾಳಿದಾಸ.— ನಾನೊಬ್ಬ
ಅರಗುವರನೆಂಬುದನು ನಾನಿನ್ನು ಕೆಲದಿನ
ಮರೆಸಿ ಇರಬೇಕಿಹುದು. ಯಾವನೋ ಕವಿಯೆಂದು
ಇಲ್ಲಿ ಬಂದಿಹೆನಲ್ಲ. ಇವರಂತು ತಿಳಿದಿಹುದ
ನೀವು ತಿದ್ದಲು ಹೋಗಬೇಡಿ. ನನ್ನೀ ಬಯಕೆ
ಮನಕೆ ಬಂದಿತೆ ?

ಒಡತಿ.— ಪ್ರಭುಗಳೇ, ನಾನು ಹೇಳಿದೆನೆ.
ತಮ್ಮಿಚ್ಛೆ ನನಗಾಜ್ಞೆ. ತಕ್ಕ ಸಮಯುವ ಕಂಡು
ತಾವಾಗಿ ತಾವು ಯಾರೆಂಬುದನು ತಿಳಿಸುವಿರೆ
ಅದುವರೆಗೆ ಯಾರಿಗಾಗಲಿ ತಾವು ಯಾರೆಂದು
ನಾನು ಹೇಳುವಳಲ್ಲ. ಇದ ನಂಬಿ. ನಾ ಬರಲೆ?

ಕಾಳಿದಾಸ—ತುಂಬ ಉಪಕಾರವಾಯಿತು. ಹೋಗಿ ಬನ್ನಿರಿ.

(ಎಂದು **ಒಳಕ್ಕೆ ನಡೆಯುತ್ತಾನೆ.**)

ಒಡತಿ.—(ತನಗೆ ತಾನೆ)
ಅರಗುವರನೀತ ಅದು ಏತರದೊ ಅವಿವೇಕ
ಮಾಡಿಕೊಂಡಿಹರು. ಇಂತೆನಲೇನೆ ತಡೆಯಿಲ್ಲ.
ಚೆಲುವೆ ಅರಸಿತಿ ಹೆತ್ತಮಗಳು ಎಂದಿರೆ ನಾನು,
ಇವರ ಮುಖದಲಿ ಎನಿತು ಆಶ್ಚರ್ಯ ಕಂಡಿತು.
ಅವಳು ಕಿಚ್ಚಲಿ ಬಿದ್ದು ಸತ್ತಳೆಂದೆನೆ ಇವರು
ಅಯ್ಯೊ ಎನ್ನದೆ ಎನಿತು ಮುಖ ಕೆಟ್ಟು ಬೆವತರು!
ಆಮೇಲೆ ಏತರವೊ ಯೋಚನೆಗಳಲಿ ಮುಳುಗಿ
ನಾನಾಡಿದುದನೆಲ್ಲ ಕೇಳಿಯೂ ಕೇಳದೆ
ತಮ್ಮ ಮನಸಿನದೇನೊ ಗೊಂದಲದಿ ತೊಳಲಿದರು.
ಕವಿಗಳೆನ್ನುವ ಇಂಥ ಜನರ ಮುಖಗಳು ಇವರ
ಮನಗಳನು ಮರೆಗೆಯ್ವ ಮುಚ್ಚಳಗಳಾಗವು.
ಇವರ ಮುಖ ಇವರ ಮನಸಿಗೆ ಗಾಜ ಮುಚ್ಚಳ.
ಮುಚ್ಚಿದಂತಿರುತ ಅದು ಮನವ ತೆರೆದೇ ಇಹುದು.

(**ಎಂದು ಹೊರಡುವಳು. ಅವಳು ಹೊರಟಮೇಲೆ ಕಾಳಿದಾಸ ಮತ್ತೆ ಬರುತ್ತಾನೆ.**)

ಕಾಳಿದಾಸ.—(ತನಗೆ ತಾನೇ)
ನನ್ನಿಂದ ವಿಧಿ ಎಂತ ಪಾತಕವ ಮಾಡಿಸಿತು!
ಎಂಥ ದಾರುಣ ನೀಚ ದುಷ್ಕರ್ಮವನು ಗೆಯ್ದು
ಪಾಪಿ ಘಾತಕ ನಾನು. ಅರಗುವರಿಯನು ವೇಶ್ಯೆ
ಎಂದು ನಿಶ್ಚಯಿಸಿದುದು ಘೋರ ಪಾತಕ. ಅವಳ

ತೊರೆದು ಬೆಂಕಿಯ ಹೊಗಿಸಿ ಕೊಂದ ರೀತಿ ಕಠೋರ
ಅಕ್ಷಮ್ಯ ದುಷ್ಕರ್ಮ. ತಪ್ಪುತಿಳಿವಿನಲವಳ
ಅಣ್ಣನನು ದಂಡಿಸುವ ದುರ್ಭರೋತ್ಸಾಹದಲಿ
ಅವಳ ಮಾತ್ರವೆ ಅಲ್ಲ, ತಾಯನೂ ಗುರುವನೂ
ತೊರೆದು ದುಃಖದೊಳಾಳಿ ಎಂದು ದೇಶಾಟನಕೆ
ಹೊರಟೆನೇ, ಇದಕಿಂತ ಹಿರಿದೆನಿಪ ಅವಿವೇಕ
ಇರಬಹುದೆ ಲೋಕದಲಿ ? ಮದುವೆ ಮಾಡುವೆನೆಂದು
ಭರತಪುರದವರು ಕರೆದಂದು ಹೆಣ್ಣನು ನೋಡಿ
ಒಪ್ಪುವೆವು ಎಂದು ಹೇಳದೆ ಹೋದೆವೆಂತಿದು ?
ಹೆಣ್ಣ ನೋಡುವೆನೆಂದು ಹೋಗಿರಲು ಇವಳಾರು
ಅನುಜಪುರದಲಿ ಅಂದು ಹಾಡಿದವಳೆಂದಿರಲು
ವಿಷಯ ತಿಳಿಯುತಲಿತ್ತು. ಅದ ಬಿಟ್ಟು, ಅರಗುವರಿ
ಹೋಗಿ ಇವಳನು ನೋಡಬೇಕಾದುದೇನಿಹುದು,
ಎಂದು ಊರಲೆ ಇರುತ ಸಮ್ಮತಿಯ ನೀಡಿದೆವು.
ಹಸೆನಿಂದ ಹೊತ್ತಿನಲಿ ತಂದೆ ಈ ಮದುವೆಯನು
ಒಪ್ಪುತಿರಲಿಲ್ಲ ಎಂಬೆಣಿಕೆ ಮನದಲಿ ಮೂಡಿ
ನನಗೆ ಉತ್ಸವ ಅರುಚಿಯಾಯ್ತು. ಮದುವೆಯ ದಿವಸ,
ಅರಮನೆಯ ಮರ್ಯಾದೆ ಒಂದರ್ಥ, ಹತ್ತು ಜನ
ನನ್ನತ್ತ ನೋಡುತಿರುವಂದು ನಾನೀ ಹೆಣ್ಣ
ಎಂತು ನೋಡುವುದೆಂಬ ಸಂಕೋಚ ಒಂದರ್ಥ.
ಹೆಂಡಿರಾದವಳ ರೂಪೇನೆಂದೆ ತಿಳಿಯದೆ
ಇವಳ ಸತಿಯಾಗಿ ಪಡೆದೆನು. ಹಸೆಯ ದಿನ ಅಲ್ಲ,
ದಾಂಪತ್ಯದಾರಂಭ ಅದರ ಮರು ದಿನ, ಎಂಬ
ನಮ್ಮ ಅರಮನೆಗಳಾಚಾರ ಜೊತೆಯಲಿ ಸೇರಿ,
ಆ ಮನೆಯ ಹೆಣ್ಮಕ್ಕಳಾರೆಂಬುದನು ನಾನು
ತಿಳಿಯದಂತೆಸಗಿತು. ಹೆಂಡಿರಾದವಳು ಆ
ಮರುದಿನ ಅದೇನೊ ಎಷ್ಟಾತಿಡ್ಡಿಯಾಗೊಮ್ಮೆ,

ತುಂಬು ನಯದಕ್ಕರೆಯ ನುಡಿಯಿಂದ ಇನ್ನೊಮ್ಮೆ,
ಬೆಗಡುಗೊಳಿಸಿದಳು. ಅರಮನೆಯ ಹಿಂದಿನ ಚರಿತ,
ತೀರಾ ವಿಚಿತ್ರವೆನಿಸಿದ ಇವಳ ನಡೆನುಡಿ,
ಅನುಜಪುರದಾಲಯದಿ ಗಣಿಕೆಯರ ಮಧ್ಯದಲಿ
ಕುಳಿತಿದ್ದುದನು ನಾನು ನೋಡಿದುದು, ತಾನಂತು
ಕುಳಿತಿಪ್ಪೆನೆಂದವಳು ತಾನಾಗಿ ತಿಳಿಸಿದುದು,
ಎಲ್ಲವೂ ಸೇರಿ, ಇವಳೊಬ್ಬ ವೇಶ್ಯೆಯೆ ಸರಿ
ಎಂಬ ಸುಳ್ಳನು ಮನಸು ದಿಟ ಮಾಡಿಕೊಂಡಿತು.
ಅದರಿಂದ ಮೂಡಿದ ಅನರ್ಥದ ಪರಂಪರೆ
ನನ್ನನಿಲ್ಲಿಗೆ ತಂದು ನಿಲ್ಲಿಸಿದೆ. ಇಲ್ಲಿಂದು.
ಮುಂದೆ ಯಾವುದು ದಾರಿ ? ದೊರೆಯಾಗಿ ಬಾಳುವುದು
ಅನಿತು ರುಚಿಸದೆ, ಒಬ್ಬ ಕವಿಯಾಗಿ ಬಾಳುವುದೆ
ಚೆನ್ನವೆಂದಿಹ ನಾನು, ಇನ್ನು ಊರಿಗೆ ಹೋಗಿ
ತಾಯಿ ಇಲ್ಲದ ಮನೆಯ ಬಾಳುವೆಯ ಬಾಳುತ್ತ,
ಭರತಪುರದರಸರಲಿ ತಪ್ಪೊಪ್ಪಿ ಕ್ಷಮೆಬೇಡಿ,
ರಾಮಗಿರಿಯರಸನ ಪುನರ್ಜನ್ಮದಾಟವನು
ಆಡುವುದರಲಿ ಏನೆ ಸುಖ ಕಾಣದಿದೆ ನನಗೆ.
ಗುರು ದುಃಖಪಡುತಿಹರು. ಅಕ್ಕಯ್ಯನನು ಅವಳ
ಗಂಡ ನಾ ನನ್ನ ಹೆಂಡಿರ ಕೊಂದ ತೆರ ಕೊಂದು
ಮುಗಿಸಿಲ್ಲ. ಅದಕಿಂತ ಅನ್ಯಾಯದ ಅವಸ್ಥೆ
ಒಂದರಲಿ ನಿಲಿಸಿಹನು. ಅವಳು ದುಃಖಿಸುತಿಹಳು.
ಈ ತಂದೆ ಈ ಮಗಳು ಇವರ ದುಃಖಕೆ ನಾನು
ಸದ್ಯದಲಿ ಏತರ ನಿವಾರಣೆಯ ತರಬಹುದು,
ಇದನು ಯೋಚಿಸಬೇಕು. ಒಡನೆ ಊರಿಗೆ ಹೋಗಿ
ಇವರ ದುಃಖದ ಜೊತೆಗೆ ನನ್ನ ದುಃಖವ ಬೆರಸಿ
ಹಲುಬುವುದು, ಊಳುವುದು, ಯುಕ್ತವೆನ್ನಿಸುತಿಲ್ಲ.
ಆಯ್ತು. ತಿಂಗಳ ದಿವಸ ನೋಡುವುದು. ಆ ಮುನ್ನ

ಕುಲದೈವ ಯಾವುದೇ ದಾರಿಯನು ತೋರುವುದೆ,
ದಾರಿ ಯಾವುದು, ಎಂದು ಆರಯಿಸಿ ನೋಡುವುದು.
ಸದ್ಯದಲಿ ಮನಕೆ ಇದೆ ಸರಿ ಎಂದು ತೋರುತಿದೆ.
ಕುಲದೈವವೇ, ತಾಯೆ, ಹಿಂದಾದುದಾಯಿತು.
ಮುಂದೆ ನನ್ನನು ಒಳ್ಳೆ ದಾರಿಯಲಿ ನಡೆಯಿಸು.
ನಿನ್ನ ಅಡಿಗೆರಗಿಹೆನು. ತಾಯೆ ಸಂರಕ್ಷಿಸು.

ಸ್ಥಾನ ೨

ಎರಡು ತಿಂಗಳ ಆಚೆ. **ಪ್ರಭು ಮಂದಿರದಲ್ಲಿ ಕವಿಗೋಷ್ಠಿ. ಪ್ರಭು, ಕವಿಗಳು ಕವಿಶೇಖರ, ಶರ್ಕರಕ, ವನಮಾಲ, ಚಂದ್ರಾಂಶು, ಕಾಳಿದಾಸ, ಋತ್ವಿಕ ಇರುವರು.**

ಪ್ರಭು.—ಎರಡು ತಿಂಗಳ ದಿವಸ ನಾವು ರಾಜ್ಯದ ನಾಲ್ಕು
ದಿಶೆಯ ದೂರ ಪ್ರದೇಶಗಳಲ್ಲಿ ಜನಪದದ
ಕಷ್ಟಸುಖಗಳ ತಿಳಿಯೆ ನಡೆಸಿದ ಪ್ರವಾಸದಲಿ
ಇಲ್ಲಿ ಗೋಷ್ಠಿಯಲಿ ತಮ್ಮೆಲ್ಲರನು ಕಾಂಬ ಈ
ಸಂತಸವ ಕಳೆದುಕೊಂಡುದು ಆಯ್ತು. ಎಲ್ಲರೂ
ಸೌಖ್ಯವೇ ?

ಕವಿಶೇಖರ.— ಪ್ರಭು, ದೈವಕೃಪೆ, ತಮ್ಮನುಗ್ರಹ ;
ಎಲ್ಲರೂ ಸೌಖ್ಯವಾಗಿರುವೆವು. ಪ್ರವಾಸವನು
ಮುಗಿಸಿ ಪ್ರಭುಗಳು ಸೌಖ್ಯವಾಗಿ ಹಿಂತಿರುಗಿಹಿರಿ.
ಇದು ಇಲ್ಲಿ ಎಲ್ಲರಿಗು ಸಂತೋಷ.

ಪ್ರಭು.— ವಂದನೆ.
ಈ ಅಂತರದಲಿ ಕವಿಗಳು ತಮ್ಮ ಅಭಿರುಚಿಯ
ವಿಷಯಗಳ ಕುರಿತು ಯೋಚಿಸಿ ಯಾವ ರಚನೆಯಲಿ
ತೊಡಗುವುದು ಎಂದು ನಿರ್ಣಯಿಸಿಕೊಂಡಿಹರೆಂದು
ನನ್ನೆಣಿಕೆ. ಕವಿಗಳು, ಯಾರು ಏನನು ಕುರಿತು
ರಚನೆಗೆಯ್ಯುವುದೆಂದು ಮನವ ಮಾಡಿರುವಿರಿ,
ಇದನು ಗೋಷ್ಠಿಗೆ ತಿಳಿಸುವಿರ ?

ಶರ್ಕರಕ.— ಪ್ರಭು, ನಾವೆಲ್ಲ
ಹಿಂದಿನಿಂದಲು ನಮ್ಮ ಗೋಷ್ಠಿಯಲಿ ಇದ್ದವರು.
ಹೊಸದಾಗಿ ಬಂದಿರುವ ಕಾಳಿದಾಸರು ತಾವು
ಯಾವ ಕೃತಿಗಳನು ನಿರ್ಮಿಸಲು ಯೋಚಿಸುತಿಹರು,
ಅದ ತಿಳಿಯೆ ನಮ್ಮಲೆಲ್ಲರಿಗೂ ಕುತೂಹಲ.

ಪ್ರಭು.—ಆ ಕುತೂಹಲ ಸಹಜ. ಅಂತೆ ಅದು ಬಹು ಯುಕ್ತ.
ಅದ ತಿಳಿಯೆ ನಮಗೂ ಕುತೂಹಲವೆ. ಕವಿಗಳೇ
ತಾವು ನಿರ್ಮಿಸಲು ಯೋಚಿಸುತಿರುವ ಕೃತಿಗಳು
ಯಾವವೆಂಬುದನು ತಿಳಿಸಲು ಬಹುದೆ?

ಕಾಳಿದಾಸ.— ಪ್ರಭುಗಳಲಿ
ಬಿನ್ನವಿಸ ಬರದ ಸಂಗತಿಯಿಲ್ಲ. ಬಿನ್ನವಿಸು
ಎಂದು ಬೆಸಸಿದರೆ ಬಿನ್ನವಿಸುವೆನು.

ಪ್ರಭು.— ಹೇಳಿರಿ.
ಕೇಳಿ ಸಂತೋಷಿಸುವ.

ಕಾಳಿದಾಸ.— ಪ್ರಭುಗಳಲಿ ಬಿನ್ನಪ.
ತಾವು ಮೆಚ್ಚಿರುವ ಋತುಸಂಹಾರ ಕಾವ್ಯವನು
ರಚಿಸಿ ಮುಗಿಸಿದ ಬಳಿಕ ಕವಿಯಶವ ಬಯಸುತಿಹ
ಮಂದ ನಾ, ದೈವ ನನಗಾಯುಷ್ಯವನು, ಅಂತೆ
ಶಕ್ತಿಯನು, ಕರುಣಿಸಲು, ಏನೇನ ರಚಿಸುವುದು
ಎಂದು ಯೋಚಿಸಿದೆನಹುದು. ಮನಕೆ ತೋರಿರುವ
ಎಲ್ಲ ಕೃತಿಗಳ ಹೆಸರ ಹೇಳಿದೆನೆ, ಕೇಳುವರು,
ದಿಟವಾಗಿ ಈ ಪ್ರಾಣಿ ಮಂದ, ಎನ್ನುತ ನನ್ನ
ನಕ್ಕಾರು.

ಪ್ರಭು.— ನಿಮ್ಮ ನಗುವವರು ತಾವೆಂತಪ್ಪ
ಎಗ್ಗರೆಂಬುದ ಜಗಕೆ ತಿಳಿಸುವರು. ಅಂಥವರ
ಮಾತ ಬಿಡಿ. ನಮ್ಮಂಥ ಸಾಹಿತ್ಯ ಭಕ್ತರಿಗೆ
ನಿಮ್ಮ ಉದ್ಯಮದ ಪರಿವೆಯ ಅರಿವ ನೀಡಿರಿ.

ಕಾಳಿದಾಸ.—ಪ್ರಭು. ನಾನು ಯೋಚಿಸಿದ ಮೊದಲ ಕಾವ್ಯದ ವಸ್ತು
ತಾರಕಾಸುರನ ವಧೆಗೆಂದು ಇಂದ್ರಾದಿಗಳು
ನಾಯಕನ ಪಡೆದ ಪರಿಯೇನವನು ವರ್ಣಿಸುವ
ಕಥೆ. ಅದು ಕುಮಾರ ಸಂಭವ. ಎರಡನೆಯ ವಸ್ತು
ಸೂರ್ಯವಂಶದ ಹಿರಿಯ ಚಕ್ರವರ್ತಿ ದಿಲೀಪ
ಅವನಿಂದ ಮೊದಲಾಗಿ ರಾಮಚಂದ್ರನ, ಅವನ
ಆಚಿನವು ನಾಲ್ಕೈದು ತಲೆಮಾರ ಅರಸರವು
ಚರಿತವನು ಕುರಿತಿಹುದು "ರಘುವಂಶ".

ಶರ್ಕರಕ.—(ಪಕ್ಕದಲ್ಲಿರುವ ಕವಿಗೆ ಮೆಲ್ಲನೆ ದನಿಯಲ್ಲಿ)
ಕಂಡಿರಾ .
ಗೀರ್ವಾಣ ಸಾಹಿತ್ಯಲೋಕದಲಿ ಇನ್ನುರಲೆ
ಎಂಥೆಂಥ ಸೂರ್ಯರುದಯಿಸಲಿಹರು.

ವನಮಾಲ.— ಸುಮ್ಮನಿರಿ.
ಹೊಟ್ಟೆಯುರಿ ಜನ ಎಂದು ಸಭೆ ನಮ್ಮ ಹಳಿದೀತು.

ಪ್ರಭು.—ಶರ್ಕರಕ ಕವಿಗಳಪ್ಪಣೆ ಕೊಡಿಸುತಿಹುದೇನು?

ಶರ್ಕರಕ.—(ಸ್ವಲ್ಪ ಕಕಮಕನಾಗಿ)
ಕಾವ್ಯವೆರಡರ ವಸ್ತುವೂ ತುಂಬ ಉದಾತ್ತವು
ಕಾವ್ಯಗಳಿಗೊದಗಬಹುದಾದ ವಸ್ತುಗಳೆಂದು
ಅರಿಕೆ ಮಾಡಿದೆ ಪ್ರಭು.

ಪ್ರಭು.— ಬಹು ಉಚಿತ ಭಾವನೆ.
ಆಮೇಲೆ ಕವಿಗಳೆ?

ಕಾಳಿದಾಸ.— ರಾಮಗಿರಿಯಲಿ ಒಂದು
ಜಾನಪದ ಕತೆ ಇಹುದು. ಹಿಂದೆ ಕುಬೇರನ ಒಬ್ಬ
ಅಧಿಕಾರಿ ತಪ್ಪಾಗಿ ನಡೆದು ತನ್ನರಸನನು
ಕೋಪಗೊಳಿಸಿದನು. ಆ ಕೋಪದಲಿ ದೊರೆ ಅವನ
ಒಂದು ವರುಷದ ಕಾಲ ನೀನು ಹೆಂಡಿರನಗಲಿದು
ದೂರದಲಿ ಒಂಟಿ ಬಾಳನು ಬಾಳು ಎಂದು ಹಿರಿ

ದಂಡನೆಗೆ ಗುರಿ ಮಾಡಿದನು. ಯಕ್ಷ ಅವ ನಮ್ಮ
ಗಿರಿಯ ಆಶ್ರಮದಿ ದಿನಗಳ ನೂಕಿದನು ಎಂದು
ಜನರ ನಂಬಿಕೆ. ಯಕ್ಷ ಒಂಟಿಯಾಗಿರುವಂದು
ಮಳೆಗಾಲದೊಂದು ದಿನ ಒಂದು ಮೋಡವ ಕರೆದು
ಅದರ ಮೂಲಕ ತನ್ನ ಸತಿಗೆ, ದುಃಖಿಸಬೇಡ,
ನಾನು ಬೇಗನೆ ಬರುವೆ, ಎಂದು ಸಂದೇಶವನು
ಕಳುಹಿಸಿದನೆನ್ನುವುದು ಒಂದು ಕವಿತೆಯ ವಸ್ತು.

ಚಂದ್ರಾಂಶು.—(ಇವನಿಗೆ ಕಿವಿಯಲ್ಲಿ)
ಸಾಕಿನ್ನು ನಿಲ್ಲಿಸು. ಈಗಾಗಲೇ ನಮ್ಮ
ಜೊತೆಯವರ ಹೊಟ್ಟೆಯುರಿ ಅವರ ಕಣ್ಣಿಗೆ ಬಂದು
ಕಿಡಿಯಾಗಿ ಕಾಣುತಿದೆ. ಇತರ ಕೃತಿಗಳ ಹೆಸರ
ಹೇಳುವುದು ಬೇಡ.

ಪ್ರಭು.— ಚಂದ್ರಾಂಶುಗಳ ಕಿವಿಮಾತು
ಏನು ಅದ ಹೇಳಿರಿ. ಎಲ್ಲರಿಗು ತಿಳಿಯಲಿ

ಚಂದ್ರಾಂಶು.—(ಕಾಳಿದಾಸನಿಗೆ) ಅಯ್ಯೋ.

ಕಾಳಿದಾಸ.—(ಅವನಿಗೆ) ಭಯಬೇಡ
(ಎಂದು ಆ ಕ್ಷಣ ತೋಚಿದ ಮಾತನ್ನು)
ಪ್ರಭು ಅವರು ಎಂಬರು,
ಬರಿಯ ಹೆಸರಿಂದೇನು? ಒಂದೊಂದು ಕೃತಿಯಿಂದ
ಶ್ಲೋಕ ಒಂದನು ಹೇಳು ಎಂದು.

ಪ್ರಭು.— ಕವಿಜನರಿವರು
ಎಂಥ ಜಾಣರು! ಶರ್ಕರಕ ಕವಿಗಳಂತೆಯೇ
ಚಂದ್ರಾಂಶು ಕವಿ ಕಾವ್ಯಸೂಕ್ಷ್ಮವನು ಬಲ್ಲವರು.
ಉದ್ದೇಶಿಸಿಹ ಕಾವ್ಯ ಇವು, ಎಲ್ಲ ಇವುಗಳಲಿ
ಶ್ಲೋಕಗಳು ಸಿದ್ಧವಾಗಿಹವೆ?

ಕಾಳಿದಾಸ.— ಪ್ರಭುಗಳೆ, ನಾನು
ರಚನೆಯಲಿ ಹಿಡಿದಿರುವ ಕ್ರಮ ಇದು. ಯೋಚಿಸಿದ

ಒಂದೊಂದು ಕಾವ್ಯಕೂ ಒಂದು ಕಡತವ ಮಾಡಿ,
ಯಾವ ಕಾವ್ಯದ ಒಂದು ಸಂದರ್ಭವನು ಕುರಿತು
ಮನಸು ರಚನೆಯಲಿ ತೊಡಗುವುದು. ಅದ ರಚಿಸಲು
ಅದನು ಬಿಡುವುದು. ರಚನೆ ಮುಂದರಿದು ಮುಗಿದೊಂದು
ಶ್ಲೋಕ ಆಯಿತೆ, ಅದನು ಕಡತದಲಿ ಬರೆಯುವುದು.
ಇಂತು ನಾ ರಚಿಸಲೆಳಸಿರುವೆಲ್ಲ ಕೃತಿಯಲೂ
ಹತ್ತೊ ಐದೊ ನಾಲ್ಕೊ ಇಪ್ಪತ್ತೊ ಪಂಕ್ತಿಗಳು
ಕಡತದಲಿ ಇರುವುವು. ಚಂದ್ರಾಂಶುಕವಿ ಇದನು
ನೋಡಿಹರು.

ಪ್ರಭು.— ನಿಮ್ಮ ಈ ಕ್ರಮ ನಿಮ್ಮ ಕೌಶಲ
ಕಾವ್ಯರಚನೆಯ ಕಾರ್ಯದಲಿ ಎನಿತುಪಾಯಗಳ
ಮಾಡಿಕೊಂಡಿಹುದೆಂದು ತೋರುವುದು. ಅಂತಿರಲು
ಕೃತಿ ಮೂರರಿಂದಲೂ ಒಂದೊಂದು ಶ್ಲೋಕವನು
ಓದುವಿರ? ಓದಿ ನಮ್ಮೆಲ್ಲರಿಗು ಸಂತಸವ
ನೀಡುವಿರ?

ಮುತ್ಸಿಕ.— ಕಲ್ಲಿಂದ ಮೂರ್ತಿಗಳ ಕಲ್ಪಿಸುವ
ಮೂರ್ತಿಶಿಲ್ಪಿಗಳು ಕೆಲಸದ ಮಧ್ಯದಲಿ ತಾವು
ಕಡೆದಿರುವ ಅರೆಕೊರೆಯ ಮೂರ್ತಿಗಳನನ್ಯರಿಗೆ
ತೋರಿಸುವುದಿಲ್ಲ ಎಂಬರು. ಅಂತು ತೋರುವುದು
ಅಶುಭ ಎಂಬರು. ಅಂತು ತೋರಿಸಿದ ಮೂರ್ತಿಗಳು
ಯಾವುದೋ ಕಾರಣಕೆ ಪೂರ್ತಿಯಾಗದೆ ಅಂತೆ
ನಿಂತು ಹೋಗುವುವಂತೆ. ಕಲ್ಲ ಶಿಲ್ಪಕೆ ಸಲುವ
ಶಂಕೆ ಶಬ್ದದ ಶಿಲ್ಪಕೂ ಸಲ್ಲಬಹುದಲ್ಲ?
ಕವಿಕರ್ಮ ಇನ್ನಷ್ಟು ಮುಂದರಿದು ಕಾವ್ಯಗಳು
ತಕ್ಕಷ್ಟು ಒಂದು ರೂಪಕೆ ಬಂದಮೇಲೆ ಪ್ರಭು
ಅವ ನೋಡಬಹುದಲ್ಲ?

ಪ್ರಭು.— ಮೂರ್ತಿಶಿಲ್ಪದ ಮಾತು,

ಶಬ್ದಶಿಲ್ಪದ ಮಾತು, ಒಂದಲ್ಲ, ಮತ್ತಿಕರೆ.
ಮೂರ್ತಿಶಿಲ್ಪದ ಮೂರ್ತಿ ಮುಗಿವುದಕೆ ಮುನ್ನೊಂದು
ಅರೆ ಮೂರ್ತಿ ಕೊರೆ ಮೂರ್ತಿಯಾಗಿಹುದು. ಕಾವ್ಯದಲಿ
ಶ್ಲೋಕ ಒಂದೊಂದು ಸಹ ಸಂಪೂರ್ಣ ಆಕಾರ.
ಮೇಲಾಗಿ ಇದರಲಿ ರಹಸ್ಯ ಇನ್ನೊಂದಿಹುದು.
ಶಬ್ದಶಿಲ್ಪವನರ್ಥದಲಿ ನೋಡುತಿಹ ನಾವು
ಶಬ್ದಶಿಲ್ಪಿಗೆ ಅನ್ಯರಲ್ಲ. ನಾವೆಲ್ಲರೂ
ಹಿರಿಯ ಈ ಶಿಲ್ಪಿಗಳ ಪರಿವಾರ, ಸಂಸಾರ.
ಎಲ್ಲ ಹೊತ್ತಲು ನಾವು ಅವರ ಸುತ್ತಲೆ ನಿಂತು,
ಶಿಲ್ಪ ದಿನದಿನ ಯಾವ ಹಂತವನು ಮುಟ್ಟಿತು,
ಎಂದು ನೋಡುವುದು ಸಂತೋಷಪಡುವುದು, ಅಶುಭ
ಆಗಿ, ಹಿರಿ ತಿಲ್ಪಿಗಳ ನಿರ್ಮಾಣಶಕ್ತಿಗೆ,
ತಮ್ಮ ಕರ್ಮದಲಿವರು ಪಡೆಯಲಿಹ ಸಿದ್ಧಿಗೆ,
ಅಡ್ಡಿಯಾಗುವುದಿಲ್ಲ.

ಮತ್ತಿಕ.— ಪ್ರಭು ಚಿತ್ತ.

ಪ್ರಭು.— ಕವಿಗಳೇ
ಕೃತಿಗಳಿಂದೊಂದೆರಡು ಶ್ಲೋಕಗಳನೋದಿರಿ.

ಕಾಳಿದಾಸ.—ಪ್ರಭುಗಳಪ್ಪಣೆ. ದೇವತಾಪ್ರಾರ್ಥನಾರೂಪ
ರಘುವಂಶ ಕಾವ್ಯದಾರಂಭದೀಶ್ಲೋಕವನು
ಮೊದಲಿನಲಿ ಓದುವೆನು.

(ಎಂದು)

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ

(ಶ್ಲೋಕವನ್ನು ಹಾಡುತ್ತಾನೆ)

ಪ್ರಭು.—(ಕ್ಷಣ ಸುಮ್ಮನಿದ್ದು ಬಳಿಕ)
ಈ ಶ್ಲೋಕವನು ಕೇಳಿ ಕವಿಗೋಷ್ಠಿ ಹಿರಿಯರು
ಕವಿಶೇಖರರಿಗೇನು ತೋರುತಿದೆ?

ಕವಿಶೇಖರ.— ಕವಿರತ್ನ
ಪ್ರಭುಗಳಿಗೆ ಏನು ತೋರುವುದು ಅವರೊಂದಂಶ
ಅಲ್ಪ ದೃಷ್ಟಿಯು ನನಗೆ ತೋರುತಿವೆ. ಪರತತ್ತ್ವ
ಸಾಹಿತ್ಯ ತತ್ತ್ವಗಳ ಸಾರವನು ಕವಿಗಳು
ಒಂದನುಷ್ಟುಪ್ ಶ್ಲೋಕದಲಿ ತುಂಬಿ ನಿಲಿಸಿಹರು.
ಏನು ಶರ್ಕರಕ ಕವಿಗಳೆ?

ಶರ್ಕರಕ.— ಪ್ರಭುಗಳನುಭಾವ
ಬಹು ಯುಕ್ತ.

ಪ್ರಭು.— ರಾಮಚಂದ್ರನ ಕುರಿತು ನಮ್ಮ ಜನ
ಒಂದು ಕತೆ ಹೇಳುವರು. ಶ್ರೀರಾಮ ಜನಿಸಿದರೆ
ಆ ಕ್ಷಣವೆ, ತಂದೆ ದಶರಥ ಚಕ್ರವರ್ತಿಗಳು
ಮಗನ ನೋಡಲು ಬಯಸಿದರು. ಹೆರಿಗೆ ಕೋಣೆಯಲಿ
ಸೂಲಗಿತಿ ಚಕ್ರವರ್ತಿನಿ. ಹುಟ್ಟಿದೊಡನೆಯೇ
ಮಗುವ ತೋರುವುದುಂಟೆ, ಗಳಿಗೆ ತಡೆಯಿರಿ, ಎಂದು
ಅವಳು ಹೇಳಿದಳು. ದೊರೆಗೆಂತು ಅಂತೇ ಅವರ
ಗುರು ವಸಿಷ್ಠರಿಗು ಹಸುಳೆಯನೊಡನೆ ಕಾಂಬಾಸೆ.
ಅವರು ಹೆರಿಗೆಯ ಮನೆಯ ಬಾಗಿಲನು ಸಾರಿದರು.
ಮಗುವ ತಂದೆಗೆ ತೋರಬಾರದೆಂಬುದು ಸರಿ,
ನಾನು ಗುರು, ಗುರುಗಳಿಗೆ ತೋರುವುದು ತಪ್ಪಲ್ಲ,
ಹಸುಳೆಯನು ನನಗೆ ತೋರಿಸು, ಎಂದು ಬೆಸಸಿದರು.
ದೊರೆಯ ಮಾತನು ಮೀರಬಹುದು. ಗುರುವಿನ ಮಾತ
ಮೀರಲಾಗದು. ಸೂಲಗಿತಿ ನೊರದಿ ಮಲಗಿಸಿಹ
ಮಗುವ ಮೈಯನು ಒಂದು ಕೌಶೇಯ ವಸ್ತ್ರದಲಿ
ಮರೆಮಾಡಿ, ಅದರ ಎಡಗಾಲ ಕಿರುಬೆರಳಷ್ಟ
ಗುರುಗಳಿಗೆ ತೋರಿದಳು. ತೋರಿದಷ್ಟನೆ ನೋಡಿ
ಗುರು, ದೊರೆಗೆ ಹೇಳಿದರು: "ಲೋಕನಾಥನೆ ಇಂದು
ನಿಮ್ಮ ಮಗುವಾಗಿ ಈ ಭೂಮಿಗವತರಿಸಿಹನು."

ಕಿರುಬೆರಳ ನೋಡಿ ಗುರು ರಾಮಚಂದ್ರನ ಚರಿತ
ಲೋಕ ರಕ್ಷಕನ ಕಥೆಯಾಗುವುದು ಎಂಬುದನು
ಕಂಡುಕೊಂಡರು. ನಮ್ಮ ಗೋಷ್ಠಿಯ ಗುರುಸ್ಥಾನ
ನಮಗೆಲ್ಲ ಹಿರಿಯರಹ ಋತ್ವಿಕರ ಸೇರಿಹುದು.
ಕಿರಿಬೆರಳ ನೋಡಿರುವ ನಮ್ಮ ಹಿರಿಯರು ಕಾವ್ಯ
ಎಂಥ ಕೃತಿ ಆದೀತು, ಅಪ್ಪಣೆ ಅನುಗ್ರಹಿಸಿ.

ಋತ್ವಿಕ.—ಪ್ರಭುಗಳೇ, ಕಾಳಿದಾಸರ ತಮ್ಮ ಸನ್ನಿಧಿಗೆ
ಕರೆದು ತಂದವ ನಾನು. ಮೇಲಾಗಿ ನಾನವರ
ಗುರುಗಳಿಗೆ ಅನ್ವಯದ ಬಂಧು. ಇಂತಿರೆ ಇವರ
ನಾನು ಹೊಗಳಿದೆ, ಕೇಳುವವರು ಇದು ಬಂಧುಗಳ
ಒಲುಮೆ ಮಾತೆಂದಾರು. ರಾಮಚಂದ್ರನ ಕುರಿತ
ಜಾನಪದ ಕತೆಯ ಹೇಳುವುದರಲೇ ಪ್ರಭು ತಾವು
ಕೃತಿ ಎಂಥದಹುದೆಂದು ಮನತೆರೆದು ತಿಳಿಸಿಹಿರಿ.
ಪ್ರಭು ಸನ್ನಿಧಾನ ಇಂತೆಂದು ತಿಳಿಸಿದ ಮೇಲೆ
ನಾನರಿಕೆ ಮಾಡಬೇಕೆಂಬ ಮಾತೊಂದಿಲ್ಲ.

ಪ್ರಭು.—ಅಂತಿರಲು ಕವಿ ತಮ್ಮ ಮೇಘ ಸಂದೇಶ ಕೃತಿ
ಅಂತೇ ಕುಮಾರ ಸಂಭವ ಎಂಬ ಕೃತಿಯಿಂದ
ಶ್ಲೋಕಗಳನೋದಲಿ.

ಕವಿಶೇಖರ.— ಮಹೋದಯರೆ.

ಕಾಳಿದಾಸ.— ಅಪ್ಪಣೆ.

(ಎಂದು ಓದಲು ಸಿದ್ಧನಾಗುತ್ತಾನೆ. ಒಳಗಿಂದ ಒಬ್ಬ ಕಂಚುಕಿ ಬಂದು ದೊರೆಗೆ ಏನೋ ಅರಿಕೆ ಮಾಡುತ್ತಾನೆ. ಅದನ್ನು ಕೇಳಿ,)

ಪ್ರಭು.—ಮನ್ನಿಸಿರಿ. ನಾವೀಗ ಬೇರೆಯದು ಕಾರ್ಯವನು
ಗಮನಿಸಲು ಹೋಗಬೇಕಾಗಿಹುದು. ಓದು, ಇದ
ಬರುವ ಗೋಷ್ಠಿಯಲಿ ನಡೆಸುವ.

ಕವಿಶೇಖರ.— ನಮಸ್ಕಾರ,
ಪ್ರಭುಗಳಿಗೆ.

ಇತರರು.— ವಂದನೆ, ನಮಸ್ಕಾರ, ವಂದನೆ.

ಪ್ರಭು.—ವಂದನೆ (ಎಂದು ಕೈಮುಗಿದಂತೆಯೇ ಎಲ್ಲರನ್ನೂ ಕುರಿತು ದೃಷ್ಟಿಹರಿ ಹೊರಡುವನು.)

ಸ್ಥಾನ ೩

ಮುಂದಿನ ಸಲದ ಕವಿಗೋಷ್ಠಿ. ಗೋಷ್ಠಿ ಎಂದಿನಂತೆ ಸೇರಿದೆ.

ಪ್ರಭು.—ಕಳೆದ ಕವಿಗೋಷ್ಠಿಯನು ಒಂದು ಕಾರಣಕಾಗಿ
ಕ್ಷಮೆ ಬೇಡಿ ಮಧ್ಯದಲಿ ಬಿಟ್ಟುಹೋದೆವು ನಾವು.
ಗೋಷ್ಠಿ ಮತ್ತೊಮ್ಮೆ ನೆರೆಯುವವರೆಗೆ ಕವಿ ಕೃತಿಯ
ನೋಡದಿರುವುದ ನಮ್ಮ ಮನ ಸಹಿಸದಾಯಿತು.
ಇಂತಾಗಿ ನಾವು ಚಂದ್ರಾಂಶು ಕವಿಗಳ ಕರೆಸಿ
ಕವಿವರರು ಓದಲೆಳಸಿದ್ದ ಆ ಶ್ಲೋಕಗಳ
ತರಿಸಿ ಓದಿಸಿ ಕೇಳಿದೆವು. ಕೇಳಿ ಅವನೆಲ್ಲ
ಪ್ರತಿಮಾಡಿ ತಮ್ಮೆಲ್ಲರಿಗು ತೋರಿಸಿ ಎಂದು
ಬಯಸಿದೆವು. ಕವಿ ಇದನು ಮಾಡಿ ಆಗಿದೆ ಎಂದು
ತಿಳಿಸಿದರು. ಎಲ್ಲರೂ ಶ್ಲೋಕಗಳ ನೋಡಿಹಿರಿ.

ಹಲವು ಧ್ವನಿ.—ನೋಡಿಹೆವು ಪ್ರಭುಗಳೆ. ನೋಡಿಹೆವು ಪ್ರಭುಗಳೆ.

ಪ್ರಭು.—ಮೇರುವಿನ ಶಿಖರಗಳ ನೋಡುವರು ಶಿಖರಗಳು
ಹೊನ್ನ ಶಿಖರಗಳೆಂದು ಕಂಡು ಈ ಗಿರಿಯೆಲ್ಲ
ಬಂಗಾರವೆಂದು ತಿಳಿವಂತೆ ನಾವೆಮ್ಮ ಕವಿ
ಕಾಳಿದಾಸರು ಕಾವ್ಯಲೋಕದಲಿ ಮೇರುಕವಿ
ಎಂದು ಭಾವಿಸುತಿಹೆವು. ನಮ್ಮ ಭಾವನೆ ಇದನು
ತಮಗೆಲ್ಲ ತಿಳಿಸಬೇಕೆಂದು ಕವಿಶೇಖರರ
ಬೇಡಿದೆವು.

ಕವಿಶೇಖರ.— ಅಪ್ಪಣೆಯ ನಡೆಸಿ ಆಗಿದೆ ಪ್ರಭು.

ಪ್ರಭು.—ನಮ್ಮ ಭಾವನೆ ತಮ್ಮೆಲೆಲ್ಲರಿಗು ಒಪ್ಪಿಗೆ
ಎಂದು ನಾವೆಣಿಸಬಹುದೇ ?

ವಿಶೇಖರ.— ಎಣಿಸಬಹುದು, ಪ್ರಭು.
ಗೋಷ್ಠಿಯವರೆಲ್ಲ ಆಜ್ಞೆಯನು ಶಿರಸಾವಹಿಸಿ
ಒಪ್ಪಿಕೊಂಡಿಹರು.

ಪ್ರಭು.— ಅಂತಿರಲು ಕವಿಶೇಖರರೆ,
ಗೋಷ್ಠಿಯನುಮತಿಯಿಂದ ನಾವು ಈ ಕವಿಗಳಿಗೆ
ಕವಿಸಾರ್ವಭೌಮ ಎನ್ನುವ ಬಿರುದ ನೀಡಿಹೆವು.
ಅದರ ಲಾಂಛನವಾಗಿ ಈ ರತ್ನಹಾರವನು
ಅವರಿಗೊಪ್ಪಿಸಲು ತಂದಿಹೆವು. ಇದ ಋತ್ವಿಕರು
ನಮ್ಮ ಪರವಾಗಿ ಕವಿಗಳಿಗೆ ಒಪ್ಪಿಸಲೆಂದು
ನಮ್ಮ ತೀವ್ರ ಅಪೇಕ್ಷೆ.

ಋತ್ವಿಕ.— ಬಿರುದ ನೀಡುತಲಿರುವ
ಮೇರುಶೈಲಸಮಾನ ಹೃದಯದೌದಾರ್ಯವನು
ಮೆರೆಯುವ ಮಹಾ ಪ್ರಭುಗಳಮೃತ ಹಸ್ತವೆ ಅದನು
ಕವಿಗಳಿಗೆ ನೀಡಲೆಂಬುದು ನನ್ನ ಪ್ರಾರ್ಥನೆ.

ಪ್ರಭು.—ಅಂತೆ ? ಆಗಲಿ. ಬನ್ನಿ, ಕವಿ ಕಾಳಿದಾಸರೇ.
(ಕಾಳಿದಾಸ ಹೋಗಿ ಎದುರಿಗೆ ನಿಲ್ಲುತ್ತಾನೆ.)
ಕಾವ್ಯಲೋಕದ ಸಾರ್ವಭೌಮ, ಸಾವಿರ ಕಾಲ
ಬಾಳಿ, ಎಂದೆಲ್ಲ ಹಿರಿಯರು ನಿಮ್ಮ ಹರಸಿಹರು.
ಮಧ್ಯದ ಕಿರೀಟರೂಪದ ರತ್ನ ಹಿರಿಯಕವಿ
ನಿಮ್ಮೆದೆಯ ನೆಮ್ಮುವುದು. ಅದರರ್ಥ ನಿಮ್ಮ ನುಡಿ
ಮನುಜರೆದೆಯಲಿ ಬರುವ ನೂರಾರು ಕಾಲವೂ
ಅರಸಾಗಿ ಆಳುವುದು ಎನ್ನುವುದು.
(ಎಂದು ಹಾರವನ್ನು ಕವಿಯ ಕೊರಳಿಗೆ ಹಾಕುತ್ತಾನೆ.)

ಕಾಳಿದಾಸ.—(ಕೈಮುಗಿದು) ಪ್ರಭುಪದಕೆ
ಯಾವ ಶಬ್ದಗಳಿಂದ ವಂದನೆಯ ಸಲ್ಲಿಸಲಿ
ಇದು ನನಗೆ ತೋರದಿದೆ. ಈ ಶಬ್ದರಿಕ್ತತೆ
ಇನಿತು, ನಾನಿದರಿಂದ ಅಸಹಾಯನಾಗಿಹೆನು.

ಮಾತಿನಿಂದಾಗದುವ ಮೌನದಲಿ ತಿಳಿಸಿಹೆನು.
ಪ್ರಭುಗಳೀ ವಾತ್ಸಲ್ಯ ಗೌರವಗಳಿಗೆ ತಗುವ
ತೆರ ನನ್ನ ಸೇವೆ ಬೆಳೆವಂತೆನ್ನ ಕುಲದೈವ
ನನ್ನ ನಡಸಲಿ ಎಂದು ಭಕ್ತಿಯಲಿ ಬೇಡುವೆನು.

(ಎಂದು ತನ್ನ ಪೀಠಕ್ಕೆ ಹೋಗುವನು.)

ಪ್ರಭು.—ಗೋಷ್ಠಿಯಲಿ ಕವಿಭೃತ್ಯ ಎಂಬ ಹೆಸರಿನ ಒಬ್ಬ
ಕವಿ ಇಹರು, ಬಲ್ಲಿರಾ, ಕವಿಗಳೆ?

ಕಾಳಿದಾಸ.— ಆ ಹೆಸರ
ಕೇಳಿಹೆನು ಪ್ರಭು. ಅವರ ಕಾಣದಿರೆ, ಕವಿಗಳು
ಸದ್ಯ ಎತ್ತಲೊ ಹೋಗಿಹರು ಎಂದು ನೆನೆದೆನು.

ಚಂದ್ರಾಂಶು.—(ಅವನಿಗೆ) ಕವಿಭೃತ್ಯ, ನಮ್ಮ ಪ್ರಭು ವರಿಸಿರುವ ಕವಿನಾಮ.

ಕಾಳಿದಾಸ.—(ಅವನಿಗೆ) ಅಂತೆ? (ಪ್ರಭುವಿಗೆ) ಚಂದ್ರಾಂಶು ಕವಿಗಳು
ಈಗ ಕವಿವರರ
ಪರಿಚಯವ ತಿಳಿಸಿಹರು. ಪ್ರಭುವಾಗಿ ಪೊರೆಯುತಿಹ
ಕವಿಗಳಿಗೆ ನಮನ.

ಪ್ರಭು.—(ನಗುತ್ತಾ) ಕವಿಸಾರ್ವಭೌಮರಿಗೆ
ಕವಿಭೃತ್ಯ ನಮಿಸುವನು. ಕುಳ್ಳಿರಿ, ಕುಳ್ಳಿರಿ.
ಗೋಷ್ಠಿಯಲಿ ಇಂದು ರಘುವಂಶ ಕಾವ್ಯದ ಮೊದಲ
ಪ್ರಸ್ತಾವನೆಯ ವಾಕ್ಯಗಳನು ಓದಿಸಿ ಕೇಳಿ
ಸಂತೋಷಿಸುವ ಎಂದು ಮನಸಿತ್ತು. ಕಳೆದ ಸಲ
ಎಂತಂತೆ ಈ ಸಲವು ಬೇರೆಯವು ಕೆಲಸ ಇವೆ.
ಇಂತಾಗಿ ಆ ಶ್ಲೋಕಗಳ ಪಾಠವನು ಬರುವ
ಗೋಷ್ಠಿ ನೆರೆಯುವವರೆಗೆ ತಡೆಯಬೇಕಾಗಿಹುದು.
ಇನ್ನು ಹಿರಿಯರು ನನಗೆ ಅಪ್ಪಣೆಯ ನೀಡುವಿರ?

ಮುತ್ತಿಕೆ.—ಬಿಜಮಾಡಿ ಪ್ರಭುಗಳು.

(ಪ್ರಭು ಕೈಮುಗಿದು ಹೊರಡುತ್ತಾನೆ. ಎಲ್ಲರೂ ಕೈಮುಗಿದು ನಿಲ್ಲುತ್ತಾರೆ.
ಕವಿಶೇಖರನಿಗೆ.) ಎಲ್ಲ ಹೊರಡುವುದಲ್ಲ?

ವಿಶೇಖರ.—ಆಸಿತೆ. ದಯಮಾಡಿರಿ. ನಮಸ್ಕಾರ ಸರ್ವರಿಗು.
ಮತ್ತೆ ಕಾಣುವ. (**ಹೊರಡುತ್ತಾನೆ. ಋತ್ವಿಕ, ಕಾಳಿದಾಸ, ಚಂದ್ರಾಂಶು ಕವಿ, ಎಲ್ಲರಿಗೂ ಕೈಮುಗಿದು ಹೊರಡುತ್ತಾರೆ.**)

ನಮೂಲ.—(**ಶರ್ಕರಕನಿಗೆ**) ಏನು ಶರ್ಕರಕ ಕವಿಗಳೆ?

ರ್ಕರಕ.—ಏನು ಹೇಳಿರಿ.

ನಮೂಲ.— ನಮ್ಮ ಪ್ರಭು, ಕಾಳಿದಾಸರನು
ಇಂತೆತ್ತಿ ತಲೆಮೇಲೆ ಕುಳ್ಳಿರಿಸಿಕೊಂಡರೇ,
ಇದು ಕಾಳಿದಾಸರಿಗೆ ಎನಿತು ಸತ್ಕಾರವೋ
ಉಳಿದ ನಮಗನಿತೇ ಅಸತ್ಕಾರವಾಗಿಹುದು.
ಇದು ನನ್ನ ಭಾವನೆ. ನಿಮ್ಮ ಮನಕೆಂತಿಹುದು?

ರ್ಕರಕ.—ನಿಮ್ಮ ಮನ, ಕಾಳಿದಾಸರು ಋತ್ವಿಕರ ಹೊರತು
ಉಳಿದ ನಮ್ಮೆಲ್ಲರದು ಮನವೆಂದು ನನ್ನೆಣಿಕೆ.

ನಮೂಲ.—ಈಗ ನನಗನಿತು ಬೇಸರ, ನಮ್ಮ ಪ್ರಭು ಇವರ
ಆಶ್ರಯವನುಳಿದು ನಾ ಬೇರೆಯಾಸ್ಥಾನವನು
ಸಾರಲೇ ಎನಿಸುತಿದೆ.

ರ್ಕರಕ.— ಆ ವಿಷಯದಲಿ ನೀವು
ಭಾಗ್ಯವಂತರು. ಆಶ್ರಯವ ಬಯಸಿ ಬಂದವರು
ಆಶ್ರಯವ ತೊರೆದು ನಡೆಯಲು ಬಹುದು. ನಾನಿಲ್ಲಿ
ಆಶ್ರಯದಿ ಹುಟ್ಟಿ ಅರಮನೆಯ ಎಂಜಲನುಂಡು
ಬೆಳೆದಿರುವ ಕವಿ. ನೆಲೆಯ ತೊರೆಯುವುದು ಸಲ್ಲದು.

ನಮೂಲ.—ಪ್ರಭು ಭಕ್ತಿ.

ರ್ಕರಕ.— ಭಕ್ತಿಯೋ ರಕ್ತಿಯೋ. ಬೇಸರನು
ಕಳೆದುಕೊಳ್ಳಲು ನಿಮಗೆ ತುಂಬ ಸುಲಭದ ದಾರಿ
ಇರುವಂತೆ ನನಗಿಲ್ಲ. ನಾನು ಬೇರೆ ಚಿಕಿತ್ಸೆ
ಏನಾದರೂ ಇಹುದೊ ಅದನು ಅರಸಲು ಬೇಕು.

ನಮೂಲ.—ತಾನೊಬ್ಬ ಕವಿಯೆಂದು ತಿಳಿದಿರುವ ಈ ಪ್ರಭು,
ವಿನಯದತಿರೇಕದಲಿ ತನ್ನ ತಾ ಕವಿಭೃತ್ಯ

ಎಂದುಕೊಳ್ಳುತ ತನ್ನ ಆಶ್ರಯದ ಕವಿ ಇವನ
ಸಾರ್ವಭೌಮನ ಮಾಡಿ ಹುಚ್ಚಾಡುತಿರುವರೇ.
ಇವರ ಈ ವ್ಯಾಧಿಗೊಂದು ಚಿಕಿತ್ಸೆ ಇರಬಹುದೆ ?

ಶರ್ಕರಕೆ.—ಬಹುದು ಕವಿಗಳೆ, ಬಹುದು. ವ್ಯಾಧಿ ಇದಕೆ ಚಿಕಿತ್ಸೆ
ವ್ಯಾಧಿಯಲೆ ಇದೆ. ಅದನು ಈ ಒಂದು ಗಳಿಗೆಯಲಿ
ನಾನೆ ಯೋಚಿಸಿ ಕಂಡುಕೊಂಡಿಹೆನು. ಪ್ರಭುವಿನದು
ನುಡಿಗಳಲಿ ಕಡು ವಿನಯ, ನಡತೆಯಲಿ ಅದೆ ಪೊಗರು.
ಗೋಷ್ಠಿ ನಡೆಯುವ ತೆರನೆ ಇದನು ತೋರುವುದಲ್ಲ ?
ಕವಿಭೃತ್ಯನೆಂದು ತನ್ನನು ಕರೆದುಕೊಂಬ ಪ್ರಭು,
ತಾನೊಬ್ಬ ಹಿರಿಯ ಕವಿ ಎಂದು ತಮ್ಮಲಿ ತಾವು
ದೃಢವಾಗಿ ನಂಬಿಹರು. ಕವಿ ಸಾರ್ವಭೌಮನೋ
ಇವರೆಂತು ಅಂತೆಯೇ ಮಾತಿನಲಿ ಬಹು ವಿನಯ,
ನಡತೆಯಲಿ ಬಹು ಗರ್ವ. ನಾಲ್ಕಾರು ಸಲ ಇವನ
ಮಾತನಾಡಿಸಿ ನೋಡಿಹೆನು ನಾನು. ಕಾವ್ಯವನು
ಕುರಿತ ತನ್ನರಿವಿಗೆಣೆ ಇಲ್ಲೆಂದು ಇವನರಿವು.
ಕವಿತೆಗಳ ಗುಣವನಳೆವಂದಿವನ ನೋಟವೋ
ಪ್ರಖರವೇ ಪ್ರಖರ, ತೀಕ್ಷ್ಣವೆ ತೀಕ್ಷ್ಣ. ಆದಿಕವಿ
ಒಂದೆ ಶ್ಲೋಕದ ಎರಡು ಪಾದವನು 'ಸಂಯುಗೇ'
ಎಂಬ ಪದವನು ಎರಡು ಸಲ ಬಳಸಿ ಮುಗಿಸಿಹರು,
ಹಿರಿಯ ಅಪರಾಧವೇನಲ್ಲವಾದರು ಇದು
ಚೆನ್ನಲ್ಲ, ಎಂದನಿವನೊಂದು ದಿನ. ಈ ಎರಡು
ಗರ್ವಗಳ ಹಿಡಿದು ಪ್ರಭುವಿನಕೆ ಕೋಪವ ತಂದು
ಕವಿಭೃತ್ಯ ಕವಿಸಾರ್ವಭೌಮನನು ತಾನಿತ್ತ
ಸಿಂಹವಿಷ್ಟರದಿಂದ ಸಿಡಿಸುವಂತೆಸಗುವೆನು.
ನಿಮ್ಮ ಬೇಸರವ ಕೆಲದಿನ ಹಿಡಿದು ನಿಲ್ಲಿಸಿರಿ.
ಎಲ್ಲ ಸರಿಹೋಗುವುದು.

ವನಮಾಲ.— ಸಂತೋಷ, ಕವಿಗಳೆ.
　　ಇರುತ ಇವನನು ಪೀಠದಿಂದ ಸಿಡಿಸುವ ವೇಳೆ
　　ನೀವೆ ಸಿಡಿವಂತೆ ಆದೀತು, ಎಚ್ಚರವಿರಲಿ.
ಶರ್ಕರಕ.—ಎಚ್ಚರದ ನುಡಿ ಇದರ ಸಲುವಾಗಿ ಬಂದನೆ.
　　ಸಮಯವನು ನೋಡಿ ನಾನಿಂಥ ಮಾತನು ಎತ್ತಿ
　　ಟಗರುಗಳ ಎದುರೆದುರು ನಿಲಿಸುವೆನೆ ಆ ವೇಳೆ
　　ನೀವು ಅನುಕೂಲದೊಂದೆರಡು ನುಡಿಯನು ನುಡಿದು
　　ಕಾಳಗವ ಪೋಷಿಸಿರಿ.
ವನಮಾಲ.— ಪೋಷಿಸುವ ನಡೆಯಿರಿ.

ಸ್ಥಾನ ೪

ಒಂದು ಗಳಿಗೆಯ ಮೇಲೆ. ಋತ್ವಿಕನ ಮನೆ. ಋತ್ವಿಕ, **ಕಾಳಿದಾಸ** ಬಾಗಿಲಿಗೆ ಬರುತ್ತಾರೆ. ಯಜಮಾನಿ ಒಳಗಿಂದ ಬರುತ್ತಾಳೆ.

ಋತ್ವಿಕ.—(ಆಕೆಗೆ) ಪ್ರಭು ಇಂದು ಕವಿಗೋಷ್ಠಿಯಲಿ ನಮ್ಮ ಕವಿಗಳಿಗೆ
　　ಕವಿಸಾರ್ವಭೌಮ ಎನ್ನುವ ಬಿರುದ ನೀಡಿದರು.
　　ಇದ ನಿಮಗೆ ತಿಳಿಸಲೆಂದಿವರು ಜೊತೆಗೈದಿಹರು.
ಯಜಮಾನಿ.—ಸಂತೋಷ, ಕವಿಗಳೆ.
ಕಾಳಿದಾಸ.— ತಮ್ಮ ಆಶೀರ್ವಾದ
　　ರಕ್ಷೆಯಾಗಿರೆ ನನ್ನ ಎಲ್ಲ ಸೌಭಾಗ್ಯವೂ
　　ಅರಸಿಕೊಂಡೈತಂದು ಸೇರುವುದು.
ಯಜಮಾನಿ.— ಮತ್ತಷ್ಟು
　　ಮತ್ತಷ್ಟು ಭಾಗ್ಯವನು ಮರಮರಳಿ ನೀಡೆಂದು
　　ನಾವು ದೇವರನು ಬೇಡುವೆವು.
　　　　　　(ಕಾಳಿದಾಸ ಕೈಮುಗಿಯುತ್ತಾನೆ)
ಋತ್ವಿಕ.— ಒಳಗಡೆ ಯಾರು ?
　　ವಿಷ್ಣುವೇ ?
ಯಜಮಾನಿ.— ಹೌದು ತಿಂಗಳ ದಿವಸ ಎಲ್ಲಿಗೋ

ಹೋಗಿಪ್ಪ, ಇದೊ ಇಂದೆ ಹಿಂದಿರುಗಿ ಬಂದೆ
ಎಂದು ಹೇಳಿದ. ಇನಿತು ಉಪಹಾರವನು ಕೊಟ್ಟೆ.

ಋತ್ವಿಕ.—ಒಳ್ಳಿತು. ವಿಷ್ಣು, ಸೌಖ್ಯವಾಗಿರುವೆಯಾ?

(ಎಂದು ಕೇಳುತ್ತ ಒಳಕ್ಕೆ ಹೋಗುವನು.)

ಯಜಮಾನಿ.—(ಕಾಳಿದಾಸನಿಗೆ)

ನೀವಿಲ್ಲಿ ಬಂದ ದಿನ ಗುರುಗಳೆಂತಿಹರೆಂದು
ಕೇಳಿದಿರಿ. ನಮಗೆ ಅದು ತಿಳಿಯದು, ನಮ್ಮೂರ
ಬಂಧು ಒಬ್ಬರು ಇಹರು, ಆಗಾಗ ಬರುವರು,
ಅವರ ಕೇಳಿದರೆ ತಿಳಿಯುವುದು, ಎಂದೆನು ನಾನು.
ಆ ಬಂಧು ಇವರೆ. ಉಪಹಾರವನು ಮುಗಿಸಿ ಇಕೊ
ಬರುತಿಹರು. ಅವರೊಡನೆ ಮಾತನಾಡಿರಿ. ವಿಷ್ಣು,
ನಾನು ಹೇಳಿದೆನಲ್ಲ, ನಮ್ಮ ಹಿರಿಯರ ಶಿಷ್ಯ,
ಹಿರಿಯ ಕವಿ ಬಂದಿಹರು ಎಂದು, ಇವರೇ ಅವರು.

(ವಿಷ್ಣು ಒಳಗಿಂದ ಬರುತ್ತಾನೆ. ಯಜಮಾನಿ ಮನೆಯೊಳಕ್ಕೆ ಹೋಗುತ್ತಾಳೆ.)

ಕಾಳಿದಾಸ.—ಗುರುಬಂಧುಗಳಿಗೆ ವಂದನೆ.

ವಿಷ್ಣು.— ನಮ್ಮ ಕವಿಗಳಿಗೆ
ವಂದನೆ. ಅತ್ತೆಮ್ಮ, ನೀವು ಬಂದಾದಿನವೆ
ರಾಮಗಿರಿ ಗುರುಮನೆಯ ಇವರ ಹಿರಿಯರು ಎಂತು
ಇಹರೆಂದು ಇವರ ಕೇಳಿದಿರಿ ಎಂದರು. ನೀವು
ಬಾಗಿಲಲಿ ಕಂಡುದೆ. ಅಕೋ ಅವರು ಬರುತಿಹರು,
ಅವರಿಗಾ ಸಂಗತಿಯು ತಿಳುಹು ಎಂದರು. ನಾನು
ಆಗಲೆಂದೊಪ್ಪಿದೆನು. ನಿಮ್ಮ ಗುರುಗಳ ನಾನು
ಕಂಡು ತಿಂಗಳ ದಿವಸ ಆಗಿಹುದು. ಆಗವರು
ಸೌಖ್ಯವಾಗಿದ್ದರು. ಸೌಖ್ಯವೆನೆ ಏನು ಅದು,
ದೇಹ ಎನಿತೋ ಅನಿತು. ಮನಸಿನಲಿ ಸುಖವಿಲ್ಲ.
ಅವರು ಪಾಲಿಸುತಿದ್ದ ರಾಮಗಿರಿಯುರಗುವರ

ಅವನ ಸಲುವಾಗವರು ತುಂಬ ಕೊರಗುತಲಿಹರು.
ಅವನ ಕತೆಯನು ಬಲ್ಲಿರಾ ?

ಕಾಳಿದಾಸ.— ಹೇಳಿ.

ವಿಷ್ಣು.— ಪ್ರಭು, ಅವನ
ತಂದೆ, ಕೆಲವರ್ಷಗಳ ಹಿಂದೆ ದೇವರ ಪಾದ
ಸೇರಿದರು. ಸಾವ ಹೊತ್ತಲಿ ಮಗನ, ಗುರು ಇವರ
ಕೈಗೆ ಒಪ್ಪಿಸಿ, ಇವನು ಪ್ರೌಢನಾಗುವವರೆಗೆ
ಇವನ ಹೊರೆವುದು ತಮ್ಮ ಹೊಣೆಯಾಗಿ ಇರಲೆಂದು
ಗುರುವ ಬೇಡಿದರು. ಇವರಾಗಲೆಂದೊಪ್ಪಿದರು.
ಪ್ರಭು ಪತ್ನಿ ಗುರು ತಮ್ಮ ತಂದೆ ಎಂದೆಣಿಸಿಹರು.
ಬೆಳೆದ ಕುವರನಿಗಿವರು ಮದುವೆಯನು ಮಾಡಿದರು.
ಭರತಪುರದರಮನೆಯ ಹಿರಿಯ ಸೋದರಿ ವಧು.
ಏನಾಯಿತೋ ಏನೊ, ಹಸೆನಿಂದ ಮರುದಿನವೆ
ಅರಗುವರ ಯಾರಿಗೂ ಏನನೂ ತಿಳಿಸದೆ
ಎತ್ತಲೋ ಹೋಗಿ ಕಣ್ಮರೆಯಾದ. ಮದುಮಗಳು
ಎರಡು ದಿನ ನೋಡಿ ತನ್ನರಸ ತನ್ನನು ತೊರೆದು
ಹೊರಟು ಹೋದನೆ ಎಂಬ ದುಃಖದಲಿ ಸೇಲೆಗೆ
ಕಿಚ್ಚು ತಾಗಿಸಿ ತನ್ನ ತಾ ಸುಟ್ಟುಕೊಂಡಳು.
ಏನಾಯಿತೋ ಏನೊ ಎಂದೆನೇ, ಮದುಮಗಳ
ತಂಗಿ, ಭಾವನ ಕುರಿತು, ಆಮೇಲೆ ಅಣ್ಣನಿಗೆ
ಈ ಮಾತ ಹೇಳಿದಳು. ಅಕ್ಕತಂಗಿಯರಿವರು
ಅವಳಿ ಜವಳಿ. ಒಬ್ಬರೊಬ್ಬರನು ಇವರಿನಿತು
ಹೋಲುವರು, ಒಮ್ಮೊಮ್ಮೆ ಮನೆ ಮಂದಿಯೇ ಇವರ
ಒಬ್ಬಳನು ಇನ್ನೊಬ್ಬಳೆಂದು ತಿಳಿದುದು ಉಂಟು.
ಭಾವ ತನ್ನನು ಒಮ್ಮೆ ಹೆಂಡಿರೆಂದೊಲವಿಂದ
ನುಡಿಸಿದನು, ತಪ್ಪು ತಿಳಿದಿಹನೆಂದು ತಿಳಿದಿವಳು,
ಚೆಲ್ಲಾಟದಲಿ ತಾನು ಹೆಂಡಿರೆಂದೇ ನಟಿಸಿ

ಕೊಂಕುನುಡಿ ನುಡಿದಳು, ಅದರಿಂದ ಭಾವನಿಗೆ
ಮನಸು ಕೆಟ್ಟಿತು, ಅಂತು ಮನಕೆಟ್ಟ ಅಕ್ಕನನು
ಅವನು ತೊರೆದನು, ಎಂದು ಇವಳೆಣಿಕೆ. ಅರಸನಿಗೆ
ಈ ಊಹೆ ಸರಿ ಎನಿಸಲಿಲ್ಲ. ಆದರೆ ತಂಗಿ
ಅಕ್ಕ ಸತ್ತಂತೆ ತಾನೂ ಸಾಯುವೆನು ಎಂದು
ಹಟ ಹಿಡಿದು ಹಟವ ಬಿಡಿಸುವುದು ದುಸ್ತರ ಆಯ್ತು.
ಕೊನೆಗೆ ಎಂತೋ ಅದನು ಬಿಡಿಸಿ ಇವಳನು ಅಣ್ಣ,
ಅನುಜಪುರದರಮನೆಯ ಕಿರಿಯ ಮಗನಿಗೆ ಕೊಟ್ಟು
ಮದುವೆ ಮಾಡಿದನು. ಇಲ್ಲಿಯ ದೊರೆಯ ಹಿರಿಮಗಳು
ಅನುಜಪುರದರಮನೆಯ ಹಿರಿಯ ಸೊಸೆಯಾಗಿಹಳು.
ಕಾರಣ ಅದೇನಿರಲಿ, ಕುವರ ಹೆಂಡಿರ ತೊರೆದು
ಎತ್ತಲೋ ಹೋದ ಅಪಘಾತದಲಿ ನೊಂದವರು
ತಾಯಿ, ಗುರು, ಮನೆತನದ ಪಾಡು ಇಂತಾಯಿತೇ
ಎಂದು ದುಃಖದೊಳಾಳಿದರು. ತಾಯಿ, ಅವರೀಗ
ಎರಡು ವಾರದ ಹಿಂದೆ ಕಣ್ಮುಚ್ಚಿಕೊಂಡರು
ಎಂದು ಕೇಳಿಹೆನು. ಇಷ್ಟೇ ಇವರ ಸಂಗತಿ.
ನೀವಿದನು ಕೇಳಿದ್ದಿರಲ್ಲ ?

ಕಾಳಿದಾಸ.— ಅರೆಕೊರೆ ಮಾತು
ಒಂದೆರಡ ಕೇಳಿದ್ದೆ. ಎಲ್ಲ ಕಥೆಯನು ಅಲ್ಲ.
ಗುರುಗಳಿಗೆ ಒಬ್ಬ ಹೆಣ್ಮಗಳು. ಆ ಮಗಳು ಸಹ
ಸೌಖ್ಯವಾಗಿಹರಲ್ಲ ?

ವಿಷ್ಣು.— ಸೌಖ್ಯವಾಗಿಹರು. ಈ
ದೊರೆ ನಿಮ್ಮನಾಸ್ಥಾನ ಕವಿಯೆಂದು ನೇಮಿಸಿ
ಬಹು ರೀತಿಯಲಿ ಗೌರವಿಸಿದರೆಂದರೆ ಮಾವ.

ಕಾಳಿದಾಸ.— ಅಹುದು. ಗೌರವಿಸಿದರು.

ವಿಷ್ಣು.— ಇದು ತಿಳಿದುದೇ ನಾನು,
ಹಿರಿಮಾವ ಗುರುಗಳಿಗೆ. ಕಿರಿಮಾವ ಇವರಿಗೆ,

ತುಂಬ ಪ್ರಿಯರಾದ ಮಿತ್ರರು ನಿಮಗೆ ಇದ ಕುರಿತು
ನನ್ನ ಮನವನು ತಿಳಿಸ ಬಯಸುವೆನು. ಕೇಳುವಿರ?

ಕಾಳಿದಾಸ.—ಕೇಳೆನೇ? ಶ್ರದ್ಧೆಯಿಂದಲೆ ಕೇಳುವೆನು, ಹೇಳಿ.

ವಿಷ್ಣು.—ಪ್ರಭು ಇವರು ನಿಮಗೆ ಈ ಆಸ್ಥಾನಕವಿ ಪದವಿ
ಆವಾಸ ಆಭರಣ ಬಿರುದುಗಳ ಕೊಡುವರೇ
ಇವನು ಪುಕ್ಕಸಟೆ ಕೊಡುತಿಹರೆಂದು ತಿಳಿಯದಿರಿ.
ಒಂದೊಂದು ಮರ್‍ಯಾದೆ ನೂರು ಸುಳ್ಳಿಗೆ ಎಂದು
ದೊರೆ ಕೊಟ್ಟ ಮುಂಗಡದ ಬೆಲೆ ಎಂದು ತಿಳಿಯಿರಿ.

ಕಾಳಿದಾಸ.—ಸುಳ್ಳಿಗೆ?

ವಿಷ್ಣು.— ಕವಿಯಾದವರು ನೀವು, ಬೇಕಾದ
ಸುಳ್ಳನಾಡಲು ಬಲ್ಲವರು ಎಂದು ದೊರೆಯರಿಪ್ರು.
ದೊರೆ ಇಂಥ ಅಂಥ ಸದ್ಗುಣಗಣವಿಭೂಷಿತರು,
ಭೂಮಂಡಲಾಧಿಪತಿ, ದೋರ್ದಂಡ ವಿಕ್ರಮರು,
ಎಂದು ನೀವೆಲ್ಲರೂ ತನ್ನ ಹೊಗಳುತಲಿರಲಿ,
ಎಂದು ಇವರಿಗೆ ಆಸೆ. ಇದನು ಮಾಡಿದಿರಿ ಸಮ.
ಮಾಡಲಿಲ್ಲವೆ ಸಂಬಳಕೆ ಸೊನ್ನೆ. ಜೊತೆಯಲೇ
ಆವಾಸದಿಂದ ಉಚ್ಚಾಟನೆ. ಬಿರುದುಗಳು,
ಬಾವಲಿಗಳನು ದೊರೆಗೆ ಹಿಂತಿರುಗಿಸಿರಬೇಕು.
ತಿಳಿಯಿತೇ?

ಮುಚ್ಚಿಕ.—(ಈ ಕೊನೆಯ ಮಾತನ್ನು ಕೇಳುತ್ತ ಬಂದು,)
ಏನಯ್ಯ, ಕವಿಗಳಿಗೆ ದೊರೆ ಮನಸು
ಇಂತೆಂದು ಹೇಳುತಿಹೆ?

ವಿಷ್ಣು.— ಇನ್ನೆರಡು ಮಾತು ಸಹ
ಹೇಳುವೆನು ಕೇಳಿ, ಮಾವಾ.

ಮುಚ್ಚಿಕ.— ಹೇಳು. ಕೇಳುವೆನು.

ವಿಷ್ಣು.—ದೊರೆ, ಬಳಿಗೆ ಬಂದ ಕವಿ ಎಂಬ ಎಲ್ಲಾ ಜನಕು
ಒಡನೆ ಆಶ್ರಯವ ನೀಡುವರೆ, ಇದು ಏತಕೆ?

ನೆರೆಯ ದೇಶಗಳ ದೊರೆ ಯಾರಿಗೂ ಇವರನು
ಹೊಗಳಿ ಶ್ಲೋಕವ ಬರೆವ ಜನ ದೊರೆಯಕೂಡದು.
ಇದು ಇವರ ಸಂಚು.

(ಮಾತೃಕ, ಕಾಳಿದಾಸ ಇಬ್ಬರೂ ನಗುತ್ತಾರೆ.)

ದೊರೆಗಳ ಬಳಿಯೆ ಸುಳಿಯುತ್ತ
ಇವರ ನೆರಳಲಿ ಬೆಳೆವ ನಿಮ್ಮಂಥವರ ಮನಸು
ಇವರ ನಡತೆಯು ಗುಟ್ಟ ತಿಳಿಯಲಾರದು. ಪ್ರಭು
ತಾವು ಸಹ ಕವಿಯಂತೆ. ಕವಿಗಳಿಗೆ ಸೇವಕ
ಎಂದು ಹೇಳುವರಂತೆ. ಬರಿಯ ಮಾತಿನ ವಿನಯ.
ಇವರ ಕವಿತೆಯ ಕೇಳಿ ಚೆನ್ನ ಇರುವೆಂದಿರಿ,
ಎಂತಹ ಗುಣಜ್ಞ ಎನ್ನುವರು ದೊರೆ ನಿಮ್ಮನು.
ಚೆನ್ನಿಲ್ಲ ಎಂದಿರೋ, ಸಿಡುಕು ಮುಖ, ಕೆಡಿಗಣ್ಣು.
ಇದನೆಲ್ಲ ತಿಳಿದು, ಚೆನ್ನನೆ ನಡೆದು, ಪಡೆದಿರುವ
ಆಶ್ರಯವನುಳಿಸಿಕೊಳ್ಳಿರಿ ಎಂದು ನಾ ನಿಮಗೆ
ಸೂಚನೆಯ ಮಾಡಿಹೆನು. ಏನೇನೊ ಹೇಳುವನು
ಎಂದು ಬೇಸರ ಬೇಡ. ಏನೆಂಬಿರಿ?

ಮಾತೃಕ.— ವಿಷ್ಣು,
ದೊರೆಯ ಮನವನು ಇನಿತು ತಿಳಿದು ಇನಿತನು ನಮಗೆ
ತಿಳಿಯ ಹೇಳುತಲಿಹೆಯೆ, ಪ್ರಭು ನಿನ್ನ ತಮ್ಮ ಬಳಿ
ಆಪ್ತಸಚಿವನ ಪದಕೆ ಎಂದು ನೇಮಿಸಿದರು,
ಇದು ನನಗೆ ತಿಳಿಯದಿದೆ.

ವಿಷ್ಣು.— ಆಪ್ತಸಚಿವನ ಪದಕೆ
ನೇಮಿಸಿದರೇ, ನಾನು ಇವನೆಲ್ಲ ತಿಳಿದರೂ
ಬಾಯ್ತೆರೆಯುತಿರಲಿಲ್ಲ. ದೊರೆಯೊಡನೆ ಕವಿ ಎಂದೊ,
ಗುರು ಎಂದೊ, ಸಚಿವ ಮಾತೃಕ ಎಂದೊ, ಏತರದೆ
ತೆರದ ಸಂಬಂಧ ನನಗಿಲ್ಲ. ಆದರಿಂದಲೇ

ಇದನೆಲ್ಲ ಹೇಳಿಹೆನು. ನಮ್ಮ ಹಿರಿಕವಿಗಳು
ಎಲ್ಲವನು ಕೇಳಿದಿರ ?

ಕಾಳಿದಾಸ.— ಕೇಳಿದೆನು, ವಿಷ್ಣುಗಳೆ.
ಅರ್ಧ ನಗೆ, ಅರ್ಧ ದಿಟ. ಲೋಕವನು ಬಲ್ಲವರು
ಮಾತ್ರ ಹೇಳಲು ಬರುವ ಹಲವು ವಿಷಯವ ನನ್ನ
ಹಿತಕಾಗಿ ತಿಳಿಸಿದಿರಿ. ಇದು ಹಿರಿಯ ಉಪಕಾರ.
ಇದಕಾಗಿ ತಮಗೆ ವಂದನೆ.

ವಿಷ್ಣು.— ನೋಡಿದಿರ, ಮಾವ,
ಲೋಕವನು ಬಲ್ಲ ಕವಿ, ಲೋಕವನು ಬಲ್ಲೊಬ್ಬ
ಜಾಣನಾಡಿದ ಮಾತ ಎಂತರಿತುಕೊಂಬರು ?
(ಕಾಳಿದಾಸನಿಗೆ) ಮಾವ ಬಲ್ಲರು ನನ್ನ ಹುಚ್ಚಾಟಗಳನೆಲ್ಲ.
ಇವ ನೋಡಿ ಕೋಪಗೊಂಬರು, ಇಲ್ಲ ನಗುವರು.
ನಾನು ಬರುವೆನು ಮಾವ. ಕವಿಗಳೆ, ನಮಸ್ಕಾರ.
ಅತ್ತೆ, ನಾ ಬರುವೆ. ಬಂದಾಗ ನನಗಾಗಿನಿಸು
ತಿನಿಸಿರಲಿ. ಅದಕೆಂದೆ ನಾನಿಲ್ಲಿ ಬರುವುದು.

(ಎಂದು ಹೊರಡುವನು.)

ಮುತ್ತಿಕೆ.—ಬಂದೆ ಕವಿಗಳೆ. **(ಎಂದು ಅವನೊಡನೆ ಹೊರಗೆ ಹೋಗುವನು.)**

ಕಾಳಿದಾಸ.— ಒಬ್ಬರೊಬ್ಬರನು ಹೋಲುವರು.
ಯಮಳ ಸೋದರಿಯರು. ನನಗೆ ತಿಳಿದಿರಲಿಲ್ಲ.
ತಂಗಿ ಒಬ್ಬಳು ಇಹಳು ಎನ್ನುವುದು ತಿಳಿದಿತ್ತು ;
ಹೋಲಿಕೆಯ ಮಾತು ತಿಳಿದಿರಲಿಲ್ಲ. ನನಗೆ ಇದ
ಯಾರೊಬ್ಬರೂ ತಿಳಿಸಲಿಲ್ಲವೇ. ಇದು ಎಂತು ?
ಎಲ್ಲವನು ವಿಧಿಸುವುದು ವಿಧಿ, ನಾವು ನರರಲ್ಲ.
ಏನಾಯಿತದು ಆಗಬೇಕಲ್ಲ. ಆಗುವುದು
ಎಂತು ? ಇಂತು. ಅಂತೆ ಇಂತೆಲ್ಲ ನಡೆಯಿತು.

ಅಂಕ ಐದು

ಸ್ಥಾನ ೧

ಉಜ್ಜಯಿನಿಯ ಸಮೀಪದಲ್ಲಿ ದಾರಿ. ಕಾಳಿದಾಸನ ಗುರು, ಗುರುವಿನ ಮಗಳು ಅಪರ್ಣಾ, ಕಾಳಿದಾಸನ ಪತ್ನಿ ಮಾಲತಿ ನಡೆಯುತ್ತಿದಾರೆ.

ಮಾಲತಿ.—ಗುರುದೇವ.

ಗುರು.— ಅಂಬಾ.

ಮಾಲತಿ.— ನಿಮ್ಮ ಈ ಉಜ್ಜಯಿನಿ
ಬಹುದೂರ.

ಅಪರ್ಣಾ.— ಉಜ್ಜಯಿನಿ ದೂರವಾದುದರಿಂದ
ಗುರುವಿನುಂಬಳಿಯಾಯ್ತೊ ?

ಮಾಲತಿ.— ಆಗಬಾರದೆ ಅಕ್ಕ ?
ಕಷ್ಟದಲಿ ಒಳ್ಳಿತನು ಕಾಣೆಂಬ ಹಿರಿಯರಿಗೆ
ದೂರದುಂಬಳಿಯೆ ಚಂದ.

ಗುರು.— ಅಂಬ, ಪಾರ್ವತಿ,
ನಿಮ್ಮ ಹಿರಿಯರು, ಅವರ ತಾತ ಮುತ್ತಾತದಿರು,
ಅಣ್ಣಯನ ಹಿರಿಯರು, ತಾತಮುತ್ತಾತದಿರು,
ನಮ್ಮ ಹಿರಿಯರನು ಸಲಹಿದರಹುದು. ನೀನಿಂದು
ಉಜ್ಜಯಿನಿಯನು ನನಗೆ ಉಂಬಳಿಯ ಮಾಡುವುದು
ಏನು ಸೋಜಿಗ, ಗೌರಿ ?

ಮಾಲತಿ.— ನಗೆಯ ನುಡಿ ಅಂತಿರಲಿ.
ಆಣ್ಮನನು ಕುರಿತು ಏನೇ ಸುದ್ದಿ ಬಂದಿಹುದೆ
ಎಂದು ಕೇಳಲು ನಾನು ನಿಮ್ಮೆಡೆಗೆ ಮರಮರಳಿ
ಮನೆ ಆಳ ಕಳುಹಿದೆನು. ಇನಿಸು ದಿನವೂ ಸುದ್ದಿ
ಏತರದು ಇಲ್ಲೆಂದವರು ಈಗ, ಸುದ್ದಿ ಇದೆ,
ಅವನು ನಗರದಲಿಹನು, ನಾನಲ್ಲಿ ಹೋಗುವೆನು,
ಮಗು ನೀನು ನನ್ನೊಡನೆ ಬಾ, ಎಂದು ಕರೆಕಳುಹಿ

ನೀವಿಂದು ನನಗೆ ಅಣ್ಣನ ತೋರಿಸಲು ಇಂತು,
ನನ್ನ ಜೊತೆಗಿರಲೆಂದು ಮಗಳನೂ ಕರೆತಂದು,
ತರುಣನಂದದಿ ದಾರಿ ನಡೆಯುತಿಹ ಉಪಕೃತಿಗೆ
ನಾನಾವ ಉಂಬಳಿಯ ಕೊಡಬಹುದು ?

ಗುರು.— ನಿನ್ನಾಣ್ಣ
ನಿನ್ನನೊಬ್ಬಳವಾಡಿ ನಡೆದಂತೆ ನನ್ನನೂ
ಒಬ್ಬೊಂಟಿಯಾಗಿರಲು ಬಿಟ್ಟು ನಡೆದನು ಮಗಳೆ.
ಅವನನರಸುವುದು ನಿನಗೆಂತಂತೆ ಈ ನನಗೆ
ಇಷ್ಟವಪ್ಪುದು. ಅವನ ಕಾಣದಿಹ ನೀನೆಂತು
ದುಃಖಿಸುವೆ ಅಂತೆ ಈ ನಾನೆಂಬ ಮುದಿಯುಸಿರು
ದುಃಖಿಸುತಲಿರುವುದು. ಮೇಲಾಗಿ ಈ ಪಯಣ
ನಿನಗೆ ನಿನ್ನಾಣ್ಣನನು ಎಂತಂತೆ ನನ್ನ ಈ
ಮಗಳಿಗವನಾಣ್ಣನನು ತಂದಿತ್ತು ಪೊರೆಯುವುದು.

ಮಾಲತಿ.—ಅಹುದು. ನಾ ಮರೆತಿದ್ದೆ. ಅಕ್ಕಯ್ಯನವರರಸ
ಉಜ್ಜಯಿನಿಯಲಿ ಇಹುದ ತಿಳಿಸಿದಿರಿ ಗುರು ನನಗೆ.
ಪತಿಯ ಸೇರಲಿ ಅಕ್ಕ. ಇರುತ ಋತುಸಂಹಾರ
ಎಂಬ ಈ ಕಾವ್ಯವನು ಬರೆದವನು ಅಣ್ಣನೇ
ಎಂದು ಹೇಳುವಿರಲ್ಲ. ಅದಗೆಯ್ದ ಕಬ್ಬಿಗನ
ಕಾಳಿದಾಸ ಕವೀಂದ್ರನೆಂದಿಹುದು ಆಸ್ಥಾನ.
ಉಜ್ಜಯನಿಯನು ಸೇರಿ ಕವಿಯ ನೋಡಿದ ವೇಳೆ
ಅಣ್ಣನಲ್ಲದೆ ಇರಲು ಗತಿಯೇನು ?

ಗುರು.— ಭಯಬೇಡ.
ಈ ಕೃತಿಯ ಗೆಯ್ದ ಕವಿ ನನ್ನ ಅಣ್ಣಯನೆ ಸರಿ.

ಮಾಲತಿ.—ಅಲ್ಲದಿರೆ ?

ಗುರು.— ಅಲ್ಲದಿರೆ ಈ ನಾನು ಗುರುವಲ್ಲ.
ನಮ್ಮ ಅಣ್ಣಯ ನನ್ನ ಕಣ್ಣೆದುರ ಸೂಸಿಯಲ್ಲ.

ಮಾಲತಿ.—ಈ ಹೆಸರೊ ?

ಅಪರ್ಣಾ.— ತಂದೆ ಅಂತೇ ಹೇಳಲಿಲ್ಲೇ, ತಂಗಿ ?
ನಾಡು ನಗರವ ತೊರೆದು ದೂರದೇಶವ ಸಾರಿ
ಮರೆಯ ಬಾಳನು ಬಾಳುತಿರುವ ನಮ್ಮಣ್ಣಯ್ಯ
ಹೆಸರ ಮರಸಿರಬೇಕು.

ಮಾಲತಿ.— ಅಂತೆ ಆಗಲಿ, ಅಕ್ಕ.
ಅಂತೆ ಆಗಲಿ. ಅಂತೆ ಆಯಿತೇ ಸಂತೋಷ.
ಅಲ್ಲದಿರೆ ಗತಿಯೇನು ?

ಗುರು.— ಅಳುವ ಕಂದನ ದನಿಯ
ತಾಯಿ ಅರಿಯಳೆ ? ಉಳಿದ ಮಂದಿ ಅಂತರಿವುದೇ ?
ನಾನರಿಯೆನೇ ನನ್ನ ಅಣ್ಣಯ್ಯನ ಕೊರಲನು ?
ಕೇಳು, ಗೌರಿ. ನಮ್ಮ ಅಣ್ಣಯ್ಯನ ಮನೆಯವರು
ನೆಲ ಹೊಲವನುಳ್ಳವರು ; ಕುರಿ ಗೋವುಗಳ ಮಂದೆ
ಬಹಳವನು ಉಳ್ಳವರು. ಎಷ್ಟೊ ಸಂಜೆಯ ವೇಳೆ
ನಾನು ಅಣ್ಣಯ್ಯ ಊರ ಮುಂದೆ ಕಟ್ಟೆಯಮೇಲೆ
ಜೊತೆಯಾಗಿ ಕುಳಿತು, ಊರಿನ ಮಂದೆ ಮಂದೆ ಕುರಿ,
ಮೇವು ಮುಗಿದಿರೆ, ಊರ ಸಾರಿ ಬರುತಿಹ ಅಂದವನು,
ನೋಡಿದುದು ಉಂಟು. ಕರೆಯುವ ತಾಯಿ, ಮೊರೆವ ಮರಿ,
ಮೊರೆದರಸುತಿಹ ತಾಯಿ ಕರೆದರಚುನೆಳೆಯು ಮರಿ,
ತಾಯಿ ಮರಿ ನೂರರಬ್ಬರದ ಕೋಲಾಹಲವ
ಕೇಳುವಾನಂದದಲಿ ಕಿವಿಯು ತುಂಬಿದುದುಂಟು.
ಯಾವ ಮಾತೆಯ ಕರೆಗೆ ಯಾವುದುತ್ತರ ಎಂದು,
ಯಾವ ಕಂದನ ಕರೆಗೆ ಈ ಕೂಗ ಸಂತೆಯಲಿ
ಮಾರ್ದನಿ ಅದಾವುದೆಂದರಿಯಬಹುದೇ ನಾವು,
ಗೌರಿ ? ಇಂತಾದರೆಯು ಅರ್ಧಘಳಿಗೆಯೊಳಗೆ,
ಆ ಎಲ್ಲ ತಾಯಿ, ಆ ಎಲ್ಲ ಮರಿ, ತಂತಮ್ಮ
ತಾಯಿ ಯಾರೆಂದು ಮರಿ ಯಾರೆಂದು ಗುರಿಯರಿತು
ಸಾರಿಹವು ಒಂದು ತನ್ನೊಂದ. ಈ ಪರಿಯೆಂತು ?

ಮರಿಯ ದನಿಯನು ತಾಯಿ, ತಾಯ ದನಿಯನು ಹಸುಳೆ,
ಯುವುವು, ಪಾರ್ವತಿ. ನಮ್ಮ ಅಣ್ಣಯನ ದನಿ
ನನಗಂತೆ ತಿಳಿಯುವುದು. ಈ ಕಾಳಿದಾಸ ಕವಿ
ನನ್ನ ಶಿಷ್ಯನೆ, ನಿನ್ನ ಅಣ್ಣನೇ, ಸರಿಯೆಂದು
ಶಪಥಮಾಡುವೆ ನಾನು.

ಾಲತಿ.— ಅಂತೆ ಆಗಲಿ, ಗುರುವೆ.
ಇದರ ಮೇಲೆನಗೆ ಇನ್ನೊಂದು ಭಯ ತೋರುತಿದೆ.

ಶರ್ಾ.—ಇನ್ನೇನು ಭಯ ?

ಾಲತಿ.— ಅಣ್ಣ ಉಜ್ಜಯಿನಿಯಲಿ ಇರುತ,
ನಾವು ಬಳಿಸಾರೆ ಮತ್ತೊಮ್ಮೆ ದೇಶಾಂತರಕೆ
ನಡೆದನಾದರೆ ಏನ ಮಾಡುವುದು ?

ಶರ್ಾ.— ನೀನೇಕೆ
ಇಂತು ಶಂಕೆಗೆ ಸಿಲುಕಿ ತೊಳಲುವೆ ? ತನ್ನ ಜನ
ಬಳಿಸಾರಲವನು ಓಡುವನೆ ?

ಾಲತಿ.— ಓಡದೆ ಇಹರೆ
ಅದು ನನಗೆ ಸಂತೋಷ. ನಿಮ್ಮಿರ್ವರನು ನೋಡಿ
ಓಡುವನು ಎನಲಿಲ್ಲ ನಾನು.

ಶರ್ಾ.— ನೀ ಬಳಿ ಸಾರೆ
ಓಡುವನು ಎಂಬೆಯಾ ?

ಾಲತಿ.— ಅದೆ ನನ್ನ ಭಯ.

ರು.— ಗೌರಿ,
ಅವನು ನಿನ್ನನು ಬಿಟ್ಟು ಹೊರಟು ಹೋದನು ಏಕೆ
ಎಂಬುದನು ಅವನಿಂದ ಮೊದಲಾಗಿ ತಿಳಿದು, ಆ
ಬಳಿಕ ನಿನ್ನೊಡನೆ ಬಾಳಲು ಅವನು ಒಪ್ಪುವನೆ
ಇದ ಕೇಳಬೇಕು. ಒಪ್ಪಿದೆ. ನೀನು ಸುಮ್ಮನಿರು ;
ಅದ ನಾನು ಕೇಳಿ ತಿಳಿಯುವೆನು.

ಾಲತಿ.— ಅಂತಿರೆ, ಗುರುವೆ,

ನೀವು ತಂಗುವ ನಿಮ್ಮ ಬಂಧುಗಳ ಮನೆಯಲ್ಲಿ
ನಾನು ಸಹ ತಂಗುವುದು ಸರಿಯಹುದೆ? ನಾ ಬೇರೆ
ಒಂದು ತಂಗಿನಲಿ ನಿಲಬೇಕು.

ಗುರು.— ನಮ್ಮವರಲ್ಲಿ
ಅರಮನೆಯ ಋತ್ವಿಕರು. ಅವರ ಮನೆ ತಕ್ಕನಿತು
ಹಿರಿಯದಿರಬೇಕು. ಹಿಂಗಡೆಯೊಂದು ಅರೆಯಲಿ
ನೀನು ಮರೆಯಾಗಿ ಇರು. ನೀನು ಬಂದಿಹೆಯೆಂದು
ಎಂತು ತಿಳಿಯುವುದು ಅವನಿಗೆ?

ಮಾಲತಿ.— ಇರುತ, ಗುರುಗಳೇ,
ಅವರಲ್ಲಿ ಬಹವೇಳೆ ಜಹರೆಂದು ತಿಳಿಯುವೆ
ನಾನು ನಿಮ್ಮೊಡನಿದ್ದು ಅವರು ಕಂಡರು ಎನ್ನಿ,
ಕೆಲಸವೇ ಕೆಟ್ಟಿತು. ಅದರಿಂದ ನಾನಿಂತು
ಯೋಚಿಸಿರುವೆನು.

ಗುರು.— ಹೇಳು, ತಾಯಿ.

ಮಾಲತಿ.— ದೊರೆಗಳ ಮನೆಯ
ಕುಣಿವ ಹಾಡುವ ಪಡೆಯ ಒಡತಿ, ಆ ದಿನ ನನಗೆ
ಎಡೆಯ ನೀಡಿದಳೆ, ಅವಳನು ಕಂಡು, ನಾನವಳ
ಮನೆಯ ನೆರೆಯಲಿ ಒಂದು ತಂಗ ಕೊಂಬುದು ಒಳಿತು.

ಗುರು.—ಅಂತೆ ಮಾಡವ್ವ, ಗೌರಿ. ನಿನ್ನ ಜಾಣೆಗೆ
ತಕ್ಕ ಯೋಚನೆ.

ಮಾಲತಿ.— ಅಲ್ಲಿ ನಾನಿರುತ ಈ ಒಡತಿ,
ಬಹು ಚೆನ್ನ ಹಾಡುವಳು ಒಬ್ಬಾಕೆ ಹೊಸದಾಗಿ
ಬಂದಿಹಳು, ಹಾಡ ಕೇಳಿರಿ, ಎಂದು ಅಣ್ಣನನು
ಕರೆದು ತರಲಾಗುವುದು. ಅಣ್ಣ ಕಂಠವ ನನ್ನ
ಕಂಠವೆಂದೊಡನೆಯೇ ತಿಳಿಯುವರು. ತಿಳಿದವರು
ನನ್ನ ನೋಡುವ ಎಂದು ಬಯಸುವರು. ಅಂತಲ್ಲ,
ಕೇಳಿದೊಡನೆಯೆ ಬೇಸರಪಲೆದ್ದು ನಡೆಯುವರು.

ಇದರಿಂದ ತಿಳಿಯುವುದು ನನ್ನ ಕುರಿತವರ ಮನ
ಎಂತಿಹುದ್ ಎನ್ನುವುದು.

ರು.— ತಿಳಿಯುವುದು, ಪಾರ್ವತಿ ;
ತಿಳಿಯುವುದು. ಕಂಠ ನಿನ್ನದು ಎಂದು ತಿಳಿದವನು
ಮತ್ತೆ ಊರನು ಬಿಟ್ಟು ಓಡಿಹೋದನು ಎನ್ನು.
ಮುಂದೆ ಗತಿಯೇನು ?

ಾಲತಿ.— ನನ್ನನು ಕುರಿತ ಬೇಸರಕೆ
ನಿಮ್ಮೆಲ್ಲರನು ಒಮ್ಮೆ ಬಿಟ್ಟಂತೆ ಮತ್ತೊಮ್ಮೆ
ತೊರೆದು ಹೋದಾನೆಂದು ನಿಮ್ಮ ಭಯ ಅಲ್ಲವೆ ?

ರು.—ನನ್ನನೀಕ್ಷಣ ಕಾಡುತಿಹುದು ನನ್ನಣ್ಣಯ್ಯ
ನನ್ನ ಬಿಟ್ಟಾನೆಂಬ ಭಯ ಅಲ್ಲ. ಈ ಹುಡುಗ
ಮತ್ತೊಮ್ಮೆ ನಿನ್ನನೊಲ್ಲದೆ ಹೊರಟುಬಿಟ್ಟನೆನೆ
ಅವನ ಬಾಳೂ ಬರಡು, ನಿನ್ನ ಬಾಳೂ ಬರಡು.
ಹಿರಿಯರೆನ್ನಿಸಿಕೊಂಡು ನಾವು ಎಚ್ಚರತಪ್ಪಿ
ಮದುವೆ ಇದ ಮಾಡಿದುದು ಎಳೆಯ ಬಾಳುವೆ ಎರಡ
ಬರಡು ಮಾಡಿತೆ ಎಂದು ನನಗಿನ್ನು ಉಳಿದಿರುವ
ನಾಲ್ಕುದಿನ ಶೋಕಿಸುತ ಇರಬೇಕು. ಇದು ನನ್ನ
ಮನವ ಕಾಡುವ ಚಿಂತೆ.

ಾಲತಿ.— ಚಿಂತೆಯನು ಬಿಡಿ, ಅಜ್ಜ.
ನನ್ನ ಮನದಲು ಅಣ್ಣ ಏನಗೆಯ್ವರೊ ಎಂಬ
ಚಿಂತೆ ಇದೆ. ಇರುತ ಜೊತೆಗೇ ಒಂದು ಪಕ್ಕದಲಿ
ಈ ಬಾರಿ ಅವರು ನನ್ನನು ಒಪ್ಪಿಕೊಂಬರು
ಎಂಬ ನೆಮ್ಮದಿಯು ಇದೆ. ಅವರೆನ್ನನೊಪ್ಪುವರು.
ಎಲ್ಲ ಸರಿಹೋಗುವುದು.

ರು.— ಅಂತೆ ಆಗಲಿ ತಾಯಿ,
ಅಂತೆ ಆಗಲಿ. ಅಂತೆ ಆಗಲಿ. ಆಗಲಿ.

ಸ್ಥಾನ ೨

ಉಜ್ಜಯಿನಿ. ಋತ್ವಿಕನ ಮನೆ. ಬಾಗಿಲಲ್ಲಿ ವಿಷ್ಣು ನಿಂತಿದ್ದಾನೆ. ಗುರು ಅಪರ್ಣಾ ಬರುತ್ತಾರೆ.

ಅಪರ್ಣಾ.—ವಿಷ್ಣು !

ವಿಷ್ಣು.— ಅಪರ್ಣಾ !

ಗುರು.— ಯಾರೆ ತಾಯಿ ಅದು ?

ವಿಷ್ಣುವಿನ ಕಂಠವೇ.

ವಿಷ್ಣು.— ಹೌದಪ್ಪ, ನಿಮ್ಮಳಿಯ.

ಗುರು.—ಚಿಕ್ಕಮಾವನ ಮನೆಗೆ ಬಂದಿದ್ದೆಯಾ ವಿಷ್ಣು ?
ಸೌಖ್ಯವಾಗಿರುವೆಯಾ ?

ವಿಷ್ಣು.— ಸೌಖ್ಯವಿರುವೆನು ಮಾವ.
ಅಡಿಗೆರಗುವೆನು. ಅಭಿವಾದಯೇ....

ಗುರು.—ವತ್ಸ, ಚಿರಂಜೀವ. ಪೂರ್ಣ ಸಾವಿರಕಾಲ
ಸೌಖ್ಯದಲಿ ಬಾಳಪ್ಪ. ತಮ್ಮ, ಮನೆಯಲ್ಲಿಲ್ಲ ?

ವಿಷ್ಣು.—ಇಲ್ಲ, ಮಾವ.

ಯಜಮಾನಿ.—(ಒಳಗಿಂದ ಬರುವಳು)
ಯಾರು, ವಿಷ್ಣು, ಬಂದಿರುವುದು ?

ವಿಷ್ಣು.—ನಿಮ್ಮ ಭಾವ ಅತ್ತೆ. ರಾಮಗಿರಿ ಗುರುಮನೆಯ
ಹಿರಿಯರು. ಇವಳವರ ಮಗಳು, ಅಪರ್ಣಾ.
ನನ್ನ ಮಡದಿ. ನನ್ನ ಮನೆಯ ಬೆಳಗಿದ ಹೆಣ್ಣು.

ಅಪರ್ಣಾ.—ಮನೆ ಇಲ್ಲ. ಬೆಳಕಿಲ್ಲ. ಹೆಣ್ಣು ಹುಸಿ.

ವಿಷ್ಣು.— ಅಲ್ಲ ?

ಯಜಮಾನಿ.—ಏನಮ್ಮ ನೀನು ಹೇಳುವ ಮಾತು ? ಭಾವಾ,
ಅಡಿಗೆರಗುವೆನು. ಸೊಸೆಯು ಹರಸಿರಿ.

ಗುರು.— ತಾಯಿ,
ಪೂರ್ಣ ಸಾವಿರಕಾಲ ಮುತ್ತೈದೆಯಾಗಿರು.

ಪೂರ್ಣ ಸಾವಿರಕಾಲ ಬಂಧುಗಳ ನೋಡಿಕೋ.
ತಮ್ಮ ಅರಮನೆಗೆ ಹೋಗಿಹನೆ ?

ಯಜಮಾನಿ.— ಹೌದು, ಭಾವ.
ಒಳಗೆ ಬನ್ನಿ. ದಾರಿ ನಡೆದು ದಣಿದಿರುವಿರಿ.
ಎಲ್ಲ ಮಾತನು ಬಾಗಿಲಲಿ ಆಡುವುದು ಬೇಡ.

(ಎಂದು ಒಳಕ್ಕೆ ಹೋಗುವಳು. ಎಲ್ಲರೂ ಮನೆಯೊಳಕ್ಕೆ ನಡೆಯುವರು.)

ಸ್ಥಾನ ೩

ಅದೇ ಮನೆ. ಒಳಗೆ. ಸ್ವಲ್ಪ ಹೊತ್ತಿನ ಮೇಲೆ.

ಯಜಮಾನಿ — ದಣಿವು ಹರಿಯಿತೆ, ಭಾವ ?

ಗುರು.— ಹರಿಯಿತಮ್ಮ. **ಈಗ**
ಏನೇನ ಕೇಳುವೆಯೊ, ಏನೇನ ಹೇಳುವೆಯೊ,
ಕೇಳು, ಹೇಳು.

ಯಜಮಾನಿ.— ನಾನು ಮೊದಲಿನಲಿ ಹೇಳುವುದು,
ನಿಮ್ಮಳಿಯು ನಮ್ಮ ಈ ವಿಷ್ಣು, ವರ್ಷದ ದಿವಸ
ಈ ಮನೆಗೆ ಬಂದು ಹೋಗುತ, ತಾನು ಮನೆಗಳಿಯ,
ನನ್ನ ಮಗುವಿನ ಗಂಡ, ಎಂಬುದನು ತಿಳಿಸದೆಯೆ
ದೂರದೇನೋ ನಂಟು ಎಂದು ಬೆಳ್ಳಿಸಿ ನುಡಿದು
ಏಮಾರಿಸಿರುವನೆ ! ಇದು ಸರಿಯೆ ?

ವಿಷ್ಣು.— ಅತ್ತೆ,
ನಾ ನಿಮ್ಮ ಮನೆಯಳಿಯ ಎಂದು ಹೇಳಿದ್ದೆನೇ,
ನೀವು ನನ್ನನು ಊಟ ಉಪಚಾರಕಿಲ್ಲಿಯೇ
ನಿಲ್ಲೆಂದು ಒತ್ತಾಯ ಮಾಡುತಿದ್ದಿರಿ. ನಾನು
ರಾತ್ರಿ ಎಷ್ಟೋ ಹೊತ್ತು ಕಳೆದು ಮನೆ ಸೇರುವನು.
ಮಧ್ಯ ನಿಶಿಯಲಿ ಬಂದು ನಿಮ್ಮ ನಿದ್ದೆಯ ಕೆಡಿಸಿ,
ಒಂದೆರಡು ದಿನ ಅಲ್ಲ, ವರ್ಷದುದ್ದಕು ನಿಮಗೆ

ತೊಂದರೆಯ ಕೊಡುವುದೇ ? ಅದರಿಂದ ನಾ ನಿಮಗೆ
ಸಂಬಂಧವನು ಹೇಳಲಿಲ್ಲ.

ಯಜಮಾನಿ.— ಆದರು, ವಿಷ್ಣು
ಮನೆ ಅಳಿಯ ಎಂಬುದನು ತಿಳಿಸಿ, ತೊಂದರೆ ಕೊಡಲು
ಮನವಿಲ್ಲ ಎಂದು ತಿಳಿಸಿದ್ದರಾಗದೆ ಇತ್ತೆ ?
ಏನೊ ದೂರದ ನಂಟು ಎಂದು ನಾ ನಿನ್ನನು
ಏನೋ ಅಸಡ್ಡೆಯಲಿ ನಡೆಸಿರಲು ಚೆನ್ನವೇ ?

ವಿಷ್ಣು.—ಏನೇ ಅಸಡ್ಡೆಯಲಿ ಎಂದ ಆಗಲಿ ನೀವು
ನನ್ನ ನಡೆಸಿದುದಿಲ್ಲ. ನಿಮ್ಮ ಮನೆ ಮಗನೆಂಬ
ತುಂಬು ಅಕ್ಕರೆಯಿಂದ ಕಂಡಿಹಿರಿ.

ಯಜಮಾನಿ.— ವಿಷ್ಣು,
ಈ ಮಾತು ಎಲ್ಲ ಸರಿ. ಇರುತ ಬಾಂಧವ್ಯವನು
ತಿಳಿಸದಿರುವುದು ತಕ್ಕುದಲ್ಲ. ಅಪರ್ಣಾ,
ನೀನು ಸಹ ಹೇಳು ಗಂಡನಿಗೆ. ಅತ್ತೆಯ ನೀನು
ಇಂತು ಬೆಳ್ಳಿಸಿದುದು ಸರಿತೋರಲಿಲ್ಲೆನ್ನು.

ಅಪರ್ಣಾ.—ನಿಮ್ಮಳಿಯ ನಿಮಗೆ ತಾ ಅಳಿಯ ಎಂಬುದ ಎಂತು
ತಿಳಿಸರೋ ಅಂತೆ ನನ್ನನು ತಮ್ಮ ಮನೆಯಾಕೆ
ಎನಲು ಸಹ ಹಿಂದೇಟು ಹೊಡೆದಿಹರು, ಅತ್ತೆ.
ಎಂಟು ವರ್ಷದಲಿವರು ನಮ್ಮ ನೋಡಿರುವುದು
ಐದು ಸಲ. ಮೂರು ವರುಷದ ದಿವಸ ಊರತ್ತ
ಮುಖ ಮಾಡಲಿಲ್ಲ. ಆಮೇಲೆ ವರುಷಕೆ ಒಮ್ಮೆ.

ವಿಷ್ಣು.—ಅತ್ತೆ. ನಮಗೆಲ್ಲರಿಗು ಹಿರಿಯರಹ ನಿಮಗೆನ್ನ
ಬಯ್ಯಬೇಕೆನಿಸಿತೇ ನೀವೆ ಬಯ್ಯಿರಿ. ನಿಮ್ಮ
ಮಗಳಿವಳ ಕೈಗೆನ್ನ ಕೊಡಬೇಡಿ.

ಯಜಮಾನಿ.— ಅಣ್ಣಯ್ಯ,
ನಿನ್ನ ಹೆಂಡತಿ ನಿನ್ನ ಬಯ್ದಿರಲು ಆ ಬಳಿಕ
ನೀವು ಸುಲಭದಲಿ ಸಮ್ಮತಿ ಮಾಡಿಕೊಳ್ಳುವಿರಿ.

ಅತ್ತೆ ನಾ ಬಯ್ದು ಅಂತೆಸೆಗಬಹುದೇ ಅಪ್ಪ ?
ಅತ್ತೆ ಬಯ್ಯುವರೆಂದು ಕೋಪದಲಿ ನೀ ನನಗೆ
ಬೆನ್ನ ತೋರಿಸಿ ನಡೆವೆ ಎನ್ನುವ. ನಾ ನಿನ್ನ
ಅಟ್ಟೆ ಬರಲಾಗುವುದೆ ? (ಋತ್ವಿಕ ಬರುತ್ತಾನೆ)
ಋತ್ವಿಕರು ಬಂದರು.
ಭಾವನವರಿಗೆ ಇವರು ಬಂದರೆಂಬುದ ತಿಳಿಸು,
ವಿಷ್ಣು.

ವಿಷ್ಣು.— ತಿಳಿಸುವೆನತ್ತೆ. (ಋತ್ವಿಕನಿಗೆ) ಮಾವಾ, ಮಾವಾ,
ರಾಮಗಿರಿಯಿಂದ ನಿಮ್ಮಣ್ಣದಿರು ಗುರುಗಳು
ಬಂದಿಹರು. ಮಗಳೊಡನೆ. ಇವಳೇ ಅ....

ಯಜಮಾನಿ.— ತಡೆ ವಿಷ್ಣು.
(ಋತ್ವಿಕನಿಗೆ) ಈ ವಿಷ್ಣು ತಾನು ದೂರದ ಒಬ್ಬ ನಂಟೆಂದು
ಹೇಳಿಕೊಂಡಿದುವರೆಗೆ ನಡೆದನೇ, ಇವ ನಿಮ್ಮ
ಅಣ್ಣದಿರ ಸದ್ಯ ಸೋದರ ಅಳಿಯ ; ಅವರ ಮಗು,
ಭಾವ ಇವಳನು ಅಪರ್ಣಾ ಎಂದು ಕರೆದಿಹರು,
ಇವಳ ಕೈ ಹಿಡಿದವನು. ದಾರಿ ನಡೆದಾಯಾಸ ;
ಭಾವ ನಿದ್ರೆಯಲಿಹರು.

(ಕಾಳಿದಾಸ ಬರುತ್ತಾನೆ)

ಕವಿಗಳೂ ಬಂದರು.

ಅಪರ್ಣಾ.—ಅಣ್ಣಯ್ಯ !

ಕಾಳಿದಾಸ.— ಅಕ್ಕಯ್ಯ, ಏನು ನೀವಿಲ್ಲಿಹಿರಿ ?
ಯಾವಾಗ ಬಂದಿರಿ ? ಅಪ್ಪ ಎಂತಿರುವರು ?

ಅಪರ್ಣಾ.—ಸೌಖ್ಯವಾಗಿರುವರು. ಅವರು ಸಹ ಬಂದಿಹರು.
ಅಕೊ ಅಲ್ಲಿ ನಿದ್ರಿಸುತ. ಗಳಿಗೆಯಾಗಿರಬಹುದು,
ನಾವು ಇಲ್ಲಿಗೆ ಬಂದು.

ಕಾಳಿದಾಸ.— ಓ ನನ್ನ ಗುರುವೇ,

(ಎಂದು ಹತ್ತಿರಕ್ಕೆ ಹೋಗುತ್ತಾನೆ.)

ಗುರು.—(ಕಣ್ತೆರೆದು ಇವನನ್ನು ನೋಡಿ)
ಯಾರು ಅಣ್ಣಯ್ಯನೇ? ಇದು ಏನು ಕನಸೇ,
ದಿಟವೆ?

ಕಾಳಿದಾಸ.— ದಿಟವೇ ಗುರುವೆ. ನಾ ನಿಮ್ಮ ಅಣ್ಣಯ್ಯ.
ಅಡಿಗೆರಗುವೆನು.

ಗುರು.— ಎರಗು; ವತ್ಸ, ಚಿರಂಜೀವ.
ಸುಖವಾಗಿ ಬಾಳು. ಮಗಳೇ, ಅಪರ್ಣಾ,
ನನ್ನ ನುಡಿ ದಿಟ ಅಲ್ಲ? ಅಣ್ಣಯ್ಯ, ಬಾ ಇಲ್ಲಿ.
ನಿನ್ನಕ್ಕ ಬಂದಿಹಳು, ನೋಡಿದೆಯ?

ಕಾಳಿದಾಸ.— ನೋಡಿದೆ.

ಗುರು.—ಕಾಕತಾಳ ನ್ಯಾಯ. ಅವಳ ಗಂಡನು ಕೂಡ
ಇಂದಿಲ್ಲಿ ಬಂದಿಹನು. ಅಕೊ, ಅವಳ ಜೊತೆ, ಅಲ್ಲಿ
ನಿಂತಿಹನು.

ಕಾಳಿದಾಸ.— ಯಾರೆನ್ನುವಿರಿ? ವಿಷ್ಣುಶರ್ಮರೇ?

ಗುರು.—ವಿಷ್ಣುವೇ. ಮನೆಯಳಿಯು, ನಮ್ಮಪರ್ಣಳ ಗಂಡ.

ಕಾಳಿದಾಸ.—(ಅವನಿಗೆ) ಕೈಮುಗಿವೆ, ವಿಷ್ಣುಶರ್ಮರೆ. ನೀವು ಮಾನೆಯಲಿ
ಭಾವನಾಗಿರುತ ಅದ ಬಿಟ್ಟುಕೊಡದಂತಿಂತು
ಬೆಳ್ಳಿಸಿದಿರಲ್ಲ. ಇದು ತಕ್ಕುದೇ?

ವಿಷ್ಣು.— ನಾ ನಿಮ್ಮ
ಬೆಳ್ಳಿಸಿವೆ. ತಪ್ಪಾಯ್ತು, ಮನ್ನಿಸಿರಿ. ಅದು ಇರುತ,
ನೀವು ನಮ್ಮನು ಬೆಳ್ಳಿಸದೆ ನೇರ ನಡೆದಿರಾ?
ನೀವು ಗುರುಗಳ ಈಗ ಮಾತಾಡಿಸಿದ ಹೊತ್ತು,
ನಿಮ್ಮಕ್ಕ ನನಗೆ ಈ ಅಣ್ಣಯ್ಯ ಯಾರೆಂದು
ಏನೆಂದು ಹೇಳಿದರು. ಅಯ್ಯ, ಕವಿಗಳೆ, ನಾನು
ಭರತಪುರದರಮನೆಯ ಕತೆ ಹೇಳಿದೆನೆ, ಆಗ
ನೀವು ಯಾರದೊ ಕಥೆಯ ಕೇಳುತಿರುವರ ರೀತಿ

ರೆಪ್ಪೆಯನು ಅಡಿಸದೆ ನೊಗವಾಡ ಮುಖವಾಡಿ
ಕುಳಿತಿದ್ದಿರೇ. ಅದು ಸತ್ಯ ಸಚ್ಚರಿತವೆ ?

ಗುರು.—(**ಅಳಿಯನಿಗೆ**) ವಿಷ್ಣು, ನೀ ಅಣ್ಣಯ್ಯನಿಗೆ ಹೇಳುತಿಹುದೇನು ?
ಅದನು ಆಮೇಲೆ ಹೇಳುವೆಯಂತೆ. ಅವನನು
ಇಲ್ಲಿ ಕಳುಹಿಸು. ನಾನು ಅವನೊಡನೆ ಆಡುವುದು
ಎರಡು ಮಾತಿದೆ.

ವಿಷ್ಣು.— ಅವರೆ ಇಲ್ಲಿ ಬಂದರು, ಮಾವ.
(**ಕಾಳಿದಾಸನಿಗೆ**) ಹೋಗಿ ಅವರೊಡನೆ ಮಾತಾಡಿ ಬನ್ನಿರಿ. ಬಳಿಕ
ನಾವು ಒಬ್ಬೊಬ್ಬರನು ಬಾಯ್ಗೆ ಬಂದಂತೆಲ್ಲ
ಬಯ್ದು ನಾಲಿಗೆಯ ಚಪಲವ ಹರಿಸಿಕೊಳ್ಳುವ.

ಕಾಳಿದಾಸ.—(**ನಗುತ**) ಅಂತೆ ಮಾಡುವ. ಈಗ ನನಗೆ ಇದು ಸೋಜಿಗ.
ಇಷ್ಟು ಹತ್ತಿರದವರು, ಇಷ್ಟು ಬೇಕಾದವರು,
ನಾ ನಿಮ್ಮ, ನೀವೆನ್ನ, ಈ ಮುನ್ನ ಕಂಡಿಲ್ಲ.
ನಿಮ್ಮ ಹೆಸರೂ ನನಗೆ ತಿಳಿದಿಲ್ಲ.

ವಿಷ್ಣು.— ಅದು ಅಂಥ
ಸೋಜಿಗವೆ ? ಬೆಳೆವಂದು ನಾ ನಿಮ್ಮ ಊರತ್ತ
ಬರಲಿಲ್ಲ. ಎಂದಿರಲಿ, ಒಂದೆ ಎಡೆ ಇಬ್ಬರೂ
ಸೇರಿಲ್ಲ. ಇಂದು ಸೇರಿಹೆವು. ಇದು ಸಂತಸ.

ಕಾಳಿದಾಸ.—ದಿಟವೆ ಸಂತಸ. ಬಂದೆ. (**ಎಂದು ಗುರುವಿನ
ಬಳಿಗೆ ಹೋಗುತ್ತಾನೆ.**)

ಗುರು.— ಅಣ್ಣಯ್ಯ, ನೀನೇನು
ಆ ದಿವಸ ಯಾರಿಗೂ ಏನನೂ ಹೇಳದೆಯೆ
ನಮ್ಮೆಲ್ಲರನು ಬಿಟ್ಟು ಹೊರಟುಹೋದೆಯೆ ಅಪ್ಪ ?
ಆ ದುಃಖದಲಿ ನಿನ್ನ ತಾಯಿ ತಿಂಗಳ ಹಿಂದೆ
ತೀರಿಕೊಂಡರೆ. ನೀನು, ಅವರ ಪಾಡೇನೆಂದು,
ನನ್ನ ಪಾಡೇನೆಂದು, ಚಿಂತೆ ಇಲ್ಲೆಂಬಂತೆ

ಕಣ್ಣಿಂದ ಮರೆಯಾದೆ. ಸೀ ಎಗ್ಗನಲ್ಲವೇ !
ನಾವೆಲ್ಲ ಬಲ್ಲಂತೆ ಕಡುಜಾಣ. ಇಂಥವನು
ಏನೊ ಕಾರಣವಿದ್ದು ಅಂತು ಗೆಯ್ದಿರಬೇಕು.
ಏನು ಕಾರಣ, ಯಾರಿಗೂ ತಿಳಿಯದಾಯಿತು.

ಕಾಳಿದಾಸ.—ಇದನೆಲ್ಲ ನಾ ನಿಮಗೆ ಏನೆಂದು ಎಂತೆಂದು
ಇನಿತರಲಿ ತಿಳಿಸುವೆನು. ನನ್ನ ಮನವನು ಹಿಡಿದ
ತಪ್ಪು ತಿಳಿವಳಿಕೆಯೊಂದಿದನೆಲ್ಲ ಮಾಡಿಸಿತು.
ಅದು ತಿಳಿದ ಬಳಿಕ, ನಾ ಜಾಣಲ್ಲ ಎಗ್ಗನೇ
ಎಂದು ತನುಗರಿವಾಗುವುದು. ನನ್ನ ತಪ್ಪಿಂದ
ತಮಗೆ, ತಾಯಿಗೆ ದುಃಖವಾಗುವುದ ತಿಳಿತಿಳಿದೆ
ಅಂತು ನಡೆದೆನೆ ಎಂದು ಈಗ ಪಶ್ಚಾತ್ತಾಪ.
ಏನೆಂದು ತಿಳಿಯುವೆಯೆ ತಾಯಿ ಕಣ್ಮುಚ್ಚಿದರೆ,
ಇದು ನನ್ನ ಖೇದವನು ಹೆಚ್ಚಿಸಿದೆ. ಮನೆದೈವ
ನನ್ನ ಅಪರಾಧಗಳ ಮನ್ನಿಸಲಿ ಎಂದು ಗುರು
ಅದರೆದುರು ಬೇಡಿರಿ. ತಪ್ಪಾದುದೇನೆಂದು
ತಿಳಿಯದೆಯೆ ನನ್ನ ಮನ್ನಿಸಿ. ಬರುವ ದಿನಗಳಲಿ
ದೈವ ಕೈಹಿಡಿದು ನನ್ನನು ಒಳ್ಳೆ ದಾರಿಯಲಿ
ನಡೆಸಲೆಂದಾಶಿಷವ ನೀಡಿರಿ.

ಗುರು.— ನೀಡಿಹೆನು
ಅಣ್ಣಯ್ಯ. ನಮ್ಮ ದುಃಖಕೆ ನೂಕಿ ನಡೆದಂದು
ನೀನು ಆ ದುಃಖಕೂ ಹಿರಿದಾದ ದುಃಖದಲಿ
ನೊಂದು ಬೆಂದಿರಬೇಕು. ಅದ ನೆನೆವೆನೇ ನನಗೆ
ನಮ್ಮ ದುಃಖದ ಮಾತು ಮರೆಯುವುದು. ಮನೆದೈವ
ನಿನ್ನನವರಿಂದ ಕಡೆಹಾಯ್ಸಿ ಕರೆತಂದಿಹುದು.
ಇದೆ ಸಾಕು ನನಗೀಗ. ಹೊರಟು ಹೋದುದು ಏಕೆ,
ಇದನು ಎಂದಾದರೂ ಮನಬಂದ ದಿನ ಹೇಳು.
ಇಲ್ಲವೇ ಬೇಡ. ಅದು ತಿಳಿಯಲೇ ಬೇಕೆಂದು

ನಾನು ಬಯಸೆನು. ಈಗ ನನ್ನ ಒಂದೇ ಬಯಕೆ :
ಹಿಂದಾದುದಾಯಿತು, ಇನ್ನು ಬಹದಿನಗಳಲಿ
ಮನೆದೈವ ನಿನ್ನ ಸುಖದಲಿ ನಡೆಸಲೆನ್ನುವುದು.

(ಋತ್ವಿಕ ಒಳಕ್ಕೆ ಹೋಗಿದ್ದು ಹಿಂತಿರುಗಿ ಬರುತ್ತಾನೆ. ಅಣ್ಣನ ಹತ್ತಿರ ಬಂದು)

ಋತ್ವಿಕ.—ಅಣ್ಣಾ, ಅಡಿಗೆರಗುವೆನು. ಅಭಿವಾದಯೇ.
(ಎಂದು ನಮಸ್ಕಾರಮಾಡಿ ಪ್ರವರ ಹೇಳುತ್ತಾನೆ.)

ಗುರು.—ಸಂಜೀವ ಶರದಶ್ಶತಂ. ನಿನ್ನ ಗೃಹಲಕ್ಷ್ಮಿ
ನೀ ಸೌಖ್ಯವಾಗಿರುವೆ ಎಂಬುದನು ತಿಳಿಸಿದಳು.

ಯಜಮಾನಿ.—(ಬಂದು)
ಸ್ನಾನ ಆಹ್ನಿಕಕೆ ಏಳಲಿ ಭಾವ. ನೀವವರ
ನೋಡಿಕೊಳ್ಳಿರಿ. ನಾನು ಪೂಜೆಗಣಿಮಾಡುವೆನು.
ಅಷ್ಟರಲಿ ಅಡಿಗೆಯೂ ಆಗುವುದು.

ಋತ್ವಿಕ.— ಒಳ್ಳಿತು.
ಸ್ನಾನ ಮಾಡುವಿರಂತೆ ಬನ್ನಿ ಅಣ್ಣಾ.

ಗುರು.— ಬಂದೆ.

ಋತ್ವಿಕ.—(ಕಾಳಿದಾಸನ ಬಳಿಗೆ ಹೋಗಿ)
ತಾವು ಬರಿ ಕವಿ ಅಲ್ಲ. ಪ್ರಭುಗಳಿಗೆ ಇದನು ನಾ
ಅರಿಕೆ ಮಾಡಲೆ ?

ಕಾಳಿದಾಸ.— ಈಗಳೇ ಬೇಡ. ಇಷ್ಟರಲೆ
ಪ್ರಭುಗಳಿಗೆ ನಾನೆ ಅದ ಬಿನ್ನವಿಸುವೆನು.

ಋತ್ವಿಕ.— ಒಳಿತು.

(ಗುರು, ಋತ್ವಿಕ ಒಳಕ್ಕೆ ಹೋಗುತ್ತಾರೆ.)

ಸ್ಥಾನ ೪

ಒಡತಿಯ ಮನೆ. ಒಡತಿ ಬಾಗಿಲಲ್ಲಿದಾಳೆ. ಮಾಲತಿ ಹೊರಗಿಂದ ಬರುತ್ತಾಳೆ. ಮಾಲತಿ ಹತ್ತಿರ ಹತ್ತಿರ ಬಂದಂತೆ ಒಡತಿ ಹಿಂದುಹಿಂದಕ್ಕೆ ಹೋಗುತ್ತಾಳೆ.

ಮಾಲತಿ.—ಏಕೆ ಒಡತೀ, ನನ್ನ ಮಾತನಾಡಿಸದೆ ನೀ
ಹಿಂದು ಹಿಂದಕೆ ಹೋಗುತಿರುವೆ ? ಗುರುತಾಯಿತೇ ?

ಒಡತಿ.—ಮಾತನಾಡಿದಿರಾಪ್ಪ? ನೀವು ನೀವೇ; ನಿಮ್ಮ
ದೆವ್ವನಲ್ಲ?

ಮಾಲತಿ.— ದೆವ್ವ?

ಒಡತಿ.— ನೀವು ಸತ್ತಿರಿ ಎಂದು
ಊರೆಲ್ಲ ಹೇಳಿತೇ? ಸತ್ತವರ ಕಂಡೆನೇ,
ದೆವ್ವವೆಂದೇ ಅಂಜಿದೆನು.

ಮಾಲತಿ.— ದೆವ್ವ ಅಲ್ಲೆಂದು
ಈಗ ತಿಳಿಯಿತು ಅಲ್ಲ?

ಒಡತಿ.— ತಿಳಿಯಿತು. ಏನವ್ವ,
ಇತ್ತ ಬಂದಿರುವಿರೇ, ಯಾವಾಗ ಬಂದಿರಿ?

ಮಾಲತಿ.—ಇವೆ ಈಗ. ನಿನ್ನ ಮನೆಯಲಿ ಇರಲು ಬಂದಿಹನು.

ಒಡತಿ.—ಅವ್ವ ತಾಯಿ, ನನ್ನ ರಾಣಿಮ್ಮ, ಈ ಮನೆಗೆ
ಈ ಪುಣ್ಯ ಕಾದಿತ್ತೆ? ಇರಿ, ಅವ್ವ; ಸಂತೋಷ.
ಏನು ನಗರಿಗೆ ಬಂದ ಪರಿ?

ಮಾಲತಿ.— ನಾನು ಸತ್ತುದನು....

ಒಡತಿ.—ಬಿಟ್ಟಿತೆನ್ನಿರಿ ತಾಯಿ. ಜೀವದಿಂದಿರುವವರು
ಸತ್ತರೆನ್ನುವರುಂಟೆ. ಐದು ವರ್ಷದ ದಿವಸ
ಮುಂದಿ ಇದ ನಂಬಿತೇ ಏನೆಂಬ?

ಮಾಲತಿ.— ಒಡತಿ,
ಐದು ವರುಷದ ದಿವಸ ಮನೆಯಿಂದ ಹೊರಗಡೆಗೆ
ಹತ್ತು ಸಲ ನಾನು ತಲೆಯಿಡಲಿಲ್ಲ. ಇಷ್ಟೆನೇ
ನನ್ನ ನೋಡಿದ ಮುಂದಿ ನನ್ನ ತಂಗಿ ಎಂವೇ
ತಿಳಿದರು. ಅರಮನೆಯ ನಮ್ಮ ಜನ, ಎಂತಿರಲಿ
ಅಳಿಯುದಿರು ಮರಳಿ ಬಂದರೆ ಸಾಕು, ಎಂದವರು
ಸುಳ್ಳು ಸುದ್ದಿಯನು ದಿಟವೆನಿಸಿ ಕಾಪಾಡಿದರು.

ಒಡತಿ.—ಸುಳ್ಳು ಸುಳ್ಳೇ ಆಗಿ, ನೀವು ಸಾವಿರಕಾಲ
ಬಾಳಿ ಅವ್ವಾ.

ಮಾಲತಿ.— ಬಾಳಿ ? ಈ ಬಾಳು ಸಾವೆ ಸರಿ.
ಸತ್ತೆನೆನ್ನುವ ಮಾತ ಕೇಳಿದವಳಿಗೆ ನನ್ನ
ಕತೆಯೆಲ್ಲ ತಿಳಿದಿಹುದು.

ಒಡತಿ.— ತಿಳಿದಿರುವುದವ್ವಾ.

ಮಾಲತಿ.—ನನ್ನಾಣ್ಣ ಏತಕೋ ನನ್ನ ತೊರೆದೋಡಿದರು.

ಒಡತಿ.—ಅಹುದವ್ವ, ಕೇಳಿದೆನು.

ಮಾಲತಿ.— ಈಗ ನಿಮ್ಮರಮನೆಗೆ
ಕಾಳಿದಾಸ ಎಂಬ ಹೆಸರ ಕವಿ ಬಂದಿಹರು.

ಒಡತಿ.—ಅಹುದವ್ವ.

ಮಾಲತಿ.— ರಾಮಗಿರಿಯರಮನೆಯ ಗುರುಗಳು
ಇವರ ರಚನೆಯ ನೋಡಿ ಇದು ತಮ್ಮ ಆರಗುವರ,
ಅಣ್ಣಯ್ಯ, ನನ್ನ ಕೈಹಿಡಿದವರದೇ ರಚನೆ,
ಎಂದು ನಿಶ್ಚಯಿಸಿದರು.

ಒಡತಿ.— ಅಂತೆಂಬಿರಾ ತಾಯಿ ?

ಮಾಲತಿ.—ಆ ಊಹೆ ಸರಿಯೆ ಎಂಬುದನು ತಿಳಿವುದಕೆ ನಾ
ಬಂದಿಹೆನು. ನೀನು ಆ ಕವಿಯ ನೋಡಿಹೆಯಲ್ಲ.

ಒಡತಿ.—ನೋಡಿರುವೆನವ್ವ.

ಮಾಲತಿ.— ನನ್ನರಸರನು ನೋಡಿರುವೆ ?

ಒಡತಿ.—ನೋಡಿರುವೆ.

ಮಾಲತಿ.— ಇವರವರೆ ?

ಒಡತಿ.—(ಕ್ಷಣ ತಡೆದು) ಈ ನಮ್ಮ ಕವಿ ತಾನು
ಯಾರೆಂಬುದನು ನಾನು ಯಾರಿಗೂ ತಿಳಿಸುವುದು
ಬೇಡ ಎಂದಿರುವರು. ನಾನು ತಿಳಿಸುವುದಿಲ್ಲ
ಎಂದು ನಾ ಮಾತ ಕೊಟ್ಟಿಹೆನು. ಅದ ಮುರಿಯೆನು.
ಕಾಳಿದಾಸರು ನಿಮ್ಮ ಅರಸರೇ ಎಂಬಿರಾ,
ನಾನು ಹೇಳುವುದಿಲ್ಲ. ನಿಮ್ಮರಸ ಎಂದಿರೇ
ಅಲ್ಲವೆನ್ನುವುದಿಲ್ಲ.

ಮಾಲತಿ.— ನಮ್ಮ ಗುರುಗಳ ಊಹೆ
ಸರಿ ಎಂದು ಆಯಿತು. ಇನ್ನು ನೀ, ನೀ ಕೊಟ್ಟ
ಮಾತ ಮುರಿಯದೆ, ನಿನಗೆ ತಿಳಿದಿರುವ ಸಂಗತಿ
ಎಲ್ಲವನು ಹೇಳ ಬಹುದು. ಎಲ್ಲವನು ಹೇಳು.

ಒಡತಿ.—ನಿಮ್ಮರಸ ನೀವು ಸತ್ತಿರಿ ಎಂದೆ ತಿಳಿದಿಹರು.
ನಾನು ಅವರಿಗೆ ಇದನು ನೋಡಲು ಅರುಹಿದ ವೇಳೆ
ಅವರು ಮುಖ ಕೆಟ್ಟರು. ಮನಸಿನಲಿ ಮರುಗಿದರು.

ಮಾಲತಿ.—ಈಗವರು ನನ್ನೊಡನೆ ಬಾಳಲೊಪ್ಪುವರೆ, ಇದ
ನೀ ಕೇಳಿ ತಿಳಿಯಬಲ್ಲೆಯ ?

ಒಡತಿ.— ಅವ್ವ, ನಿಮ್ಮರಸ
ಒಬ್ಬ ದೊರೆ ಮಗ ; ನೀವು ದೊರೆ ಮಗಳು. ನಿಮಗಾಗಿ
ಅವರ ಈ ಮಾತ ಕೇಳಲು ನಾನು ಯಾರವ್ವ ?

ಮಾಲತಿ.—ನಿನ್ನ ಸಂಕೋಚ ಸರಿ.

ಒಡತಿ.— ಏನ ಮಾಡಲು ಬಹುದು,
ನನಗೆ ತೋಚಿದುದ ಹೇಳಲೆ ತಾಯಿ ?

ಮಾಲತಿ.— ಹೇಳು.

ಒಡತಿ.—ನೀವು ಈ ಅರಮನೆಯ ನೆಂಟರು. ನೀವಿಲ್ಲಿ
ಬಂದಿಹುದ ರಾಣಿಯವರಿಗೆ ನಾನು ತಿಳಿಸುವೆನು.
ಅವರು ನಿಮ್ಮನು ರಾಣಿವಾಸದಲಿ ತಂಗಿರಿ
ಎಂದು ಕರೆಯುವರು. ಕರೆಯನು ಒಪ್ಪಿಕೊಳ್ಳಿರಿ.
ರಾಣಿ ಬಹು ಒಳ್ಳೆ ಜನ. ತುಂಬ ಜಾಣೂ ಅಹುದು.
ಅವರಿಗೆಲ್ಲವ ತಿಳಿಸಿ. ಎಂತು ನಡೆಯುವುದೆಂದು
ಅವರು ಬೆಸಸುವರು. ಅಂತೆಸಗಿರಿ.

ಮಾಲತಿ.— ಸರಿ, ಒಡತಿ.
ಇದನೆಲ್ಲ ಗೆಯ್ವ ಹೊತ್ತಲಿ ನಾನು ಬಂದಿಹುದು
ಅಣ್ಣನಿಗೆ ತಿಳಿದು ಮತ್ತೊಮ್ಮೆ ಅವರೆತ್ತಲೋ
ಹೊರಟು ಹೋದರು, ಏನು ಮಾಡುವುದು ?

ಒಡತಿ.— ಈ ಮಾತು
ಯಾವುದೂ ಯಾರಿಗೂ ತಿಳಿಯಬಾರದು ಎಂದು
ರಾಣಿಯರ ಬೇಡುವ. ಅವರು ಎಲ್ಲ ಸುಸೂತ್ರ
ನಡೆವಂತೆ ನೋಡಿಕೊಂಬರು.

ಮಾಲತಿ.— ನಿನ್ನ ಸೂಚನೆ
ತಕ್ಕುದೆನ್ನಿಸುತಿಹುದು. ರಾಣಿಯುವವರನು ನೀನು
ಒಡನೆಯೇ ಕಾಣುವೆಯ ?

ಒಡತಿ.— ಕಾಣುವೆನು, ಅಮ್ಮಾಜಿ.
ನಾ ಹೋಗಿ ಬಹವರೆಗೆ ನೀವಿಲ್ಲಿ ಮರೆಯಲಿರಿ.

ಸ್ಥಾನ ೫

ಇದಾದ ಒಂದು ಗಳಿಗೆಯ ಮೇಲೆ ಉಜ್ಜಯಿನಿ ಅರಮನೆಯಲ್ಲಿ. ರಾಣಿ, ಮಾಲತಿ.

ರಾಣಿ.—ನಿಮ್ಮ ಕಥೆಯನು ಮೊದಲೆ ಕೇಳಿ ಬಲ್ಲೆನು, ತಂಗಿ.
ಕೇಳಿ ನಿಮಗಾಗಿ ನಾ ಬಹಳವೇ ಮರುಗಿಹೆನು.
ಅಣ್ಣ ನೀಗಿದನಾಗಿ ಅಸುವ ತೊರೆದಿರಿ ಎಂದು
ಜನ ಹೇಳಿದುದ ಕೇಳಿ ತುಂಬ ದುಃಖಿಸಿದೆನು.
ತಂಗಿ ಜೀವಂತರಾಗಿರುವಿರೇ ಇದನೋಡಿ
ದುಃಖದಲಿ ಬಹುಪಾಲ ಇಳಿಸಿಕೊಂಡಿಹೆನೀಗ.
ಅಣ್ಣ ಏನಾದರೊ ಎಂಬ ಚಿಂತೆಗೆ ನೀವು
ಈಡಾಗಿ ತೊಳಲುವಿರೆ, ಇನಿತೆ ಈಗಿನ ದುಃಖ.
ಅದು ಕೂಡ ಇಷ್ಟರಲೆ ಇಳಿದು ಹೋಗುವುದೆಂದು
ಕಾಣುತಿದೆ. ಇದು ತುಂಬ ಸಂತಸದ ಸಂಗತಿ.
ಕಾಳಿದಾಸರು ನಿಮ್ಮ ಅಣ್ಣರೇ ಅಹುದೆಂದು
ಒಡತಿ ಹೇಳುತಲಿಹಳು. ತಾನಾಗಿ ಆ ಮಾತ
ಹೇಳುವುದು ಸಲ್ಲದು, ನೀವು ಅದ ಹೇಳಿರಲು
ಅಲ್ಲ ಎನ್ನುವುದಿಲ್ಲ, ಎನ್ನುತಿರುವಳು. ಇರುತ,

ನೀವೆ ಆವರನು ಒಮ್ಮೆ ನೋಡಿ ಆಣ್ಣನೆ ಅಹುದು
ಎಂದು ತಿಳಿಯಲು ನೀವು ಬಯಸುವಿರಿ.

ಮಾಲತಿ.— ಆಹುದಕ್ಕ.

ರಾಣಿ.—ಕಷ್ಟ ಹರಿವುದರ ಶುಭ ಸೂಚನೆಯೊ ಎಂಬಂತ
ಇಂದು ಅರಮನೆಯ ಕವಿಗೋಷ್ಠಿ ಸೇರೆಯುವ ದಿವಸ.
ಸಂಜೆಯಲಿ ಸಭೆಯ ಭವನದಲಿ ನಮ್ಮರಸರು
ಗೋಷ್ಠಿ ಇವ ನಡೆಸುವರು. ಕವಿಗಳು, ಪಂಡಿತರು,
ಎಲ್ಲರೂ ನೆರೆಯುವರು. ಇವರ ಸಲ್ಲಾಪವನು
ಕೇಳುವರೆ, ಅರಮನೆಯ, ಇನ್ನೆಲ್ಲ ಹಿರಿಮನೆಯ,
ಹೆಣ್ಣು ಮಕ್ಕಳು ನಾವು ಭವನದೆಡಗಡೆಗಿರುವ
ಸಜ್ಜೆಯಲಿ ಕುಳಿತಿಹುದು ವಾಡಿಕೆ. ಈ ಸಂಜೆ
ನಮ್ಮೊಡನೆ ಬನ್ನಿ. ಕವಿ ಕಾಳಿದಾಸರ ಪೀಠ
ನಾವು ಕುಳ್ಳಿರುವೆಡೆಗೆ ಎದುರಿನಲೆ ಇರುವುದು.
ನೀವು ಆವರನು ತುಂಬ ಸುಲಭದಲಿ ಚೆನ್ನಾಗಿ
ನೋಡಲಪ್ಪುದು. ನೋಡಿ ಆಣ್ಣ ಅಹುದೆಂದಿರಿ.
ಆಮೇಲೆ ?

ಮಾಲತಿ.— ನಾನು ಇನಿತಸಿತು ಹಾಡುವೆನಕ್ಕ.
ಹಾಡು ಅನಿತೇನಲ್ಲ. ಕಂಠ ಬಹು ಚೆನ್ನೆಂದು
ಎಲ್ಲರೂ ಹೇಳುವರು. ಮದುವೆಗೂ ಮೊದಲನಲಿ
ಒಂದು ದಿನ ನನ್ನ ಕಂಠವ ಕೇಳಿ ಅರಗುವರ
ಮರುಳು ಹೋದರು. ಅದೇ ಮದುವೆಯನು ಮಾಡಿಸಿತು.
ನೀವು ನಿಮ್ಮರಸರಿಗೆ ನಾನು ಬಂದಿರುವುದನು,
ಏಕೆ ಬಂದಿಹೆನೆಂಬುದನು, ತಿಳಿಸಿ, ಪೂಜ್ಯರು
ರಾಣಿವಾಸಕೆ ಇವರ ಕರೆತರಲು ಕೇಳಿರಿ.
ದೊರೆ, ಆಣ್ಣ, ಕುಳಿತೆಡೆಯ ಬದಿಯಲಿಹ ಅರೆಯಲಿ
ನಾ ಕುಳಿತು ಒಂದು ಗೀತೆಯ ಹಾಡುವೆನು. ಆಣ್ಣ
ಕಂಠವನು ಕೇಳಿ, ಇದು ತನ್ನ ಸತಿಯದೆ ಕಂಠ

ಎಂಬಂತೆ ಇರುವುದೇ, ಇದು ಏನು ಎಂತೆಂದು,
ಚಿಂತಿಸಲೆಬೇಕು. ದೊರೆ ಆಗ ಅವರಿಗೆ ನಾನು
ಸತ್ತೆನೆಂಬುದು ಸುಳ್ಳು, ಜೀವಿಸಿರುವೆನು, ಅವರು
ನನ್ನ ನೋಡಲು ಒಪ್ಪುವರೆ, ಎಂದು ಕೇಳಲಿ.
ಒಪ್ಪಿದರೆ ನನಗೆ ತಿಳಿಸಲಿ. ನಾನು ಅವರೆದುರು
ಸಾರಿ, "ನೀವೆನ್ನನೇತಕೆ ತೊರೆದಿರೋ ಕಾಣೆ.
ಅಪರಾಧವೇನ ಮಾಡಿದೆನೆಂದು ನಾ ನಿಮ್ಮ
ಕೇಳುವವಳಲ್ಲ. ನಾ ಏನೆ ಅಪರಾಧವನು
ಮಾಡಿದ್ದರೆಯು ಅದನು ಮನ್ನಿಸಿರಿ. ನಿಮ್ಮೊಡನೆ
ಬಾಳಲೆನಗನುಮತಿಯ ನೀಡಿರಿ," ಎಂದವರ
ಬೇಡುವೆನು. ನೀಡಿದರೆ ಸಂತೋಷ. ನೀಡರೇ
ಕುಟಿಯು ತೆರೆಯದೆ ಅವರ ಅಡಿಮುಟ್ಟಿ ಕೈಮುಗಿದು
ಹಿಂದಿರುಗಿ ನನ್ನ ಅಣ್ಣನ ಮನೆಯ ಸಾರುವೆನು.

(ಎನ್ನುತ್ತಾ ಬಿಕ್ಕಿಬಿಕ್ಕಿ ಅಳುತ್ತಾಳೆ.)

ರಾಣಿ.—ಅಳಬೇಡವೇ ತಂಗಿ; ಅಳಬೇಡ ನನ್ನಮ್ಮ.
ಕತ್ತಲಳಿಯಿತು; ಬೆಳಕು ಕಾಣುತಿದೆ; ಈ ವೇಳೆ
ನೀನತ್ತು ನನ್ನನೂ ಅಳಿಸುವುದ? ಬಾರಮ್ಮ,
ಕಣ್ಣನೊರಸಿಕೊ. ಎಲ್ಲೊ ಹೋಗಿದ್ದ ನಿನ್ನಾಣ್ಮ
ಬಂದುದಾಯಿತು. ಬಂದವರು ನಿನ್ನ ಆಣ್ಮನೇ
ಎಂದು ತಿಳಿಯಲು ನೀನು ಇಲ್ಲಿಗೈದಿಹುದಾಯ್ತು.
ಬಂದವರು ಆಣ್ಮನೇ ದಿಟ ಎಂದು ತಿಳಿದಾಯ್ತು.
ಇನಿತು ಒಳ್ಳಿತರಿಂದ ಕಾಣದೇ, ಮುಂದೆಯೂ
ಒಳ್ಳಿತೇ ಅಹುದೆಂದು? ನಾಳೆ ಮುಗಿವುದು ನಿನ್ನ
ಏಕಾಕಿ ಬಾಳುವೆಯ ವನವಾಸ. ಭಾರತದ
ದುಷ್ಯಂತ ಸತಿ ಶಕುಂತಲೆಯನೊಪ್ಪಿದನೆಂತು,
ಅಂತು ನಿನ್ನರಸ ನಿನ್ನನು ನಾಳೆ ಒಪ್ಪುವನು.
ಇರುತ, ಈ ಒಂದು ಮಾತನು ಹೇಳಲೇ ಬೇಕು.

ಮಾಲತಿ.—ಮಾತು ?

ರಾಣಿ.— ಇದು. "ಅಣ್ಣನನು ಒಮ್ಮೆ ಬೇಡುವೆನು,
ಅವನು ಒಪ್ಪನೆ, ಮರಳಿ ತುಟಿ ಬಿಚ್ಚದಿಡಿಗೆರಗಿ
ಕೈಮುಗಿದು ಹೋಗುವೆನು," ಎಂಬೆಯೇ ಅದು ತಪ್ಪು.
ಒಮ್ಮೆಗೇ ಒಪ್ಪದಿರೆ ಸೋತೆನೆಂದೆನಬೇಡ.
ಇನಿಯ, ನೀನಿಂತೆಸಗೆ ನನಗಿನ್ನು ಗತಿಯೇನು,
ಎಂದು ಕಣ್ಣೀರಿಕ್ಕಿ ಮನಕರಗುವನೆ ನೋಡು.
ಈ ಚೆಲುವು, ನಯದ ನುಡಿ, ಜೊತೆಗೆ ಕಣ್ಣಲಿ ನೀರು,
ಇನಿತನೂ ನೋಡಿ ಮನಕರಗದಿರಬಲ್ಲನೇ
ಯಾವನೇ ಗಂಡು ? ನಾನಿನಿತ ಹೇಳಲು ಬಲ್ಲೆ :
ನಾ ನಿನ್ನ ಅಣ್ಣನಾಗಿರೆ ಇವಕೆ ಸೋತೇನು ;
ಬಾ, ಇನಿಯೆ, ಎಂದು ನಿನ್ನನು ಅಪ್ಪಿಕೊಂಡೇನು.
(ಎಂದು ಅವಳನ್ನು ಅಪ್ಪಿಕೊಳ್ಳುತ್ತಾಳೆ. ಮಾಲತಿ ಸ್ವಲ್ಪ ನಗುತ್ತಾಳೆ.)
ನಗುವೆಯಾ ? ನಗು ತಾಯಿ. ನಿನ್ನ ಅಳು ಈ ಕ್ಷಣವೆ
ಬತ್ತಿರಲಿ. ನಗೆ ಸದಾ ಮುಖದಲ್ಲಿ ಅರಳಿರಲಿ.

ಗೊತ್ತುಗಾತಿ.—(ಬಂದು) ಅಮ್ಮಾಜಿ.

ರಾಣಿ.— ಏನು ?

ಗೊತ್ತುಗಾತಿ.— ಪ್ರಭುಗಳ ಮಹಾಕಾಳ
ಕ್ಷೇತ್ರದಧಿಕಾರಿಗಳು ಏನೊ ಅಪ್ಪಣೆ ಬೇಡಿ
ಹೇಳಿಕಳುಹಿಪರಂತೆ. ಪ್ರಭುಗಳು ಇದೇ ಈಗ
ಅತ್ತ ಬಿಜಮಾಡಿದರು. ಸಂಜೆಗೈತಹರಂತೆ.
ನಡುಹಗಲ ಆರೋಗಣೆಯನಲ್ಲೆ ನಡಸುವರು.

ರಾಣಿ.—ಅಂತೆ ? ಒಳ್ಳಿತು. ಈಗ ಊಟದ ಮುನ್ನ
ಅವರನಿಲ್ಲಿಗೆ ಕರೆದು, ವಿಷಯವೆಲ್ಲವನರುಹಿ,
ನಾಳೆಯದು ಏರ್ಪಾಡ ಮಾಡ ನಾ ಬಯಸಿದೆನು.
ಪ್ರಭು ಮನೆಯಲಿಲ್ಲ. ಕವಿಗೋಷ್ಠಿ ಮುಗಿದಿರೆ ಬಳಿಕ
ಅವರ ಬರಮಾಡಿ ಇದನೆಲ್ಲ ಬಿನ್ನವಿಸುವೆನು.

(ಬೆಳೆದ ಹುಡುಗಿ ಕುಮಾರಿ ಮಾಧವಿ ಬರುತ್ತಾಳೆ. ಅವಳು ರಾಣಿಯ ಎರಡನೆಯ
ಗಳು.)

ಧವಿ.—ಏನಮ್ಮ ನೀ ನನ್ನ ಬೆಳಗಿನಿಂದಿದುವರೆಗೆ
ಒನ್ಮೆಯೂ ಹತ್ತಿರಕೆ ಕರೆದಿಲ್ಲ.

ಣಿ.— ಅಕ್ಕಯ್ಯ
ಬಂದಿಹುದು ಕಾಣದೇ? ಹಿರಿಯರಿಗೆ ಕೈಮುಗಿ.

ಧವಿ.—ಕೈಮುಗಿದೆ ಅಕ್ಕಯ್ಯ.

ಲತಿ.— ನಿನಗೆ ಶುಭ ಬಯಸುವೆನು,
ತಂಗ್ಯಮ್ಮ. ಅಕ್ಕ, ಇವಳರಮನೆಯ ಕಿರಿಮಗಳೆ?

ಣಿ.—ಅಹುದಮ್ಮ. ಇವಳಕ್ಕ ಅನುಜಪುರದರಮನೆಯ
ಹೊಕ್ಕಳು. ಅವಳತ್ತ ನಡೆದಳೋ, ಇವಳಿಲ್ಲಿ
ತಾನೊಬ್ಬಳೇ ಆದೆ ಎಂದು ಕೊರಗುತಲಿಹಳು.
ಎಲ್ಲ ಹೊತ್ತಲು ನನ್ನ ಜೊತೆಯಲಿರು ಎನ್ನುವಳು.
ಬೆಳೆದವಳು ಎಳೆಯ ಮಗು ಎಂಬಂತೆ ಆಡುವಳು.

ಲತಿ.—ಇವಳಿಗೂ ಮದುವೆ ಮಾಡಿರಿ.

ಣಿ.— ಮಾಡಬೇಕೆಂದು
ನೋಡಿಹೆವು ತಾಯಿ. ವರ ಯಾರೆಂದು ಬಲ್ಲಿರಾ?

ಲತಿ.—ಇಲ್ಲ. ಯಾರೆಂಬಿರಿ?

ಣಿ.— ನಿಮ್ಮಣ್ಣ.

ಲತಿ.— ಒಳ್ಳಿತೇ!
ಅವರ ಕೇಳಿರಿ.

ಣಿ.— ಕೇಳಿ ಆಯ್ತಮ್ಮ. ಅವರದಕೆ
"ಸದ್ಯದಲಿ ಒಂದು ಕಾರಣ, ನನ್ನ ಮನಸಿಗೆ
ಸ್ವಸ್ಥವಿಲ್ಲವೆ ಇದೆ ಕೆಲವು ದಿನ ಕಳೆಯಲಿ.
ಅದುವರೆಗೆ ತಾವು ಕಾದಿರೆ, ತಮ್ಮ ಕುವರಿಯನು
ಮದುವೆಯಾಗುವುದ ನಾ ಭಾಗ್ಯವೆಂದೆಣಿಸುವೆನು,"
ಎಂದು ಉತ್ತರವ ಕಳುಹಿದರು. ದೊರೆ ಇದ ಕೇಳಿ,

ಸೋದರಿಯ ಸಾವಿಂದ ತುಂಬ ಮನನೊಂದಿಹರು,
ಕೆಲಕಾಲ ಕಳೆಯಲೆಂದರು. ಅಂತು ಆ ಮಾತು
ಅಲ್ಲೆ ನಿಂತಿತು.

ಮಾಲತಿ.— ಅಣ್ಣ ಇದರ ಮಾತನೆ ನನಗೆ
ಇದುವರೆಗೆ ತಿಳಿಸಿಲ್ಲ. ಊರ ಸಾರಿದ ಒಡನೆ
ಮದುವೆ ಆಗೆಂದವರ ಒತ್ತಾಯಪಡಿಸುವೆನು.

ರಾಣಿ.—ನಿಮ್ಮ ಕುರಿತಾ ಸುದ್ದಿ ಸುಳ್ಳು ಎಂಬುದರಿಂದ
ಮತ್ತೊಮ್ಮೆ ಅವರ ಕೇಳಲು ನಮಗೆ ಅನುವಾಯ್ತು.
ನಿಮ್ಮ ವಿಷಯದಿ ನಾನು ಈಗ ಹೇಳಿದ ಮಾತು
ಸರಿ ಅಲ್ಲ?

ಮಾಲತಿ.— ಸರಿ ಅಕ್ಕ.

ರಾಣಿ.— ಬನ್ನಿ, ಮುಂದಿನ ಮಾತು
ಮತ್ತೇನು ಇರಬಹುದು ಅದನೆಲ್ಲ ಆಡುವ.

ಸ್ಥಾನ ೬

ಋತ್ವಿಕನ ಮನೆ. ಒಂದು ಕೋಣೆ. ಆ ಸಂಜೆ ಕೋಣೆಯಲ್ಲಿ ವಿಷ್ಣು, ಅಪರ್ಣಾ ಇದ್ದಾರೆ. ಅಪರ್ಣಾ ಅಳುತ್ತಿದ್ದಾಳೆ. ಬಾಗಿಲ ಹೊರಗಿಂದ ಯಜಮಾನಿ,

ಯಜಮಾನಿ.—ಏನೊ ವಿಷ್ಣು, ಏನು ಹೆಂಡತಿಯನಳಿಸಿದೆಯ?
ಏನು ಹೇಳಿದೆ? ಒಳಗೆ ಬರಲೇನೊ?

ವಿಷ್ಣು.— ಬನ್ನಿರಿ,
ಅತ್ತೆ.

ಯಜಮಾನಿ.— ಏನೋ ಅಪ್ಪ. ಎಷ್ಟೊ ದಿನ ಕಾಣದೆ
ಒಬ್ಬರೊಬ್ಬರ ಇಂದು ಕಂಡಿಹಿರಿ. ಕಂಡವರು
ಸಂತೋಷದಲಿ ಎರಡು ಮಾತನಾಡುವುದು ಸರಿ.
ಹೆಂಡರನು ಅಳಿಸುವುದೆ?

ವಿಷ್ಣು.— ಹೆಣ್ಣು ಅವಕಳಬಹುದು.
ಗಂಡು ಅಳುವಂತಿಲ್ಲ. ಎಂದೆ ನಾ ಅಳಲಿಲ್ಲ.

ಜಮಾನಿ.—ಗಂಡ ಅಳುವಂತೆ ನೀ ಏನ ಮಾಡಿದೆ ಮಗಳೆ ?

(ಅಪರ್ಣಾ ಏನೂ ಹೇಳುವುದಿಲ್ಲ.)

ಷ್ಣ.—ನೋಡಿ, ನಿಮ್ಮೊಡನೆಯೂ ಇವಳದು ಅದೇ ಹಠ.
ಮೂಗ ತುದಿಯಲಿ ಕೋಪ. ಮಾತೆಲ್ಲ ಮೊನೆ ಮಾತು.
ಒಳ್ಳೆ ಮಾತೆಲ್ಲಕೂ ಪ್ರತಿ ಕೆಟ್ಟವೇ ಮಾತು.

ಜಮಾನಿ.—ಏನಾಯಿತೇ ಅಪರ್ಣಾ ? ನನಗೆ ಹೇಳಮ್ಮ.

ರ್ಣಾ.—ನೋಡಿ ಚಿಕ್ಕಮ್ಮ. ವರ್ಷವರ್ಷ ದಿವಸ
ಸತ್ತೆಯಾ ಬದುಕಿಹೆಯ ಎಂದು ಕೇಳದ ಗಂಡ
ನಿಮ್ಮ ಮಗ ಉದಯದಲಿ ನಾವು ಬಂದೆವೆ ಆಗ
ನನ್ನ ಕಂಡವರು ಮಧ್ಯಾಹ್ನವೆಲ್ಲವು ಎಲ್ಲೊ
ಹೋಗಿದ್ದು ಇವೆ ಈಗ ಬಂದಿಹರು. ಬಂದವರು
ಇಕೊ ನಿನಗೆ ಈ ಒಡವೆ ಈ ಸೀಲೆ ಎಂದಿವನು
ನನ್ನೆದುರು ಹರಡಿಹರು. ನೋಡಿ ಈ ಗಂಡನಿಗೆ
ನಾನು ಹೆಂಡಿರು ಬೇಡ. ನನ್ನ ಸೀಲೆಯೆ ಸಾಕು.
ಇವರಂತೆಯೇ ಹೆಂಡಿರಾಗಿ ನಾ, "ನೀ ಬೇಡ,
ನೀ ತರುವ ಸೀಲೆ ಒಡವೆಗಳಿರಲಿ," ಎನಬೇಕು.

ಷ್ಣ.—ಎಲೆ ಹುಡುಗಿ, ನಾ ನಿನ್ನ ಜೊತೆಯಲೇ ಕುಳಿತಿದ್ದೆ,
ಇವನು ತರುವುದು ಎಂತು ? ಅತ್ತೆ, ಇವಳಿಗೆ,
ಹೆಂಡಿರಾದವಳು ಗಂಡನ ಬಳಿಗೆ ಬರುವುದು
ಎಷ್ಟು ಒಳ್ಳೆಯದು, ಅದರಿಂದೆಷ್ಟು ಲಾಭ ಇದೆ,
ಇದು ಎಲ್ಲ ತಿಳಿಯಲಿ, ಎಂದು ಯೋಚಿಸಿ ನಾನು
ಸೀಲೆ ಒಡವೆಗಳ ತರಲೆಂದು ಪೇಟೆಗೆ ಹೋದೆ.
ಇದು ತಪ್ಪೆ ? ಈ ಅಪ್ಪರಾಣೆ....

ಜಮಾನಿ.— ಅಪ್ಪರಾಣೆ ?
ಏನೊ ಅದು ?

ರ್ಣಾ.— ತುಂಬು ಅಕ್ಕರೆಯಿಂದ ನಿಮ್ಮಳಿಯ

ನನ್ನ ಹೆಸರಿಗೆ ಕೊಡುವ ರೂಪು. ಅಪರ್ಣಾ
ಅಪ್ಪರಾಣೆ.

ಯಜಮಾನಿ.—ಅಯ್ಯೋ, ವಿಷ್ಣು, ಏಕೋ ನೀನು
ಎಷ್ಟೊ ವರ್ಷದ ಮೇಲೆ ಹತ್ತಿರಕೆ ಬಂದಿರುವ
ಹೆಂಡತಿಯನಿಂತೆಲ್ಲ ಕೊಂಕು ನುಡಿಗಳ ನುಡಿದು
ನೋಯಿಸುತ ಇರುವುದು ? ಒಳ್ಳೆ ಮಾತಾಡಪ್ಪ.

ವಿಷ್ಣು.—ಒಳ್ಳೆ ಮಾತಾಡೆಂದು ಮೊದಲು ಅವಳಿಗೆ ಹೇಳಿ.

ಯಜಮಾನಿ.—ಅವಳೇನು ಹೇಳಿದಳೊ ?

ವಿಷ್ಣು.— ಏನನ್ನು ಹೇಳಿಲ್ಲ ?
ವಿದ್ಯೆಯಿಲ್ಲದ ಪ್ರಾಣಿ. ಆಚಾರ ಬಿಟ್ಟವನು.
ಜೂಜಾಡುವವನು.

ಯಜಮಾನಿ.— ಜೂಜು ?

ವಿಷ್ಣು.— ಹೌದು ; ಜೂಜತ್ತೆ.
ಹಣ ಗಳಿಸಬೇಕೆಂದು ನಮ್ಮ ವೃತ್ತಿಯ ಬಿಟ್ಟು
ಬೇಹಾರದಲಿ ಸೇರಿದವನು, ಇನ್ನೇನೇನೊ
ನಾನು ಮಾಡಿದ ತಪ್ಪನೆಲ್ಲ ಒಕ್ಕಣೆಯಾಗಿ
ನನಗಿವಳು ಹೇಳುವಳು. ಹೇಳುವುದು ಸುಳ್ಳಲ್ಲ.
ನೋಡಿ ಅತ್ತೆ, ನಾನು ಹಾರುವರ ಹುಡುಗ ದಿಟ.
ಆದರೋ ಓದಿನಲಿ ಬರಹದಲಿ ನನಗೇನೊ
ರುಚಿ ಹುಟ್ಟಲಿಲ್ಲ. ನಮ್ಮಪ್ಪ ಅರಮನೆ ಮಣೆಯ,
ಲೌಕಿಕರು. ಪೂರ್ವ ಪಶ್ಚಿಮ ದಿಸೆಗೆ ಮುಖಮಾಡಿ
ಪದ್ಮಾಸನಾಸನ ಸುಖಾಸೀನನಾಗಿರುತ
ಕೈಯ ಬೆರಳಿಂದ ಮೂಗಿನ ಹೊಳ್ಳೆಗಳ ಮುಚ್ಚಿ
ಪ್ರಾಣವನು ಯಮಮಾಡಿ....

ಯಜಮಾನಿ.— ಯಮಮಾಡಿ ? ಏನೊ ಅದು.

ಅಪರ್ಣಾ.—ತಾನು ಪ್ರಾಣಾಯಾಮ ಮಾಡುವನು ಅಲ್ಲೆಂದು
ಅವನು ಯಮ ಎನ್ನುವನು ಚಿಕ್ಕವ್ವ.

ಯಜಮಾನಿ.— ಎಲ ಹುಡುಗ!

ವಿಷ್ಣು.—ಹೌದತ್ತೆ. ನೂರು ಪ್ರಾಣಾಯಾಮವನು ಮಾಡಿ
ಹೊತ್ತ ನೂಕುವ ಮಾರ್ಗ ಒಳ್ಳಿತೆನ್ನಿಸಲಿಲ್ಲ.
ಊರ ಬೇರೆಯ ಹುಡುಗರೊಡನೆ ಆಟಕೆ ಸೇರಿ
ಜೂಜಾಡುವುದ ಕಲಿತೆ. ಹುಡುಗ ಕೆಡುವನೆ ಎಂದು
ಭಯಪಟ್ಟ ಅಮ್ಮ, ಇವನಿಗೆ ಮದುವೆ ಮಾಡುವ,
ಒಳ್ಳೆ ದಾರಿಗೆ ಬರುವನೇನೊ ಎಂದಣ್ಣನನು,
ನನ್ನ ಮಗನಿಗೆ ನಿನ್ನ ಮಗಳ ಕೊಡು, ಅಣ್ಣಯ್ಯ,
ಎಂದು ಬೇಡಿದಳು. ಅಹ, ಸೋದರಳಿಯನಿಗಿಂತ
ಒಳ್ಳೆ ವರ ಉಂಟೆ ಎಂದರು ಮಾವ. ಇಬ್ಬರೂ
ಸೇರಿದರು. ಅಹುದಹುದು ಎಂದರು. ನನ್ನನ್ನು
ಇವಳ ಕೊರಳಿಗೆ ಉರುಳು ಹಾಕಿದರು. ನಾನೇನು
ಉರುಳಾಗಬೇಕೆಂದು ಬಯಸಿದೆನೆ? ಹಿರಿಯರು,
ಹುಡುಗಿ ತಂದೆಯ ಬಿಟ್ಟು ಬಂದಳೇ ಆ ತಂದೆ
ದಿಕ್ಕಿಲ್ಲದಾಗುವರು, ಅದರಿಂದ ಹುಡುಗನೇ
ಇವರ ಮನೆಯಲಿ ನಿಲ್ಲುವುದು ಚೆನ್ನ ಅಹುದೆಂದು
ಮಾತಾಡಿಕೊಂಡಿದ್ದರಂತೆ. ನನಗಿದ ಅಮ್ಮ
ಆ ಮೇಲೆ ಹೇಳಿದಳು. ನಾ ಒಪ್ಪಲಿಲ್ಲತ್ತೆ.
ಜೂಜಾಟ ಆಡಿಯೂ ನನ್ನ ಊರಲಿ ನನಗೆ
ಹೊತ್ತು ಕಳೆವುದು ಕಷ್ಟವಾಗಿತ್ತು. ಮೇಲಾಗಿ
ಜೂಜಾಟ ಅಲ್ಲಿ ಹಿರಿ ಅಪರಾಧವೇನಲ್ಲ.
ನನ್ನ ಊರನು ಬಿಟ್ಟು ರಾಮಗಿರಿ ಗುರುಮನೆಗೆ
ಹೋದೆನೇ ಗುರುಮನೆಯ ಅಳಿಯ ಜೂಜಾಡುವುದೆ?
ಕೂಡದು. ಜೂಜಿಲ್ಲ. ಮೂಗ ಹಿಡಿಯುವುದಿಲ್ಲ.
ನನ್ನ ಗತಿ? ನಾನಲ್ಲಿ ಬರುದಿಲ್ಲ ಎಂದೆನು.
ಮಾವ ಏನೂ ಹೇಳಲಿಲ್ಲ. ಹೆಂಡತಿ ಇವಳು,
ಚಿಕ್ಕಂದಿನಿಂದಲೂ ನೀ ನನ್ನ ನೋಡಿರುವೆ,

ಸಾಧಿಸಲು ನಿನಗೆ ದುರ್ಲಕ್ಷ್ಯ, ಆಸೆಯೆ ಇಲ್ಲ,
ಎಂದು ಮೂದಲಿಸಿದಳು. ಇಂಥ ಮಾತನು ಕೇಳಿ
ಸಾಕಾಗಿ ನಾನು, ನಮ್ಮೂರ ಬೇಹಾರಿಗರು
ಹಿರಿಯರೊಬ್ಬರು, ನೀನು ನಮ್ಮ ಕೆಲಸವ ಕಲಿತು
ಉಜ್ಜಯಿನಿಯನು ಸೇರು, ಕೈತುಂಬ ಹಣ ಬಹುದು,
ಎಂದು ಹೇಳಿರಲು, ಇದು ದೇವರೇ ತೋರಿಸಿದ
ದಾರಿ ಎಂದೆನು. ಊರ ತೊರೆದೆನು. ನಗರಿಗೆ
ಬಂದುಬಿಟ್ಟೆನು. ಕೇಳಿ ಬೇಸರಾಯಿತೆ ಅತ್ತೆ?

ಯಜಮಾನಿ.—ಇಲ್ಲಪ್ಪ; ವಿಷ್ಣು, ನೀ ಪಟ್ಟ ಪಾಡಿದ ನೀನು
ಎಂದಾದರೂ ನಿನ್ನ ಹೆಂಡತಿಗೆ ಹೇಳಿದೆಯ?

ವಿಷ್ಣು.—ಇಲ್ಲ, ಅತ್ತೆ.

ಯಜಮಾನಿ.— ಅಪ್ಪ, ಹೇಳಬೇಕಾಗಿತ್ತು.
ಹೇಳದಿದ್ದುದು ತಪ್ಪು, ಕಂಡೆಯಾ? ನನಗಲ್ಲ,
ನಿನ್ನ ಹೆಂಡತಿಗೆಂದು ಉಳಿದ ಮಾತನು ಹೇಳು.
ಮಗು ಅಪರ್ಣಾ, ನಿನಗೆ ಇನಿತೆಲ್ಲ ತಿಳಿದಿತ್ತೆ?

ಅಪರ್ಣಾ.—ಇಲ್ಲ ಚಿಕ್ಕಮ್ಮ. ಹೇಳದೆ ಹೇಗೆ ತಿಳಿಯುವುದು?

ವಿಷ್ಣು.—ಅದು ದಿಟವೆ. ಇವಳು ಕೇಳದೆ ಹೇಗೆ ಹೇಳುವುದು?
ಏನನಾದರು ಹೇಳ ಹೋದೆನೆನ್ನಿರಿ, ಅತ್ತೆ,
ಇವಳು ಏನಾದರೂ ಬಿಸಿ ಮಾತನಾಡುವಳು,
ನನ್ನ ಬಾಯ್ಮುಚ್ಚುವಳು. ಆಯಿತೇ, ಕೇಳಿರಿ.
ಉಜ್ಜಯಿನಿಯನು ಸೇರಿ, ಬೇಹಾರ ಜೂಜಾಟ
ಎರಡರಲಿ ಮುಳುಗಿದೆನು. ತುಂಬ ಹಣ ಗಳಿಸಿದೆನು.

ಯಜಮಾನಿ.—ಬೇಹಾರ ತಂದ ಹಣ ಜೂಜಿನಲಿ ಹೋಯ್ತಲ್ಲ?

ವಿಷ್ಣು.—ಇಲ್ಲ, ಅತ್ತೆ. ನನಗೆ ಬೇಹಾರ ತಂದಂತೆ
ಜೂಜು ಸಹ ಹಣವ ತಂದಿತು. ಒಂದದೃಷ್ಟ ಇದು
ಉಳಿದವರು ಹತ್ತು ಆಟವ ಸೋತು ಒಂದರಲಿ
ಗೆಲ್ಲುವರು. ನಾನು ಹತ್ತಾಟದಲಿ ಗೆದ್ದವನು

ಒಂದರಲಿ ಸೋಲುವೆನು. ಇದು ಎಷ್ಟು ಆಯಿತು,
ಜೊತೆಯ ಜನ, ನೀನು ಆಡದೆ ಕುಳಿತು ನೋಡುತಿರು,
ನಿನಗೆ ಪರಿಹಾರ ತೆರುವೆವು, ಎಂದು ಹೇಳಿದರು.
ಗೆದ್ದೆ ಎಂಬೊಂದಿಷ್ಟು, ಪರಿಹಾರ ಒಂದಿಷ್ಟು,
ಬೇಹಾರದಲಿ ಬಂದ ಹಣ ಇನ್ನು ಮತ್ತಷ್ಟು,
ತುಂಬ ಸೇರಿತು. ನನ್ನ ಬೇಹಾರಿ ಹಿರಿಯವನು,
ಹಣವ ಕುಡಿಕೆಯಲಿರಿಸಬೇಡ, ನನ್ನವೊ, ಬೇರೆ
ಧನಿಯದೋ, ಕೈಗೆ ಕೊಡು, ಹೊನ್ನು ಮರಿ ಹಾಕುವುದು,
ದಿನಕಳೆದು ಹಣಕೆ ಚುಂಗಡಿ ಸೇರಿ ಚುಂಗಡಿಗೆ
ಮತ್ತೆ ಚುಂಗಡಿ ಸೇರಿ ನಿನ್ನ ಹಣ ದುಪ್ಪಟ್ಟು
ತಿಪ್ಪಟ್ಟು ಚೌಪಟ್ಟು ಬೆಳೆಯುವುದು, ಎಂದನು.
ನನ್ನ ಹಣವನು ಅವನ ಕೈಗೆ ಕೊಟ್ಟೆನು, ಅತ್ತೆ.
ಅದು ಬೆಳೆದು ಇವಳು ಬರಲೆಂದು ಕಾಯುತಲಿತ್ತು.

ಯಜಮಾನಿ.—ಅಯ್ಯೊ ಮಗು. ಎಂಥ ಒಳ್ಳೆಯ ಹುಡುಗನೋ ನೀನು !

ವಿಷ್ಣು.—ಒಳ್ಳೆಯವನೇ ಅತ್ತೆ ? ನಿಮಗೆ ; ಇವಳಿಗೆ ಅಲ್ಲ.
ಇವರೂರ ಜನ ತಮ್ಮ ಗಿರಿಯ ತಲೆಯಲಿ ಒಮ್ಮೆ
ಯಕ್ಷನೊಬ್ಬನು ಇದ್ದ ಎಂದು ಹಳೆದಿನದ ಕತೆ
ಒಂದ ಹೇಳುವರತ್ತೆ. ಇವನು ಈ ಗಿರಿಯಲ್ಲಿ ;
ಹೆಂಡಿರೋ ಅಲಕೆಯಲಿ. ಇವನಿಲ್ಲಿ ನವೆದನು ;
ಅವಳಲ್ಲಿ ನವೆದಳು. ಅವನಂತೆ ನಾನಿಲ್ಲಿ
ಹೆಂಡತಿಯ ಬಿಟ್ಟೊಬ್ಬ ನವೆನವೆದು ನವೆದೆನು.
ನಾನಿಲ್ಲ ಎಂದಿವಳು ಊರಿನಲಿ ನವೆದಳೇ ?

ಅಪರ್ಣಾ.—ನಾ ನವೆಯಲಿಲ್ಲೆಂಬ. ನೀನು ನವೆದುದು ದಿಟವೆ ?
ನಿನ್ನ ನೋಡಿದರೆ ನವೆದಂತೆ ಕಾಣುತಲಿಲ್ಲ.

ವಿಷ್ಣು.—ನಿನ್ನ ಕಣ್ಣಿಗೆ ನಾನು ನೊರಗಿದುದು ಕಾಣದು.
ಇನ್ನಷ್ಟು ನವೆಯಲಿಲ್ಲೇಕೆ ಎನುತಿಹೆ ನೀನು.
ಮೇಲಾಗಿ ಅತ್ತೆ ನಾನಾಗಾಗ ಬಂದಾಗ

ತಿನಲಿತ್ತು ನನ್ನ ಪ್ರೈ ತುಂಬುಪಂತೆಸಗಿದರು.
ಇನ್ನೊಂದು ಮಾತತ್ತೆ. ಇವಳು, ಈ ಒಡವೆ
ಸೇಲೆಗಳು ಜೂಜ ಹಣದಿಂದ ಬಂದವು, ಅಂಥ
ಕೆಟ್ಟ ಹಣ ತಂದಿರುವ ಒಡವೆಗಳ ನಾ ಒಲ್ಲೆ,
ಎನ್ನುತಿರುವಳು. ಯಾವ ಮಾತು ಇದು ? ದಸಿಯೆತ್ತಿ
ಮಂತ್ರಗಳ ಹೇಳಿ ಸಂಪಾದಿಸಿದ ಹಣ ಒಳ್ಳೆ
ಹಣ ; ಜೂಜಿನಲಿ ಗೆದ್ದ ಹಣ ಕೆಟ್ಟ ಹಣ. ಏಕೆ ?
ಏತರದು ಮಾತು ಇದು ? ಮಂತ್ರವನು ಗುಣಿಗುಣಿಸಿ
ತಂದ ಹಣ ತಾನು ಪರಿಶುದ್ಧ ಧನ ಎಂದೊಂದು
ಪಟ್ಟಿಯನು ಕಟ್ಟಿಕೊಂಡಿರುವುದೇ ? ಜೂಜ ಹಣ
ನಾ ಕೆಟ್ಟ ಹಣ ಎಂದು ಮುಖ ಮರೆಸಿಕೊಳ್ಳುವುದೆ ?
ಜೂಜ ಹಣ ಕೆಟ್ಟ ಹಣ ಏಕೆ ? ಆ ಆಟದಲಿ
ಜಾಣ್ಮೋ ಅದೃಷ್ಟವೋ ಗೆಲವ ತರುವುದು. ಗೆಲವು
ಸರಿಯಾಗಿ ದೊರೆತದು. ಸುಳ್ಳಲ್ಲ; ಕಳವಲ್ಲ ;
ಮೋಸ ವಂಚನೆ ಅಲ್ಲ. ಏನು ಅದರಲಿ ದೋಷ ?

ಯಜಮಾನಿ.—ನ್ಯಾಯ. ನಿಂಗಳೇ ಅಪರ್ಣಾ, ಗಂಡ ಆಸೆಯಲಿ
ಒಡವೆ ವಸ್ತುವ ಕೊಡಲು ನೀ ಕೆಟ್ಟ ಮಾತಾಡಿ
ಅದ ಬೇಡ ಎನ್ನುವುದೆ ?

ಅಪರ್ಣಾ.— ತಪ್ಪಾಯ್ತು, ಚಿಕ್ಕಮ್ಮ.

ಯಜಮಾನಿ.—ಉಡಿಯ ಹಿಡಿ. ವಿಷ್ಣು, ಆ ಸೇಲೆಯನು ಒಡವೆಯನು
ಉಡಿಯಲಿರಿಸೊ.

ವಿಷ್ಣು.— ಅತ್ತೆ, ಅದ ನೀವು ಮಾಡಿರಿ.

ಯಜಮಾನಿ.—ಆಗಲಿ. ಅಪರ್ಣಾ, ಉಡಿ ಹಿಡಿಯೆ.

(ಅಪರ್ಣಾ ಉಡಿ ಹಿಡಿಯುತ್ತಾಳೆ. ವಸ್ತ್ರಗಳನ್ನು ಉಡಿಯಲ್ಲಿ ಹಾಕಿ)

ಇದು ಈಗ
ಒಳ್ಳೆ ಹೆಂಡಿರ ರೀತಿ. ಒಡವೆವಸ್ತುವನಿನ್ನು

ಬದಿಗಿರಿಸು. ನೀನು ಒಳ್ಳೆಯ ಗಂಡ ಎಂದಿವನ
ಅಡಿ ಮುಟ್ಟಿ ಕೈಗಳನು ಕಣ್ಗೆ ಒತ್ತಿಕೊ.

ವಿಷ್ಣು.— ಬೇಡ.
ಬೇಡವೇ ಬೇಡ, ಅತ್ತೆ. (**ಅಪರ್ಣಾ ಅಡಿ ಮುಟ್ಟಲು ಬಾಗುತ್ತಾಳೆ. ಇವನು ಅವಳನ್ನು ತಡೆಯುತ್ತಾನೆ.**) ಅಪರ್ಣಾ, ಬೇಡ, (**ಎಂದು ಅದು ತಪ್ಪಿದ ಮೇಲೆ**)
ನನ್ನ ಹೆಂಡತಿ ನನ್ನ ಬಯ್ಯುವುದ ಬಿಡಲತ್ತೆ.
ನನ್ನ ಪಾಲಿಗೆ ಅದೇ ಸಾವಿರ ನಮಸ್ಕಾರ.

(**ಯಜಮಾನಿ, ಅಪರ್ಣಾ ನಗುತ್ತಾರೆ.**)

ಯಜಮಾನಿ.—ಇಂಥ ಗಂಡನ ಪಡೆದ ನೀ ಪುಣ್ಯವಂತೆ ದಿಟ,
ಮಗಳೇ ಅಪರ್ಣಾ. ಜಾನಕಿಯ ದೊರೆಯಂತೆ
ಏಕಪತ್ನೀವ್ರತವ ನಡೆಸಿಹನೆ ಈ ಹುಡುಗ.
ಮಾತೇನೊ ಸ್ವಲ್ಪ ಅತಿ. ಇರುತ ಮನ ಹೂವಂತೆ
ಮೆದು. ಇವನ ಮನವ ನೋಯಿಸಬೇಡವೇ, ತಾಯಿ.
ಗಂಡ ಎನ್ನುವ ವಸ್ತು ಗುಣವಂತ ಹೆಂಡತಿಗೆ
ಎಲ್ಲ ಒಡವೆಗು ಮಿಗಿಲ ಒಡವೆ. ಎಚ್ಚರದಿಂದ
ಜೋಪಾನಮಾಡಿ ಅದ ನೋಡಿಕೊಂಬುದು ಹೆಣ್ಣ
ಹೊಣೆ, ತಾಯಿ.

ಅಪರ್ಣಾ.—(**ವಿಷ್ಣುವಿಗೆ**) ಚಿಕ್ಕಮ್ಮ ನಮ್ಮ ಕಾಪಾಡಿಹರು.
ಅಡಿಗೆರಗು (ಎನ್ನುತ್ತಾಳೆ. **ಅವನು ಇವಳು ಜೊತೆಯಾಗಿ ಅವಳಿಗೆ ನಮಸ್ಕಾರ ಮಾಡುತ್ತಾರೆ.**)

ಯಜಮಾನಿ.— ಬಹುಕಾಲ ಸುಖವಾಗಿ ಬಾಳಿರಿ.

(**ಹೊರಡುತ್ತಾಳೆ.**)

ಅಪರ್ಣಾ.—ನಾ ನಿನ್ನ ಯಾವಾಗ ಏನೆಂದು ಬೈದೆ ? ನೀ
ಆ ಮಾತ ಹೇಳಿದೆಯೆ ?

ವಿಷ್ಣು.— ಬುದ್ಧಿಯಿಲ್ಲದ ನಾನು
ಏನೇನ ಹೇಳಿದೆನೊ, ಬುದ್ಧಿ ಸಾಲದೆ ನೀನು

ಏನೇನ ಮಾಡಿಪೆಯೊ, ಅದರ ಮಾತೇನೀಗ ?
ಅತ್ರೆ, ಸಾವಿರಕಾಲ ಸುಖವಾಗಿ ಬಾಳಿರಿ
ಎಂದು ಹೇಳಿದರಲ್ಲಿ. ಅದರಲ್ಲಿ ಮೊದಲದಿನ
ಇದು ಎಂದು ದೇವರಿಗೆ ಕೈಮುಗಿದು ಸುಖವಾಗಿ
ಬಾಳತೊಡಗುವ. ಅಪರ್ಣಾ, ಬಾರ. ಬಾ ಹುಡುಗಿ.
(ಎಂದು ತೋಳನ್ನು ತೆರೆಯುತ್ತಾನೆ.)

ಅಂಕ ಆರು

ಸ್ಥಾನ ೧

ಅರಮನೆ ಕವಿಗೋಷ್ಠಿ. ಪ್ರಭು ಹೊರತು ಉಳಿದವರೆಲ್ಲ ಸೇರಿದಾರೆ.

ಕವಿಶೇಖರ.—ಪ್ರಭುಗಳು ಮಹಾಕಾಳ ಸನ್ನಿಧಿಗೆ ಬಿಜಗೆಯ್ವ
ವೇಳೆ, ಕವಿಗೋಷ್ಠಿ ನೆರೆಯಲಿ, ನಾವು ಬರಲೆಂದು
ಕಾಯುವುದು ಬೇಡ, ಸನ್ನಿಧಿಯಿಂದ ಗೋಷ್ಠಿಗೇ
ಬಹೆವೆಂದು ನನಗೆ ತಿಳಿಸಲು ಬೆಸಸಿ ಹೊರಟರು.
ಪ್ರಭುಗಳಿಚ್ಛಿಸಿದಂತೆ ಚಂದ್ರಾಂಶು ಕವಿ ತಾವು
ಕಾಳಿದಾಸರ ಕೃತಿಗಳಾರಂಭದವು ವೃತ್ತ
ಶ್ಲೋಕಗಳ ಪ್ರತಿಗೆಯಿಸಿ ಹಿರಿಯರಿಗೆ ಕಳುಹಿಹಿರಿ.

ಚಂದ್ರಾಂಶು.—ಕಳುಹಿ ಆಗಿದೆ ಹಿರಿಯರೆ.

ಕವಿಶೇಖರ.— ಒಳಿತು, ಕವಿಗಳೆ.
ಶ್ಲೋಕಗಳ ನೋಡಿ ಸಂತೋಷಿಸಿದ ಹಿರಿಯರು
ಅವುಗಳನು ಪ್ರೇರಿಸಿದ ಅನುಭವದ ವಿವರಗಳ
ಕವಿವರರ ಮುಖದಿಂದಲೇ ತಿಳಿವ ಅವಕಾಶ
ಒದಗಲೆಂಬುದು ಪ್ರಭುಗಳುದ್ದೇಶ. ಪ್ರಭುಗಳೇ
ಮೂರ್ತರಾಗದೆ ಕವಿಗಳಾದವನು ನಾನೀಗ....
(ಪ್ರಭು ಗೋಷ್ಠಿಗೆ ಬರುತ್ತಿರುವುದು ಕಾಣುತ್ತದೆ.)

ದಯಮಾಡಿದರು ಪ್ರಭು. ಗೋಷ್ಠಿಯನು ನಡಸುವರು.

(ಎಂದು ಕೈಮುಗಿದು ನಿಲ್ಲುತ್ತಾನೆ. ಎಲ್ಲರೂ ಕೈಮುಗಿದು ನಿಲ್ಲುತ್ತಾರೆ. ಪ್ರಭು ಒಳಗೆ ಬರುತ್ತಾನೆ. ಪೀಠದಲ್ಲಿ ಕುಳಿತುಕೊಳ್ಳುತ್ತಾನೆ. ಎಲ್ಲರೂ ಕುಳಿತುಕೊಳ್ಳುತ್ತಾರೆ.)

ಪ್ರಭು.—ಹಿಂದಿರುಗಿ ಬಹುದು ತಡವಾಯಿತು. ಮನ್ನಿಸಿರಿ.
ಗೋಷ್ಠಿ ತೊಡಗಿಹುವಲ್ಲ.

ಕವಿಶೇಖರ.— ತೊಡಗಿ ಆಯಿತು ಪ್ರಭು.
ಪ್ರಭುಗಳಪ್ಪಣೆಯಂತೆ ಕಾಳಿದಾಸರ ಕೃತಿ
ಹಲವದರ ಪ್ರಸ್ತಾವನಾ ಶ್ಲೋಕ ವೃತ್ತಗಳ
ಪ್ರತಿಗಳನು ಚಂದ್ರಾಂಶು ಕವಿ ಗೋಷ್ಠಿ ಕವಿಜನಕೆ
ಈ ಮುನ್ನ ಕಳುಹಿಹರು. ಪ್ರಭುಗಳುದ್ದೇಶಿಸಿದ
ಕವಿಮನೋಧರ್ಮವನು ಕುರಿತ ಪರಿಶೀಲನ
ನಡೆಯಲನುವಾಗಿಹುದು.

ಪ್ರಭು.— ಒಳ್ಳಿತು. ಹಿರಿಯರು.
ರಚನೆಗಳ ಕುರಿತು ಯೋಚಿಸಿಹ ಯಾರೊಬ್ಬರು,
ನಾಲ್ಕು ವಾಕ್ಯವನನುಗ್ರಹಿಸಿ ಪರಿಶೀಲನವ
ಆರಂಭಿಸೋಣವಾಗಲಿ.

(ಯಾರೂ ಮಾತನಾಡುವುದಿಲ್ಲ.)

ಗೋಷ್ಠಿ ಮುಖ್ಯರು
ಕವಿಶೇಖರರೆ, ವಾಕ್ಯ ಇವನನುಗ್ರಹಿಸಿರಿ.

ಕವಿಶೇಖರ.—ಅಪ್ಪಣೆ, ಮಹಾಪ್ರಭು. ರಚನೆಗಳ ನೋಡುತಿರೆ
ಮೊದಲು ಮನತಟ್ಟುವುದು ಕವಿಗಳ ಮಹಾವಿನಯ .
ಜೊತೆಯಲೇ ಮನವ ಮುಟ್ಟುವುದವರ ಸಾರಳ್ಯ.
ಸುಲಭವಾಗಿರುವ ಶಬ್ದಗಳು, ಒಂದೊಂದಾಗಿ,
ಆನೆಗಳು ಇರುವೆಗಳು ಸಾಲಾಗಿ ನಡೆವಂತೆ,
ಮುಂದಿರುವ ಪದಗಳನು ಹಿಂದಿನವು ಅನುಸರಿಸಿ,
ಕೃತಿಯ ಬಂಧುರ ಮಾಡಿಹವು. ಭಾವ ಗಂಭೀರ ;

ಊಹೆ ಸುಂದರ. ಇವರ ಉಪಮೆಗಳ ವೈಭವ
ಇವರವೇ. ಆದಿಕವಿ ವಾಲ್ಮೀಕಿಗಳು ಇಂಥ
ಉಪಮೆಗಳ ತಂಡವನು ಒಂದೆ ಕಂಡರು. ಅವರ
ಬಳಿಕ ಅವರಂತೆಯೇ ಈ ಅಲಂಕಾರವನು
ಸಾಧಿಸಿರುವವರು ಇವರೊಬ್ಬರೇ ಎಂದೆನಗೆ
ತೋರುತಿದೆ. ಸಾಕೆ ಪ್ರಭು ?

ಪ್ರಭು.— ಸಾಕು, ಕವಿಶೇಖರರೆ.
ಮೆಚ್ಚಿಕೆಯು ಔದಾರ್ಯ ರಚನೆಯೌನ್ನತ್ಯಕ್ಕೆ
ಸಾಟಿಯಾಗಿದೆ.

ಕಾಳಿದಾಸ.—(ಎದ್ದು ನಿಂತು) ಪ್ರಭುಗಳಲಿ ಒಂದು ಬಿನ್ನಪ.

ಪ್ರಭು.—ತಿಳಿಸಿ, ಕವಿಗಳೆ.

ಕಾಳಿದಾಸ.— ಪೂಜ್ಯ ಹಿರಿಯರ ಅನುಗ್ರಹದ
ನುಡಿಗಳನು ಕೇಳುವುದು ಕಿವಿಗೆಸಿತು ಸಂತೋಷ,
ಮನಕಸಿತೆ ಸಂಕೋಚ. ಮೇಲಾಗಿ, ನಾಸಿಲ್ಲೆ
ಕುಳಿತಿರಲು, ರಚನೆಗಳ ದೋಷಗಳ ಗುರುತಿಸಿಹ
ನನ್ನ ಹಿರಿಯುರು, ನನ್ನ ಕುರಿತ ದಾಕ್ಷಿಣ್ಯದಲಿ,
ದೋಷ ಇಂತಹವೆಂದು ತಿಳಿಸೆ ಹಿಂದೆಗೆದಾರು.
ಇದರಿಂದ ನಾನು ಈ ಪರಿಶೀಲನದ ವೇಳೆ
ಹೊರಗಿರಲೆ ಎಂದು ತಮ್ಮಪ್ಪಣೆಯ ಬೇಡುವೆನು.

ಪ್ರಭು.—ಕವಿ, ತಮ್ಮ ಸಂಕೋಚ ಸಹಜ. ಆದರೆ ಇದು
ಮಿತ್ರ ಕವಿಗಳ ಕೂಟ. ಚೆಲುವಿರಲು ಮೆಚ್ಚುವುದು,
ಕೊರೆ ಇರಲು ತಿಳಿಸುವುದು, ಇದು ನಮ್ಮ ಉದ್ದೇಶ.
ಚೆನ್ನೆಂಬ ನುಡಿ, ಅಂತೆ ಅಲ್ಲೆಂಬ ನುಡಿ, ಎಲ್ಲ
ಹಿರಿಯಜನ ಕಿರಿಯರಿಗೆ ಗೆಯ್ವ ಆಶೀರ್ವಾದ.
ಮೆಚ್ಚಿಕೆಯು ನುಡಿಯಿಂದ ಆತ್ಮಪ್ರತ್ಯಯ ಹೆಚ್ಚಿ
ಮತ್ತೆ ಒಳ್ಳೆಯ ರಚನೆಗೆಯ್ಯುವುದು, ದೋಷವಿದು
ಎಂದ ನುಡಿಯನು ಕೇಳಿ ಮುಂದಿನವು ರಚನೆಯಲಿ

ಅಂಥ ದೋಷಗಳಿಂದ ಬಿಡಿಸಿಕೊಂಬುದು, ಇದು
ಗೋಷ್ಠಿಯಲಿ ನಡೆವ ಪರಿಶೀಲನ ಕ್ರಮ ಕವಿಗೆ
ಗೆಯ್ವ ಉಪಕಾರ. ಅದರಿಂದ ತಾವಿಲ್ಲಿಹುದು
ಸರಿಯೆಂದು ನಮ್ಮರಿವು. ಋತ್ವಿಕರೆ?

ಋತ್ವಿಕ.— ಯುಕ್ತ, ಪ್ರಭು.

ಕಾಳಿದಾಸ.—ಪ್ರಭು ಚಿತ್ತ. (ಎಂದು ಕುಳಿತುಕೊಳ್ಳುತ್ತಾನೆ.)

ಪ್ರಭು.— ಬೇರೆ ಹಿರಿಯರು ಅನುಗ್ರಹಮಾಡಿ.

ವನಮಾಲ.—ಪ್ರಭುಗಳಪ್ಪಣೆ ನೀಡೆ ಈ ಉದ್ಧರಚನೆಯಲಿ
ದೋಷವೋ ಎಂದೆನಿಪ ಒಂದು ಕಿರಿಸಂಗತಿಯ
ಬಿನ್ನವಿಸಿ ಕವಿವರರ ವಿವರಣೆಯ ಬಯಸುವೆನು.

ಪ್ರಭು.—ಆಗಲಿ.

ವನಮಾಲ.— ಕವಿವರರು ಈ ತಮ್ಮ ಶ್ಲೋಕದಲಿ
ತಾವು ಮಂದರು, ವೃಥಾ ಕವಿಯಶಃ ಪ್ರಾರ್ಥಿ,
ಎಂದು ತಮ್ಮನು ತಾವೆ ಹಳಿದುಕೊಂಡಿರುವರು.
ಶಕ್ತನಲ್ಲದೆ ಬರಿಯ ಕವಿಯಶವ ಬಯಸುವನು
ಮಂದನೇ ಸರಿ. ಅಂಥ ಮಂದ ಇಂತಹ ಕೃತಿಯ
ನಿರ್ಮಿಸಲು ತೊಡಗುವನೆ? ವಿನಯ ಒಳ್ಳಿತು ದಿಟ.
ಆದರದು ಎದುರಾಳಿ, ಇದು ಕಪಟ, ದಿಟವಲ್ಲ,
ಎಂಬಂತೆ ಅತಿರೇಕವನು ಮುಟ್ಟಬಾರದು.

ಪ್ರಭು.—(ನಗುತ್ತ) ಇದಕೆ ಕವಿಗಳು ಏನು ವಿವರಣೆಯ ನೀಡುವರು,
ಅದನು ತಿಳಿಯಲು ಗೋಷ್ಠಿ ಕೌತುಕದಿ ಕಾದಿಹುದು.

ಕಾಳಿದಾಸ.—ಕವಿ ಇವನು ಬಹು ಶಕ್ತ ಎನ್ನುವುದು ತಮ್ಮೆಣಿಕೆ.
ಇದರಿಂದ ತಾವೆಂಥ ಸಹೃದಯ ಉದಾರಿಗಳು
ಎನ್ನುವುದು ಕಾಣುವುದು. ಆದರಾ ಕವಿಯ ಮನ,
ಅವನು ತಕ್ಕಷ್ಟು ಎಚ್ಚರದ ಕವಿ ಆಗಿರಲು,
ಅವನ ವಿಷಯಕೆ ತಾವು ತಳೆದಿರುವ ಧೈರ್ಯವನು
ತನ್ನ ವಿಷಯಕೆ ತಾನು ತಳೆಯಲಾರದು. ನಾನು,

ಆ ಕಾವ್ಯವನು ರಚಿಸಲಿಜೆ ಈಗ ತೊಡಗಿಹೆನು.
ಕಾವ್ಯ ಈ ತೆರ ಹಿರಿದು, ಅದರ ವಿಸ್ತಾರವನು
ಮನದಿ ಕಲ್ಪಿಸಿ ನಾನು, ಇದರ ಕೊನೆ ಮುಟ್ಟುವುದು
ಸಾಧ್ಯವೇ ಎಂದು ಭಯವಾದದಲಿ ಅಳಿದೆನು.
ನನ್ನ ನುಡಿ ನನ್ನ ಭಯವನು ಸೂಚಿಸುವುದನಿತೆ.
ಅದು ವಿನಯದತಿರೇಕವಲ್ಲ. ಅದರಲಿ ಕಪಟ
ಸೂಜಿ ಮೊನೆಯನಿತಿಲ್ಲ.

ಪ್ರಭು.— ವನಮಾಲ ಕವಿಗಳೆ ?

ವನಮಾಲ.—ಆಯ್ತು ಪ್ರಭು.

ಚಂದ್ರಾಂಶು.— ಕಾಳಿದಾಸರ ಉಪಮೆ ಅವರ ಮನ
ಇಂತೆಂಬುದನು ವಿಶದಪಡಿಸುವುದು. ಫಲ ಇಹುದು
ಆಕಾಶದಲಿ ; ತಾನು ವಾಮನ. ಅದ ತುಡುಕ
ಕೈಯನೆತ್ತಿ ಹಸಿವನು. ನಾ ಮಹಾಕವಿಯೆಂದು
ಕೊಬ್ಬಿರುವ ಒಬ್ಬನಿಗೆ ಈ ಶ್ಲೋಕ ಮೂಡದು.
ಈ ಅಹಂಕೃತಿ ಇಲ್ಲ, ಶಂಕೆ ಇದು ತಪ್ಪದು.

ಪ್ರಭು.—ಯುಕ್ತವೇ ನುಡಿದಿಹಿರಿ, ಚಂದ್ರಾಂಶು ಕವಿಗಳೆ.
ಆಮೇಲೆ.

ಶರ್ಕರಕೆ.— ಪ್ರಭುಗಳೇ ನನಗೆ ಬಹು ಮೆಚ್ಚಿದುದು
ಕವಿಗಳ ಕುಮಾರಸಂಭವ ಕೃತಿಯ ಮೊದಲಲಿಹ
ಹಿಮಗಿರಿಯ ವರ್ಣನೆಯ ವೃತ್ತ. ಬಹು ಚೆನ್ನ ಅದು.

ಅಸ್ತ್ಯುತ್ತರಸ್ಯಾಂ ದಿಶಿದೇವತಾತ್ಮಾ
ಹಿಮಾಲಯೋ ನಾಮ ನಗಾಧಿರಾಜಃ

ಮಾತಿನದು ಬೆಳೆಯೇನು ! ಭಾವದ ಧ್ವನಿಯೇನು !
ಪಾವನತೆ, ಔನ್ನತ್ಯ, ಪ್ರಾಜ್ಯತ್ವ, ಸಾರ್ಥಕತೆ ;
ಸೌಂದರ್ಯಭರಿತ ಪದಪುಂಜ ; ದೀರ್ಘ ಹ್ರಸ್ವ
ಬೆರೆತು ಬೆಳೆದಿರುವ ಗುಂಫನ ; ರಚನೆ ಬಂಧುರ ;

ಉಯ್ಯಾಲೆ ಎಂಬಂದ ತೂಗುತಿಹ ಪಂಕ್ತಿಗಳು.
ಇದ ನೋಡಿ ನನಗೆ ಬಹು ಆನಂದ.

ಪ್ರಭು.— ಅದು ಯುಕ್ತ.
ಏನು ವನಮಾಲ ಕವಿಗಳೆ?

ವನಮಾಲ.— ಯುಕ್ತ, ಪ್ರಭು, ಯುಕ್ತ.

ಪ್ರಭು.—ಆಮೇಲೆ?

ಶರ್ಕರಕ.— ಕವಿವರರ ವೃತ್ತವಿದ ಕಂಡೆನಗೆ
ಕವಿಭೃತ್ಯ ಕವಿಗಳ ಹಿಮಾಲಯದ ವರ್ಣನೆಯ
ರಚನೆ ನೆನಪಿಗೆ ಬಂದಿತಹುದು. ಕವಿಗಳು ಅದನು
ನೋಡಿಹರೊ?

ಕಾಳಿದಾಸ.— ನೋಡಿಹೆನು. ಕವಿಭೃತ್ಯ ಕವಿಗಳು
ಯಾರೆಂದು ನನಗೆ ತಿಳಿಸಿದ ನಮ್ಮ ಮಿತ್ರರು
ಅವರ ರಚನೆಯ ಪರಿಯ ನನಗೆ ತಿಳಿಸಲು ಅದರ
ಪ್ರತಿ ಒಂದ ಬರೆದುಕೊಟ್ಟರು. ಅದನು ನೋಡಿಹೆನು.

ಶರ್ಕರಕ.—ತುಂಬ ಚೆನ್ನನ ರಚನೆ.

ಕಾಳಿದಾಸ.— ತುಂಬ ಚೆನ್ನನ ರಚನೆ.

ಶರ್ಕರಕ.—ಬಹುಕಾಲ ತಲೆಮೇಲೆ ಭೂಭಾರವನು ಹೊತ್ತು
ದಣಿದಾದಿಶೇಷ, ತಣ್ಣನ ಗಾಳಿಯನು ಬಯಸಿ,
ತಲೆಯಿಂದ ಭೂಮಿಯನು ತೂರಿ ಮೇಲಕೆ ಬಂದು,
ಭರತಭೂಮಿಯ ಉತ್ತರವ ಸಾರಿ ದಕ್ಷಿಣಕೆ
ಮುಖಮಾಡಿ, ಈ ನೆಲನ ನೋಡಿ, ಇದು ನಂದನದ
ಒಂದು ವಿಸ್ತೃತ ರೂಪ, ಭೂಭಾಗ ಒಂದಲ್ಲ,
ಎಂದೆಣಿಸಿ, ವನಗಳಲಿ ತುರುಗಿರುವ ನೂರಾರು
ಪುಷ್ಪಗಳ ಸೌರಭವ ಶೇಖರಿಸಿ ತಂಪಾಗಿ
ಬೀಸುತಿಹ ತೆಂಗಾಳಿ ಸೂಸುತಿಹ ಸೌಸವನ
ಹೀರಿ, ಆನಂದದಲಿ ನಾನಿನ್ನು ಅತಲತಲ
ಪಾತಾಲದತ್ತ ಹೋಗುವನಲ್ಲ, ಭೂಭಾರ

ದಿಗ್ದಂತಿಗಳ ಪಾಲಿಗಿರಲಿ ಎನ್ನುತ ತಾನು
ಎಲ್ಲಿದ್ದನಲ್ಲಿಯೇ ಶಿಲೆಯಾಗಿ ನಿಂತನು ;
ಶಿಲೆಯಾದ ಆ ಆದಿಶೇಷನೆ ಹಿಮಾಲಯು :
ಅವನ ಸಾವಿರ ಫಣವೆ ಹಿಮಗಿರಿಯ ಶಿಖರಗಳು :
ಎಂದು ಕವಿ ಬರೆದಿಹರೆ ಇವರ ಅಂದಕೆ ನಾನು
ಅಂವೆ ಮರುಳಾದೆನು. ಮರುಳಾದವನು ಅಂದು,
ಪೂರ್ವಿಕರು ಇಂತಪ್ಪ ಕೃತಿಯನೆ ನ ಭೂತೋ
ನ ಭವಿಷ್ಯತಿ ಎಂದು ಹೊಗಳಿವರು, ಅಂಥ ಕೃತಿ
ಇದು, ಎಂದು ಎಣಿಸಿದೆನು.

(**ಕಾಳಿದಾಸನು ಮುಗಿಸಗೆಯೊಡನೆ ಅವನ ಕಡೆ ನೋಡುತ್ತಾನೆ.**)

ಏನು ಕವಿಗಳು ನನ್ನ
ಒಂದು ತೆರ ನೋಡುವಿರಿ ?

(**ಕಾಳಿದಾಸ ಏನೂ ಹೇಳುವುದಿಲ್ಲ.**)

ವನಮಾಲ.— ಏನು ತೆರ ನೋಡಿವರು
ಕಾಳಿದಾಸರು ನಿಮ್ಮ ?

ಶರ್ಕರಕ.— ಈ ನಮ್ಮ ಕವಿ ಇವರು
ಹೇಳುತಿಹುದೇನು ಇದು ಎಂಬಂತೆ, ತಮಗೆ ಅದು
ಒಪ್ಪಲಿಲ್ಲೆಂಬಂತೆ.

ವನಮಾಲ.— ಅಹುದೆ ಕವಿಗಳೆ ?

ಕಾಳಿದಾಸ.— ಅಹುದು.

ವನಮಾಲ.—ಅವರ ನುಡಿ ನಿಮಗೆ ಒಪ್ಪವೆ ? ಏಕೆ ಒಪ್ಪದು ?

ಋತ್ವಿಕ.—ಈ ವಾದ ಇಲ್ಲಿ ನಿಲ್ಲಲಿ ಎಂಬುದು ಪ್ರಭುಗಳಲಿ
ನನ್ನರಿಕೆ.

ಕವಿಶೇಖರ.— ನನ್ನ ಮನಕೂ ಅಂತೆ ಎನಿಸುತಿದೆ.

ಪ್ರಭು.—ಏಕೆ ಋತ್ವಿಕರೆ, ಕವಿಶೇಖರರೆ ? ಕವಿಭೃತ್ಯ
ಕವಿಭೃತ್ಯ ಎಂಬ ಕವಿನಾಮವನು ವಹಿಸಿಹುದು
ಬರಿಯ ವೇಷಕೆ ಅಲ್ಲ. ಕವಿಭೃತ್ಯ ಕವಿ ತಾನು

ಕವಿಭೃತ್ಯ ಅನಿತೆ ಎಂಬುದ ಚೆನ್ನ ತಿಳಿದಿಹರು.
ಅವರ ಕವಿತೆಯು ಯಾರೆ ಲಘುವಾಗಿ ಟೀಕಿಸಲು
ಅವರು ಬೇಸರಗೊಂಬುದಿಲ್ಲ. ಈ ಮೊದಲಿಂದು
ಕಾಳಿದಾಸರಿಗೆ, ಗೋಷ್ಠಿಯ ಹಿರಿಯರಾಡಬಹ,
ಗುಣವ ಹೊಗಳುವ ಮಾತು, ಕೊರೆಯ ತೋರುವ ಮಾತು,
ಎಲ್ಲವೂ ಬಲ್ಲವರು ಗೆಯ್ವ ಆಶೀರ್ವಾದ
ಎಂದು ವಿವರಿಸಿದೆವೇ, ಅದು ನಮಗೆ ಸಲ್ಲುವುದು.
ಚರ್ಚೆ ನಡೆಯಲಿ.

ಯುಕ್ತಿಕೆ.— ಚಿತ್ತ.

ಕವಿಶೇಖರ.— ಪ್ರಭುಚಿತ್ತ.

ಪ್ರಭು.— ಕವಿಗಳೇ,
ವನಮಾಲ ಕವಿಗಳಿಗೆ ನಿಮ್ಮ ಬಿನ್ನಪವೇನು ?

ಕಾಳಿದಾಸ.—ಮೊದಲಿನಲಿ ಇದು ಪ್ರಭು. ನಮಗೆ ಆಶ್ರಯರಾದ
ಪ್ರಭುವರರ ಕೃತಿಯ ಹೊಗಳುವ ಆಶ್ರಿತರು ನಾವು
ಮಾತಿನಲಿ ಹಾಳತವನಿರಿಸಿಕೊಂಬುದು ಒಳಿತು.
ತಪ್ಪಿದೆವೆ, ಕೇಳುವರು, ಇವರು ಸುಳ್ಳೇ ಹೊಗಳಿ
ಪ್ರಭುವನೊಲಿಸುತಲಿಹರು ಎಂದು ಶಂಕಿಸಬಹುದು.

ಶರ್ಕರಕ.—ಎಸೆ ಎನ್ನ ಮೆಚ್ಚಿಕೆ ಮೃಷಾಸ್ತುತಿ ?

ಕಾಳಿದಾಸ.— ಅಲ್ಲ.
ಅಲ್ಲವೆಯೆ, ಅಹುದೊ ಎಂಬುದಕೆ ಎಡೆ ನೀಡುವುದು.
ಪ್ರಭು ತಮ್ಮ ಹೊಗಳಲೆಂದೇ ಕವಿಗಳನಿಬರನು
ಸಭೆಯಲಿರಿಸಿಹರೆಂದು ವೈರಿಜನ ದೂರಿದರು.
ದೂರಿಗೆ ನಿವಾರಣೆ ? ಈ ಅಪಾಯವ ನೆನೆದು
ನಮ್ಮ ಮಾತಲಿ ನಾವು ಮಿತಿಯ ಪಾಲಿಸಬೇಕು.

ಪ್ರಭು.—ಮಿತ ಎಲ್ಲ ಹೊತ್ತಲೂ ಯುಕ್ತ. ಕವಿಶೇಖರರೆ ?

ಕವಿಶೇಖರ.—ಅಹುದು ಪ್ರಭು.

ಪ್ರಭು.— ಕಾಳಿದಾಸರೆ, ಉಳಿದ ಬಿನ್ನಪ.

ಕಾಳಿದಾಸ.—ಇದು ಪ್ರಭು. ಈಗ ನಾ ಸಾದಲೆಳಸುವ ನನ್ನ
ಬಿನ್ನಪವ, ಕವಿಭೃತ್ಯ ಕವಿಗಳೀ ರಚನೆಯನು
ಕುರಿತೊಂದು ಟೀಕೆ, ಎಂದೆಣಿಸಬಾರದು ಎಂದು
ಬೇಡುವೆನು. ಕವಿಭೃತ್ಯರನು ಅಲ್ಲ, ಇನ್ನಾವ
ಕವಿಯನೇ ಕುರಿತರೂ ನವಿಶ್ಮಾ ನ ಭೂತೋ
ನ ಭವಿಷ್ಯತಿ ಎಂಬ ವಾಕ್ಯ ಅನುಚಿತವಹುದು.
ಈ ಅನೌಚಿತ್ಯ ಇನಿತು ಸ್ಪಷ್ಟ. ಇದ ನಾನು
ವಿವರಿಸುವುದೇ ಬೇಡ ಎನಿಸುತಿದೆ.

ಪ್ರಭು.— ನಿಮ್ಮೆಣಿಕೆ
ಸುಸ್ಪಷ್ಟವೇ ಸಾಧು. ಆದಿಕವಿ ವಾಲ್ಮೀಕಿ,
ವ್ಯಾಸಕವಿ, ಇವರನೂ ಮೀರಿಸಿಹನೀಕವಿ
ಎಂದು ಒಬ್ಬನ ನಾವು ಈ ದಿವಸ ವರ್ಣಿಸಲು
ವರ್ಣನೆ ಅಸಾಧು ಅಹುದು. ಇದು ಸುಸ್ಪಷ್ಟ.

ಕಾಳಿದಾಸ.—ಪ್ರಭುಗಳೀ ನನ್ನ ಮನದಾತಂಕವನು ಇಂತು
ಬಿತ್ತರಿಸಿ ಒಪ್ಪಿಗೆಯ ಸೂಚಿಸುತಲಿಹುದು ಇದು
ಈ ಆಶ್ರಿತನ ಭಾಗ್ಯ. ಇನ್ನು ನ ಭವಿಷ್ಯತಿ
ವಾಕ್ಯವನು ನೋಡಿರಿ. ಬ್ರಹ್ಮ ಈ ಮುನ್ನೀನ
ನಿರ್ಮಿಸಿದನವನಿಲ್ಲ ನಾವು ಬಲ್ಲೆವು ಎಂದು
ಒಪ್ಪಿದೆವು. ಆದರೂ ಮುಂದೆ ಅವನೇನೇನ
ನಿರ್ಮಿಸಲುಬಹುದಿದನು ನಾವಾರು ಬಲ್ಲೆವು?
ವ್ಯಾಸ ವಾಲ್ಮೀಕಿಗಳ ಮೀರಿಸುವ ಕವಿ ಒಬ್ಬ
ಮುಂದೆ ಬರಬಹುದಲ್ಲ.

ವನಮಾಲ.— ಮುಂದೆ ಏತಕೆ, ಅವನು
ಈಗಳೀ ಬಂದಿಹನು.

ಕಾಳಿದಾಸ.— ತಮ್ಮ ಅರ್ಥವ ನಾನು
ಊಹಿಸುವುದಿಲ್ಲ. ಕವಿ ಯಾರು, ಅದ ತಿಳಿಸಿರಿ.
ಆಮೇಲೆ ನನ್ನ ಬಿನ್ನಪವ ಮುಂದರಿಸುವೆನು.

ವನಮಾಲ.—ಬೇರೆ ಯಾರನು ? ನೀನೇ.
ಮೌಕ್ತಿಕ.— ಕವಿಗಳೇ.
ಕವಿಶೇಖರ.— ಏನು
ವನಮಾಲ ಕವಿ ಮಹೋದಯ ?
ಕಾಳಿದಾಸ.— ಪೂಜ್ಯ ಹಿರಿಯರೇ,
ತಮಗೆ ನನೆನೆಸಿ ಇನಿತು ಅಕ್ಕರೆ, ಅತ್ಯಲ್ಪ
ಕವಿ ನಾನು ನಿಮ್ಮ ಈ ಅಕ್ಕರೆಯ ಕಣ್ಣಿಗೆ
ತುಂಬ ಹಿರಿದಾಗಿ ಕಾಣುತಲಿಹೆನು. ಅಕ್ಕರೆಯ
ಗುರುತರದ ದೋಷ ಇದು. ವಾತ್ಸಲ್ಯ ಹೆಚ್ಚಿತೋ
ನೋಡುವರ ಕಣ್ಣು ಮಂಜಾಗುವುದು, ಕಿರಿ ಹುರುಳು
ಹಿರಿದಾಗಿ ಕಾಣುವುದು. ನನ್ನ ಕುರಿತಕ್ಕರೆಯ
ಕೊರೆ ಮಾಡಿಕೊಂಡು ದೃಷ್ಟಿಯ ತಿದ್ದಿಕೊಳ್ಳಿರಿ.
ನಾ ಮಂದ ಕವಿ, ಯಶಃ ಪ್ರಾರ್ಥಿ, ಎಂದವ ನಾನು,
ತಮ್ಮ ಅಕ್ಕರೆ ನುಡಿಯ ದಿಟವೆಂದು ಭಾವಿಸಿ
ನಾನು ವಾಲ್ಮೀಕಿ ವ್ಯಾಸರಿಗಿಂತ ಹಿರಿಯನು
ಎನ್ನುವೆನೊ ಎಂಬ ಭಯ ಯಾರಿಗೂ ಬೇಡ. ಆ
ಮಾತು ಅಂತಿರಲಿ. ಈ ನಭವಿಷ್ಯತಿ ವಾಕ್ಯ
ಅದರ ಮೊದಲಿನ ನ ಭೂತೋ ವಾಕ್ಯದಂತೆಯೇ
ಔಚಿತ್ಯದಿಂದ ತಪ್ಪಿದೆ ಎಂದು ತೋರುವುದು.
ಬಹು ಚೆನ್ನ ಎಂಬ ಅರ್ಥದ ಅತಿಶಯೋಕ್ತಿ ಇದು
ಎಂದು ತರಬಹ ಸಮರ್ಥನೆ ಇಲ್ಲಿ ಸಲ್ಲದು.
ಈ ಉಕ್ತಿ ಬರಿಯ ಅತಿಶಯದ ಎಲ್ಲೆಯಲಿಲ್ಲ.
ಎಲ್ಲೆ ಅದ ಮೀರಿ ಅತಿರೇಕವನು ಮುಟ್ಟಿಹುದು.
ಪ್ರಭು.—ವಾಕ್ಯದ ಅನೌಚಿತ್ಯ ಸುಸ್ಪಷ್ಟ. ನೀವಿದನು
ಒಪ್ಪುವಿರಿ ಅಲ್ಲವೇ, ಶರ್ಕರಕ ಕವಿಗಳೇ ?
ಶರ್ಕರಕ.—ಕವಿ ಸಾರ್ವಭೌಮರನುಶಾಸನವನೊಪ್ಪದೆ
ಸಾಮಾನ್ಯ ಕವಿ ನಾನು ಬೇರೆ ಮಾಡುವೆನೇನ ?

ಪ್ರಭು.—ಒಳ್ಳಿತು. ಕಾಳಿದಾಸರೆ, ತಮ್ಮ ವಾದವನು
ಯಾರೆ ಆಗಲಿ ಒಪ್ಪಬೇಕು. ಕಾವ್ಯವ ಕುರಿತು
ಇನಿತು ವಿವರವನು ಗೋಷ್ಠಿಗೆ ಇನಿತು ಚೆನ್ನವೇ
ತಿಳಿಸಿರುವ ಕವಿಸಾರ್ವಭೌಮ ಹಿರಿಕವಿಗಳಿಗೆ
ಕಾವ್ಯ ಲೋಕದ ಒಬ್ಬ ಸಾಮಾನ್ಯ ಪ್ರಜೆ ನಾನು
ನಮ್ಮ ಗೋಷ್ಠಿಯು ಪರದ ವಂದನೆಯ ಸಲಿಸುವೆನು.

ಕಾಳಿದಾಸ.—ಈ ಅನುಗ್ರಹಕಾಗಿ ಪ್ರಭುಗಳಿಗೆ ವಂದನೆ.
ಈಗ ಪ್ರಭುಗಳ ಸನ್ನಿಧಾನದಲಿ ನಾನೊಂದು
ನಮ್ರ ವಿಜ್ಞಾಪನೆಯ ಗೆಯ್ಯ ಬಯಸುತಲಿಹೆನು.
ಅದಕೆ ಅನುಮತಿ ನೀಡಬೇಕು.

ಪ್ರಭು.— ನೀಡಿದೆ; ಹೇಳಿ.

ಕಾಳಿದಾಸ.—ಪ್ರಭುಗಳು ಉದಾರ ವಾತ್ಸಲ್ಯ ಭರದಲಿ ಅಂದು
ನನಗೆ ದಯಪಾಲಿಸಿದ ಹಿರಿದಾದ ಬಿರುದು ಇದು,
ಕವಿಸಾರ್ವಭೌಮ ಎಂಬುದು, ನನ್ನ ಯೋಗ್ಯತೆಗೆ
ಮೀರಿದುದು. ಇದು ನನಗೆ ಆ ದಿನವೆ ತೋರಿತು.
ತೋರಿಯೂ, ಪ್ರಭುಗಳ ಅನುಗ್ರಹವ ನಾನೊಲ್ಲೆ
ಎಂದು ಒರೆಯುವುದೆ ಉನ್ನತ ದಾರಿ ಕಾಣದೆ
ಅದನಂದು ಒಪ್ಪಿಕೊಂಡೆನು. ಈಗ ಕಾಣುತಿವೆ,
ಇಷ್ಟರಾದವರು ಇದ ನೆನೆದು ಸುಖ ಪಡುವಂತೆ
ಇತರರಿದರಿಂದ ಬೇಸರ ಪಡುವರೆಂಬುದು.
ಬೇಸರದ ಹೊತ್ತಿನಲಿ ಹಿರಿಯರೇ ಈ ಬಿರುದ
ವ್ಯಂಗ್ಯದಲಿ ಬಳಸುವರು; ತಮ್ಮೊಳಗೆ ನೋಯುವರು,
ಕೊಂಕು ನುಡಿಯಿಂದೆನ್ನ ನೋಯಿಸಲು ತೊಡಗುವರು.
ಪ್ರಭು ತಮ್ಮ ಮನ ನಿಷ್ಕಳಂಕ, ನಿರ್ಮಲ. ತಮ್ಮ
ಅಂತರ್ಯದಲಿ ಕಲ್ಮಷದ ಲೇಪ, ಕಲೆ, ಇಲ್ಲ.
ಇಂತಿರುತ ತಾವು ಕವಿಸಾರ್ವಭೌಮರು ಎಂದು
ನನ್ನ ಕರೆಯುವ ವೇಳೆ ಕೇಳುವರು, ಪ್ರಭು ಇವರು

ವ್ಯಂಗ್ಯದಲಿ ನುಡಿದರೋ, ಎಂದು ಶಂಕಿಸಲಹುದು.
ಈ ಶಂಕೆ ನನ್ನ ಕಿರಿಯನ ಮಾಡುವುದರೊಡನೆ
ಪರಿಶುದ್ಧ ಮಾನಸದ ತನುಗೆ ಕುಂದನು ತಹುದು.
ನನಗೆ ಇದು ಹಿರಿದೊಂದಪಾಯ ಎಂದೆನಿಸುತಿದೆ.
ಆದಕಾರಣ ನನಗೆ ತಮ್ಮನುಗ್ರಹದ ಈ
ಬಿರುದೀಗ ಬೇಡವೆನ್ನಿಸುತಿಹುದು. ಆದ ನಾನು
ಸನ್ನಿಧಾನಕೆ ಮರಳಿ ಒಪ್ಪಿಸಲು ಬಯಸುವೆನು.
ಪ್ರಭು ಇದ ಪ್ರತಿಗ್ರಹಿಸಿ ನನ್ನ ಕಾಪಿಡಬೇಕು.

(ಎಂದು ಪ್ರಭುವಿನ ಬಳಿಗೆ ಹೋಗಿ ಬಿರುದಿನ ಹಾರವನ್ನು ಅವನ ಪಾದದ ಬಳಿ ಇಟ್ಟು ಹಿಂದಿರುಗಿ ಪೀಠದ ಬಳಿ ನಿಲ್ಲುತ್ತಾನೆ.)

ಋತ್ವಿಕ.—ಕಾಳಿದಾಸರೆ,

ಕವಿಶೇಖರ.— ಕವಿಗಳೇ,

ಪ್ರಭು.— ಕವಿಗಳೇ,

ಕಾಳಿದಾಸ.— ಪ್ರಭು,

ಇಂತುಗೆಯ್ಯದಿರೆಂದು ತಾವೆಲ್ಲರೂ ನನಗೆ
ಆಜ್ಞೆ ಮಾಡುವಿರಿ. ನಾ ಬಲ್ಲೆ. ಆಜ್ಞೆಯ ನಾನು
ಉಲ್ಲಂಘಿಸಲೆ ಬೇಕು. ವಿಧಿ ಇಲ್ಲ. ಇಂತಿರುತ
ಮಾತು ಮಾತನು ಬೆಳಸಿ ಇಲ್ಲಿ ನಿಲುವುದು ನನಗೆ
ಬೇಡವೆನ್ನಿಸುತಿಹುದು. ಗೋಷ್ಠಿಯಲಿ ಪ್ರಭುಗಳು
ಮೂರ್ತರಾಗಿಹ ವೇಳೆ ಬೇರೆಯುವರದ ಬಿಟ್ಟು
ತೆರಳುವುದು ಆಚಾರ ಅಲ್ಲ ಎಂಬುದು ತಿಳಿದೂ
ತಮ್ಮ ಅಪ್ಪಣೆ ಬೇಡಿ ಸಭೆಯಿಂದ ಹೊರಡುವೆನು.
ನನ್ನ ಮನ್ನಿಸಿರಿ. (ಎಂದು ಪ್ರಭುವಿಗೆ ಕೈಮುಗಿದು ಋತ್ವಿಕನ ಅಡಿ ಮುಟ್ಟಿ ನಮಸ್ಕಾರ ಮಾಡಿ ಉಳಿದೆಲ್ಲರಿಗೂ ಕೈಮುಗಿದು ಹೊರಟು ಹೋಗುತ್ತಾನೆ.)

ಪ್ರಭು.— ಹೊರಟುಹೋದರು ಇವರು.

(ಬಿರುದಿನ ಹಾರವನ್ನು ಕೈಯಿಂದ ಎತ್ತಿ ನೋಡುತ್ತಾನೆ.)

ಕವಿಶೇಖರ.—ಅಹುದು ಪ್ರಭು. ಹೊರಟರು. ಅತ್ಯಂತ ಧೀರಚೇತನರಿವರು.

ಪ್ರಭು.—ಗೋಷ್ಠಿಯನು ಮುಗಿಸಿರಿ.

ಕವಿಶೇಖರ.— ಅಪ್ಪಣೆ.

(ಇತರರಿಗೆ) ಎಲ್ಲರೂ
ಗೃಹಗಳಿಗೆ ದಯಮಾಡಿ. ಪ್ರಭುಗಳಪ್ಪಣೆ ಆಯ್ತು.

(ಎಲ್ಲರೂ ಹೊರಡುತ್ತಾರೆ.)

ಎಲ್ಲರೂ ಹೊರಟಿಹರು ಪ್ರಭುಗಳೆ.

ಪ್ರಭು.— ಋತ್ವಿಕರೆ,

ಋತ್ವಿಕ.—ಪ್ರಭು,

ಪ್ರಭು.— ತಮ್ಮ ಸೂಚನೆಯನೊಪ್ಪಿರಲು ಚೆನ್ನಿತ್ತು.

ಋತ್ವಿಕ.—ಪ್ರಭುಗಳ ವಿರುದ್ಧ ಮನ ಎಲ್ಲರಿಗು ಇಹುದಿಲ್ಲ.
ಮೇಲಾಗಿ ಕಾಳಿದಾಸರ ಕುರಿತ ಇನ್ನೊಂದು
ವಿವರ ಇದೆ. ಅದ ಸದ್ಯ ತಿಳಿಸಬೇಡಿರಿ ಎಂದು
ಬಿನವಿಸಿಹರು. ಅದರ ಕಾರಣದಿಂದ ಸಹ ನಾನು
ಮಾತು ಕೆಟ್ಟೀತೆಂಬ ಭೀತಿಯಲಿ ಆ ರೀತಿ
ಅರಿಕೆ ಮಾಡಿದೆನು.

ಪ್ರಭು.— ತಾವೀ ಜನರ ಬಲ್ಲಿರಿ.
ನಾವನಿತು ಇವರ ಬಲ್ಲವರಲ್ಲ. ಅದು ಇರಲಿ.
ಕಾಳಿದಾಸರ ಸಮಾಧಾನಪಡಿಸುವ ಮಾರ್ಗ
ಯಾವುದದ ಯೋಚಿಸಿರಿ. ಕವಿಶೇಖರರ ಕೇಳಿ.
ಹಿರಿಯರಿದ್ದರು ತಾವು ಎಂತು ಬೆಸಸುವಿರಂತು
ನಡೆಯುವರು ನಾವು.

ಕವಿಶೇಖರ.— ಕವಿಗಳು ಹೊರಟು ಹೋದುದು
ಕೋಪದಿಂದಲ್ಲ ಪ್ರಭು. ಹೊರಟಂದು ಅವರ ಮುಖ
ಅಕ್ಷುಬ್ಧವಾಗಿತ್ತು. ವ್ಯಂಗ್ಯವನು ನುಡಿದವರ
ಮನಕೆ ಸುಖ ತರಲೆಂದು ಅವರಿಂತು ನಡೆದಿಹರು.
ರಾತ್ರಿ ಕಳೆಯಲಿ; ಉದಯವಾದುದೇ ನಾವವರ
ಕಂಡು, ಬೇಸರ ಬೇಡ ಎಂದವರ ಬೇಡುವೆವು.

ಸನ್ನಿಧಾನವ ಕಾಣಿರೆಂದು ಸೂಚಿಸಿ ಅವರ
ಪ್ರಭುಸನ್ನಿಧಿಗೆ ನಾವೆ ಕರೆತಹೆವು.

ಪ್ರಭು.— ಇದು ಸರಿಯೆ
ಋತ್ವಿಕರೆ?

ಋತ್ವಿಕ.— ಇದು ನನಗೆ ಸರಿಯಲ್ಲ ಎನಿಸುತಿದೆ,
ಪ್ರಭುಗಳೇ. ಈಗಳೇ ಬಲ್ಲ ಜನ ಅವರೆತ್ತ
ಹೋಗಿಹರು ನೋಡುವುದು ಒಳ್ಳಿತು. ಬೇಸರದ
ಲೇಶವನು ಅವರು ಸಹಿಸುವದಲ್ಲ. ಇಲ್ಲಿಂದ
ಎತ್ತಲಾದರು ಹೊರಟು ಹೋದರೂ ಹೋದರೆ.
ಅವರು ಊರನು ಬಿಡದ ತೆರ ನೋಡಿಕೊಳ್ಳುವುದು
ಒಳ್ಳಿತು.

ಪ್ರಭು.— ಅಂತಿರಲು, ಕವಿಶೇಖರರೆ, ತಾವು
ಒಡನೆಯೇ ಕವಿಗಳಿರುವೆಡೆ ಯಾವುದೆಂದರಿತು
ಅವರ ಈ ರಾತ್ರಿಯೇ ನಮ್ಮೆಡೆಗೆ ಕರೆತರಲು
ಯತ್ನ ನಡೆಸಿರಿ.

ಕವಿಶೇಖರ.— ಆಯ್ತು ಪ್ರಭು.

ಪ್ರಭು.— ತಾವು ಬರುವುದನು
ಎದುರು ನೋಡುತ ನಾವು ಚಂದ್ರಸಾಲೆಯೊಳಿಹೆವು.
(**ಋತ್ವಿಕ, ಕವಿಶೇಖರ,** ಕೈಮುಗಿದು **ಹೊರಡುತ್ತಾರೆ.**)
ಶರ್ಕರಕ, ವನಮಾಲ, ನನ್ನ ಕವಿತೆಯ ಮಾತ
ಬೇಕೆಂದೆ ಎತ್ತಿದರು. ನನ್ನ ಮನ ಕೆಡಿಸಿದರು.
ಪರಿಶುದ್ಧ ಮನದ ನಾನವರ ತಂತ್ರಕೆ ಸಿಕ್ಕಿ,
ನನ್ನ ಆಶ್ರಯದ ಕವಿ ನನ್ನ ಕೃತಿಯನು ಕುರಿತು
ಇನಿತು ದಿಟ್ಟದ ನುಡಿಯ ನುಡಿಯುತಿಹನೇ, ಎಂದು
ಇನಿಸೇ ಅಸೂಯೆ ಲೇಪಿಸಿದ ಭಾವನೆಯಿಂದ
ಕವಿಸಾರ್ವಭೌಮ ಪದವನು ತಪ್ಪಿ ಬಳಸಿದೆನು.
ಕಾಳಿದಾಸರ ಬುದ್ಧಿ ನನ್ನ ಬುದ್ಧಿಗು ಮಿಕ್ಕು

ಸೂಕ್ಷ್ಮವಾದುದು ಎಂದು ತಿಳಿದಿದ್ದು ಮರೆತೆನೇ
ನನ್ನಲದು ತಪ್ಪಾಯ್ತು. ಆ ತಪ್ಪಿಗಿದು ಶಿಕ್ಷೆ.

ಗೊತ್ತುಗಾತಿ.—(ಬಂದು) ಪ್ರಭು, ರಾಣಿಯವರು ತಮ್ಮನು ಕಾಣಬೇಕೆಂದು ಬಯಸುತಿರುವರು.

ಪ್ರಭು.— ಅಂತೆ? ಈಗಲೇ ಬಂದೆ, ನಡೆ.

(ಎಂದು ಹೊರಡುತ್ತಾನೆ. ಗೊತ್ತುಗಾತಿ ಹಿಂದೆ ನಡೆಯುತ್ತಾಳೆ.)

ಸ್ಥಾನ ೨

ಅರಮನೆ. ರಾಣಿವಾಸ. ರಾಣಿ, ಪ್ರಭು.

ರಾಣಿ.—ಹಗಲೆಲ್ಲ ನಿಮ್ಮನಿಲ್ಲಿಗೆ ಕರೆಸಲೆಂದು ನಾ
ಕಾದು ಸೋತೆನು. ನಿಮಗೆ ಬಿಡುವಿಲ್ಲ. ಇದೆ ಈಗ
ಬಿಡುವು ದೊರೆತಿದೆ. ನೀವು ತುಂಬ ದಣಿದಿರುವಿರಿ.
ದಣಿದವರ ಮತ್ತಷ್ಟು ದಣಿಸುವುದು ತರವಲ್ಲ.
ಇರುತ ದಣಿಸದೆ ಬಿಡುವ ಎನಲು ಆಗುತಲಿಲ್ಲ.

ಪ್ರಭು.—ಏನು ಸಂಗತಿ? ಈ ಉಪೋದ್ಘಾತವೇ ಇನಿತು
ದೀರ್ಘವಾಗಿದೆ, ಇದರ ಹಿಂಬದಿಗೆ ಇನ್ನೆಂಥ
ಭೀಕರ ಪ್ರಕರಣವ ಕಾಣುವೆನೊ ಎಂದು ನಾ
ಅಂಜಿಹೆನು. ಹೇಳಿರಿ. ಏನು ಸಂಗತಿ?

ರಾಣಿ.—(ನಗುತ್ತ) ಇದು.
(ಬದಿಯ ಅರೆಯ ಕಡೆಗೆ) ತಂಗಿ ಮಾಲತಿದೇವಿ, ಬನ್ನಿರಿ.

ಮಾಲತಿ.—(ಒಳಗಿಂದ) ಬಂದೆ
(ಎಂದು ಬರುತ್ತಾಳೆ.)

ಪ್ರಭು.—ಯಾರಿವರು? ನಮ್ಮ ಕುವರಿಯ ಕಿರಿಯ ಓರಗಿತಿ
ಭರತಪುರದರಗುವರಿ ಕಿರಿಯಾಕೆಯಂತಿಹರೆ?
ಇವರೀಗ ಇಲ್ಲಿ ಬಂದಿಹುದೇನು?

ರಾಣಿ.— ಕಿರಿಯಾಕೆ
ಮಂಜರೀದೇವಿ. ಈ ಚೆಲುವೆ ಆಕೆಯ ಅಕ್ಕ,

ಮಾಲತೀದೇವಿ. ಕವಿ ಕಾಳಿದಾಸರ ರಾಣಿ.

ಪ್ರಭು.—ಕಾಳಿದಾಸರ ರಾಣಿ ? ಕಾಳಿದಾಸರು ರಾಜ ?

ರಾಣಿ.—ಅಹುದು.

ಪ್ರಭು.— ಅಹುದೇ ? ಯಾವ ಒಗಟಿಗಳ ಮಾತು ಇದು ?
ಭರತಪುರದರಗುವರಿ ಹಿರಿಯಾಕೆಯನು ನಮ್ಮ
ರಾಮಗಿರಿ ಅರಗುವರ ಮದುವೆಯಾದರು ಎಂದು,
ಮದುವೆಯಾದವರು ಮಾರನೆ ದಿನವೆ ಆಕೆಯನು
ತೊರೆದು ಹೋದರು ಎಂದು, ಆ ದುಃಖದಲಿ ಆಕೆ
ಕಿಚ್ಚ ಹೊಂಡವ ಹೊಕ್ಕು ತೀರಿಕೊಂಡರು ಎಂದು,
ಜನ ಹೇಳಿತಲ್ಲವೇ ?

~~**ಪ್ರಭು.**—~~ ಹೇಳಿತು.

ರಾಣಿ.— ಕಿಚ್ಚ ಕಥೆ
ದಿಟವಲ್ಲ. ಅಂತೆಂದು ಸುದ್ದಿಯನು ಹರಡಿರೆ
ಭಾವ ಹಿಂದಿರುಗಿ ಬಹರೇನೊ ಎನ್ನುತ ಇವರ
ತಂಗಿ, ಮಂಜರಿ ತಾಯಿ, ಅದನು ಹುಟ್ಟಿಸಿದರು.
ಆ ಭಾವನೇ ಇವರು ; ರಾಮಗಿರಿಯರಗುವರ
ನಿಮ್ಮ ಕವಿ ಕಾಳಿದಾಸರು.

ಪ್ರಭು.— ಕಾಳಿದಾಸರು
ರಾಮಗಿರಿಯರಗುವರ ? ಮುಖ ಮರೆಸಿಕೊಂಡವರು
ಏಕೆ ಈ ಕವಿ ಎಂಬ ಆಟವನು ಆಡಿದರು ?
ಗುರುತರಿಯದಿರಲೆಂದು ಇರಬೇಕು. ಆಮೇಲೆ ?

ರಾಣಿ.—ನೀವು ಕಳುಹಿಸಿದ ಋತುಸಂಹಾರ ಕಾವ್ಯವನು
ನೋಡಿದುದೆ, ರಾಮಗಿರಿ ಗುರು, ಇದರ ಕವಿ ನಮ್ಮ
ಅಣ್ಣಯ್ಯನೇ, ಬೇರೆಯವರು ಯಾರೂ ಅಲ್ಲ,
ಎಂದು ಹಟಮಾಡಿ ಇವರಿಗೆ, ನಿನ್ನ ಪತಿ ನಿನ್ನ
ತೊರೆದೋಡಿ ಹೋದನೇ, ಅವನು, ಉಜ್ಜಯಿನಿಯಲಿ
ತಾನೊಬ್ಬ ಕವಿ, ಹೆಸರು ಕಾಳಿದಾಸ, ಎಂದು

ತಲೆ ಮರೆಸಿಕೊಂಡಿಹೆನು, ಬಾ ಅಲ್ಲಿ ಹೋಗುವ,
ಗಂಡನನು ಕಂಡು ತಪ್ಪಿರಲು ಮನ್ನಿಸು ಎಂದು
ನಿನ್ನೊಡನೆ ಬಾಳೆಂದು ಬೇಡು ಬಾ ಎಂದರು.
ಮಾಲತೀ ದೇವಿ ಅವರೊಡನೆ ಇಲ್ಲಿಗೆ ಇಂದೆ
ಬೆಳಗಾಗ ಬಂದರು.

ಪ್ರಭು.— ಅಯ್ಯೋ ದೈವವೆ, ಇವರು
ಬೆಳಗಾಗ ಬಂದರು ; ಸಂಜೆಯಲಿ ಕವಿಗಳು
ಗೋಷ್ಠಿಯಲಿ ಸಲ್ಲಾಪ ತಪ್ಪಾಗಿ, ಕವಲೊಡೆದು,
ವಿರಸ ಮೂಡಿರೆ, ತುಂಬು ಬೇಸರದಿ ಸಭೆಯಿಂದ
ಹೊರಟು ಹೋದರು.

ರಾಣಿ.— ಅಹುದು. ಬದಿಯ ಮಂಟಪದಿಂದ
ನಾವು ಅದ ನೋಡಿದೆವು.

ಪ್ರಭು.— ಎತ್ತ ಹೋದರು ನೋಡಿ,
ಅವರ ಕರೆತನ್ನಿರಿ, ಎಂದು ಆಣತಿ ಮಾಡಿ
ಜನರನಟ್ಟಿಹೆವು.

ರಾಣಿ.— ಕರೆತಂದರೇ ಒಳಿತಾಯ್ತು.
ಇಲ್ಲವೆನೆ ?

(ಮಾಲತಿ ಕಣ್ಣೀರು ಹಾಕುತ್ತಾಳೆ.)

ಪ್ರಭು.— ನಮ್ಮ ಮಾತಿದನೆಲ್ಲ ಕೇಳುತ
ನಮ್ಮ ಮಗು ಈಕೆ ಕಲ್ಲಲಿ ಕಡೆದು ನಿಲ್ಲಿಸಿದ
ಪ್ರತಿಮೆಯೆಂಬಂದದಲಿ ಎವೆಯಿಕ್ಕದಿರುವರೆ.
ಮಾತನಾಡಿಸಿ ಇವರ.

ರಾಣಿ.— ತಂಗಿ ಮಾಲತಿ, ನೀವು
ಧೈರ್ಯ ಕೆಡುವುದು ಬೇಡ. ಹತ್ತು ಕಡೆ ಹೋಗಿರುವ
ಹತ್ತು ಜನರಲಿ ಯಾರೂ ಅವರ ಕಾಂಬುದೆ ದಿಟ
ಕಂಡರೋ ಕರೆದೆ ತರುವರು. ಚಿಂತೆಯನು ಬಿಡಿರಿ.

ಮಾಲತಿ.— ಚಿಂತೆಯನು ಬಿಟ್ಟಾಯಿತಕ್ಕ. ನಾನಿನ್ನವರ

ಕಾಣುವೆನು ಎಂಬಾಸೆಯನು ತೀರ ತೊರೆದಿಹೆನು.
ಆ ಬಾರಿ ಜೊತೆಗೆ ಕುಳಿತವರ ಮಾತಾಡಿಸಿದೆ.
ಅದುವೆ ಸಾಕಾಯ್ತುವರನಲ್ಲಿಂದ ಅಟ್ಟಲು.
ಈ ಬಾರಿ ನಾ ದೂರದಿಂದವರ ನೋಡಿದೆನು.
ಅದುವೆ ಸಾಕಾಯ್ತುವರನಿಲ್ಲಿಂದ ಅಟ್ಟಲು.
ಇನ್ನವರು ಬರುವರೇ? ನಾನವರ ನೋಡುವೆನೆ?
ಆ ಆಶೆ ಇನ್ನಿಲ್ಲ. (**ಮಂಜರಿ ಬರುತ್ತಾಳೆ. ಹಿರಿಯರಿಗೆ ಕೈಮುಗಿದು ಅಕ್ಕನ ಹತ್ತಿರಕ್ಕೆ ಓಡುತ್ತಾ**)

ಮಂಜರಿ.— ಏನಕ್ಕ ಅಳುತಿರುವೆ?
ಕವಿ ಭಾವ ಅಹುದಂತೆ. ಅವರಿಲ್ಲಿ ಇಹರಂತೆ.
ಅರಮನೆಯ ಬಾಗಿಲಲಿ ಒಡತಿಯನು ಕಂಡೆನು.
ಅವಳಿದನು ಹೇಳಿದಳು.

ಮಾಲತಿ.— ಅವಳು ಬಲ್ಲದು ಏನು
ಅದನವಳು ಹೇಳಿದಳು. ನೀ ಭಾವ ಎನ್ನುವರು
ಮತ್ತೆ ಎಲ್ಲಿಗೊ ಹೊರಟು ಹೋಗಿಹರು.

ಮಂಜರಿ.— ಅಯ್ಯೋ
(**ಎಂದು ಗೋಳಾಡುತ್ತಾಳೆ**)

ರಾಣಿ.—ಬಾ ತಾಯಿ ಮಂಜರಿ. ಅಳಬೇಡ, ಬಾ ತಾಯಿ.
ಯಾವಾಗ ಬಂದಿರಿ? ಜೊತೆ ಯಾರು? ಏನೆಂದು
ಬಂದುದು? ಏನನೂ ತಿಳಿಸದೆಯೆ ಬಂದಿಹಿರಿ.

ಪ್ರಭು.—(**ತನಗೇ**) ಒಂದೆ ಎರಕದಿ ಹುಯ್ದ ಎರಡು ಪ್ರತಿಮೆಗಳಂತೆ
ಕಾಣುವರು ಈ ಅಕ್ಕ ತಂಗಿಯರು. ಅಚ್ಚರಿ.

ಮಂಜರಿ.—ಅಕ್ಕ ಊರಿಂದ ಹೊರಡುವ ವೇಳೆ, ತಾನಿಂತು
ಹೊರಡುವಳು, ಇದಕಾಗಿ, ಎಂದು ನಮ್ಮಣ್ಣನಿಗೆ,
ಅಂತೆ ನನಗೆ, ಹೇಳಿ ಕಳುಹಿದಳು. ಇವಳಿಲ್ಲಿ
ಒಬ್ಬಳಾಗುವಳಲ್ಲ ಎಂದು ನಾ ಅಣ್ಣನನು
ಬೇಡಿ ಅವರೊಡನೆ ನಗರಿಗೆ ಬಂದು ಇವೆ ಈಗ

ಅರಮನೆಯ ಮುಟ್ಟಿದೆನು. ನಾವು ಮುಟ್ಟಿದ ಅದೇ
ಕ್ಷಣ ಅಣ್ಣ ಭರತಪುರದಿಂದ ಹೊರಟಿದ್ದವರು
ತಾವು ಸಹ ಅರಮನೆಯ ಮುಟ್ಟಿವರು. ಅವರಿಗೆ
ಒಡತಿ ಹೇಳಿದ ಮಾತ ತಿಳಿಸಿದೆನು. ಅಣ್ಣನಿಗೆ
ಎನಿತು ಸಂತೋಷ ಆದ ಹೇಳ ತೀರದು. ಎಲ್ಲ
ಬರಿದಾಗಿ ಹೋಯಿತೇ?

ಪ್ರಭು.— ಅಣ್ಮ, ಅಣ್ಣ, ಎಲ್ಲಿ?
(ರಾಣಿಗೆ) ಅವರನಿಲ್ಲಿಗೆ ಕರೆಸಿ.

ರಾಣಿ.— ಕರೆಸಿದೆ (**ಸೇವಕಿಯನ್ನು ಕರೆದು ಅಪ್ಪಣೆ ಮಾಡುತ್ತಾಳೆ. ಮಂಜರಿಯ ಪತಿ, ಅಣ್ಣ ಬರುತ್ತಾರೆ.**)

ಪ್ರಭು.—(ಅವರಿಗೆ) ದಯಮಾಡಿ,
ವಂದನೆ. ಸೌಖ್ಯವೇ?

ಅರಸ.— ವಂದನೆ. ತಾವೆಂತು?

ಕುಮಾರ.—ಸೌಖ್ಯ. ತಾವೂ ಸೌಖ್ಯವೇ?

ಅರಸ.— ತಂಗಿ, ಅಳು ಏಕೆ?

(**ಪ್ರಭು ಅವರನ್ನು ಹತ್ತಿರಕ್ಕೆ ಕರೆದು ಸಂಗತಿ ತಿಳಿಸುತ್ತಾನೆ.**)

ಕ್ಷೀಣ ಭಾಗ್ಯರು ನಾವು. ವಿಧಿ ನಮ್ಮನೀರೀತಿ
ಏಕೆ ಕಾಡುತಲಿಹುದೊ ಅದು ನನಗೆ ಕಾಣದಿದೆ.

(**ಸೇವಕ ಬಂದು ಕೈಮುಗಿದು ನಿಲ್ಲುತ್ತಾನೆ.**)

ಪ್ರಭು.—ಏನು?

ಸೇವಕ.— ಪ್ರಭುಗಳಲಿ ಬಿನ್ನಹ. ಕಾಳಿದಾಸರನು
ಎಲ್ಲೆಡೆಯು ಹುಡುಕಿ ಆಯಿತು. ಅವರು ದೊರೆತಿಲ್ಲ.
ಇದನರಿಕೆ ಮಾಡೆಂದು ಋತ್ವಿಕರು ಬೆಸಸಿದರು.

ಪ್ರಭು.—ಅಂತೆ? ಒಳ್ಳಿತು.

(**ಸೇವಕ ಹೋಗುತ್ತಾನೆ**)

ಮುಂದೆ ಏನ ಗೆಯ್ವುದು ಅದನು
ಯೋಚಿಸುವ ಬನ್ನಿರಿ. ನನ್ನಾಸೆ ಅಳಿದಿಲ್ಲ. (**ಎಂದು ಅರಸ ಅರಗುವರ ಇವರೊಡನೆ ಹೋಗುತ್ತಾನೆ.**)

ಮಾಲತಿ.—ಅಕ್ಕ.

ರಾಣಿ.— ಏನವ್ವ ?

ಮಾಲತಿ.— ನನಗೆ ಆ ಭಾಗ್ಯವಿರೆ
ನನ್ನಾಣ್ಮನನು ನನಗೆ ಮರಳಿ ತಂದು ಕೊಡೆಂದು
ದೇವರನು ಬೇಡಿ ವಾರದದಿನ ಮಹಾಕಾಳ
ಕ್ಷೇತ್ರದಲಿ ಹಾಡಸೇವೆಯನು ಸಲ್ಲಿಸೆ ನಾಳೆ
ತೊಡಗ ಬೇಕೆನ್ನುವೆನು. ಇದ ನನಗೆ ನಡೆಸಿಕೊಡಿ.

ರಾಣಿ.—ಎಂಥ ಯೋಚನೆ! ತುಂಬ ಒಳ್ಳೆ ಯೋಚನೆ, ತಾಯಿ.
ಈಗಲೇ ನಾನಿದನು ನಡಸಲಣಿಮಾಡುವೆನು.
ನಾಳೆಯೇ ತೊಡಗಿ.

ಮಂಜರಿ.— ನಾನೂ ಅಣ್ಮನೂ ನಿನ್ನ
ಜೊತೆಗೆ ಬರುವೆವು ಅಕ್ಕ.

ಮಾಲತಿ.— ಬನ್ನಿ, ನನ್ನೊಡನೆ ಇರಿ.

ರಾಣಿ.—ನಾವು ಸಹ ಆಮೇಲೆ ಬರುವೆವು. ಮಹಾಕಾಳ
ನಗರದುಪನಗರ ಎಂಬಂತದರ ಬದಿಯಲಿದೆ.
ಹೋಗುವುದು ಬರುವುದು ಬಹು ಸುಲಭ.

ಮಾಲತಿ.— ಸರಿ ಅಕ್ಕ.

ಸ್ಥಾನ ೩

ಗೋಷ್ಠಿ ಮುಗಿದ ಒಂದು ಗಳಿಗೆಯ ಮೇಲೆ. ಮಹಾಕಾಳಕ್ಕೆ ಹೋಗುವ ದಾರಿಯಲ್ಲಿ ಕಾಳಿದಾಸ.

ಕಾಳಿದಾಸ.—ಕವಿಸಾರ್ವಭೌಮ! ಪ್ರಭು ಬಿರುದ ಕೊಟ್ಟ ದಿನ
ಮನಕೆನಿತು ಸಂತಸ. ಅದೆ ಬಿರುದ ಕುರಿತಿಂದು
ಮನಕೆನಿತು ಹೇಸಿಕೆ. ಒಂದೆ ವಸ್ತುವ ಮನಸು
ಒಂದರೊಡನೊಂದು ಹೊಂದದ ಎರಡು ರೀತಿಯಲಿ
ಕಾಂಬುದು ವಿಚಿತ್ರ. ಬಿರುದನು ಕೊಟ್ಟ ಪ್ರಭು ತಾನೆ
ಅದ ಕುರಿತು ವ್ಯಂಗ್ಯ ನುಡಿವುದೆ? ತುಚ್ಛ ಮಾರ್ಗವಿದು.

ಕ್ಷುದ್ರ ಬುದ್ಧಿಯ ಮಾರ್ಗ. ಒಳ್ಳಿತು. ಪ್ರಭು ಇವನ
ಆ ಬಿರುದನಿವನಿಗೇ ಹಿಂದಿರುಗಿ ಕೊಟ್ಟವನ
ದರ್ಪವನು ಇಳುಹಿದೆನು. ಪರಿಶುದ್ಧ ಮನವೆಂದೆ.
ಪರಿಶುದ್ಧ ಅಲ್ಲ. ಸುಳ್ಳಾಯಿತೆ? ಅದೂ ಇಲ್ಲ.
ಪ್ರಭುವಾದವನ ಮನಸು ಪರಿಶುದ್ಧವಾಗಿರಲಿ
ಎಂದು ನಾ ಪ್ರಭು ಮನಕೆ ಮುಟ್ಟಿಸುವ ಪರಿಯೇನು?
ಸತ್ಯವೇ ಆದರೆಯು, ನಾ ಹಿರಿಯನೆಂದು ನೀ
ಹೇಳುವುದು ಬೇಡ, ಎಂದರು ನನಗೆ ಗುರು. ಅಂತೆ
ಸತ್ಯವೇ ಆದರೆಯು ತನ್ನ ಮಾತಿನಲಿ ಪ್ರಜೆ,
ಪ್ರಭುವಾದವನಿಗೆ ನೀ ನೀಚ ಎನ್ನಲು ತಗದು.
ಆಯಿತೇ, ಋತ್ವಿಕರು ಮೊದಲ ಸಲವೇ ನನಗೆ
ಎಚ್ಚರಿಕೆ ನುಡಿದರು. ನುಡಿದಂತೆ ಈ ನಮ್ಮ
ಕವಿಗಳೆನ್ನುವ ಜನರು ಎಂಥ ಈರ್ಷೆಯ ಜನ!
ಎಚ್ಚರಿಕೆಯನು ಕೇಳಿಯೂ ನನಗೆ ಇವರೀರ್ಷೆ
ಈ ಮಟ್ಟವನು ಮುಟ್ಟಬಹುದು ಎನ್ನಿಸಲಿಲ್ಲ.
ಸಾತ್ವಿಕರು ಇಬ್ಬರು, ಉದಾಸೀನರಿಬ್ಬರು,
ಕ್ಷುದ್ರರಿಬ್ಬರು. ಲೋಕ ಎಂತಂತೆ ಕವಿಜನ.
ಲೋಕದಲಿ ಒಂದಂಶ ಕವಿಲೋಕ. ಆ ಲೋಕ
ಎಂತಂತೆ ಈ ಲೋಕ. ಇವರ ಜೊತೆಯೊಳಗಿಹುದು
ಒಂದು ಕಣಜದಲೋ ಹಗೇವಿನಲೊ ಕುಳ್ಳಿರುತ
ಉಸಿರಾಡುವುದೆ ಕಷ್ಟ ಅಷ್ಟಂತೆ ಕಡು ಕಷ್ಟ.
ದೈವಕೃಪೆಯಿಂದ ಇದು ಇಂತು ಕೊನೆಗೊಂಡಿತು.
ಇನ್ನು ಮುಂದಿನ ದಾರಿ ಏನು ಯೋಚಿಸಬೇಕು.
ದ್ವಾರಕೆಗೊ ವಾರಣಾಸಿಗೊ ಹೋಗಿ ದೇವರೆಡೆ
ಮೂರು ತಿಂಗಳ ದಿನವ ಕಳೆಯೋಣ ಎನಿಸುತಿದೆ.
ಈ ರಾತ್ರಿಯನು ನಾಳೆ ದಿನವನು ಮಹಾಕಾಳ
ಕ್ಷೇತ್ರದಲಿ ಧ್ಯಾನದಲಿ ಕಳೆಯುವುದು. ಆ ಬಳಿಕ

ಯಾವ ರೂಪದಿ ದೈವ ಬಾ ಎಂದು ಕರೆಯುವುದು,
ಆ ರೂಪು ಇರುವೆಡೆಗೆ ಸಂತಸದಿ ಸಾರುವುದು.

ಅಂಕ ಏಳು

ಸ್ಥಾನ ೧

ಮಹಾಕಾಳ. ಮಾಲತಿ, ಮಂಜರಿ, ಅವಳ ಪತಿ ಕುಮಾರ. ಒಬ್ಬ ಅರ್ಚಕ.

ಮಂಜರಿ.—ಅರ್ಚಕರೆ, ಪೂಜೆಯಲಿ ನಮ್ಮ ಸೋದರಿ ಇವರು
ಸಂಗೀತ ಸೇವೆಯನು ಸಲ್ಲಿಸಲು ಬಂದಿಹರು.
ಇದನು ನಡೆಸಿರಿ ಎಂದು ನಿಮಗೆ ಅರಮನೆಯಿಂದ
ಪ್ರಾರ್ಥನೆಯ ಕಳುಹಿಹರು.

ಅರ್ಚಕ.— ಅಹುದು, ತಾಯಿ. ಪೂಜೆ
ಇನಿತರಲೆ ತೊಡಗುವುದು. ಅಕ್ಕ ಒಳಗಡೆ ಬರಲಿ.
ಸಂಗೀತಮವಧಾರಯ ಎಂದ ಸಮಯದಲಿ
ಸೇವೆಯನು ಸಲ್ಲಿಸಲಿ.

ಮಂಜರಿ.— ಏನಕ್ಕ ?

ಮಾಲತಿ.— ಆಯಿತು.
ಸನ್ನಿಧಿಗೆ ಹೋಗುವೆನು.

ಮಂಜರಿ.— ನಾನೂ ಕುಮಾರರೂ
ಸನ್ನಿಧಿಯ ಈ ಸುತ್ತಿನಲಿ ಇನಿಸು ನಡೆದಾಡಿ
ತಿರುಗಿ ಬರುವೆವು.

ಮಾಲತಿ.— ಒಳಿತು, ನಡೆದಾಡಿ ಬನ್ನಿರಿ.

ಸ್ಥಾನ ೨

ಆಲಯದ ಹಿಂಬದಿ. ಒಂದು ಸಣ್ಣ ಗುಡ್ಡ. ಮರಗಳು ಒಂದು ಉದ್ಯಾನದಲ್ಲಿ ಎಂಬಂತೆ ಬೆಳೆದಿವೆ. ಗುಡ್ಡದಲ್ಲಿ ಅಲ್ಲಲ್ಲಿ ಗುಹೆಗಳು. ಮಂಜರಿ, ಕುಮಾರ, ಸುತ್ತುತ್ತಾ ಒಂದು ಗುಹೆಯ ಬಳಿ ಬರುತ್ತಾರೆ.

ಮಂಜರಿ.—ತಾನಾಗಿ ಬೆಳೆದ ಕಾಡಿದು ಎನಿತು ಚೆನ್ನಿಹುದು.
ಹಿಂಬದಿಗೆ ಈ ಗುಡ್ಡ. ಇದರ ಚೆಲುವೇ ಚೆಲುವು.
ನಾಡದೇವರು ತಾನು ನೆಲೆಯಾಗಿ ನಿಲುವುದಕೆ
ತಗುವ ಚಂಪದ ಒಂದು ಎಡೆಯೆಂದು ಈ ಸ್ಥಳವ
ಆರಿಸಿಹನಪ್ಪುದು. ಕಾಡಲ್ಲ ಇದು. ಒಂದು
ಉಪವನ. ಮಹಾಕಾಳ ತನಗೆಂದು ನಿರ್ಮಿಸಿದ
ಚೈತ್ರರಥ ನಂದನಕೆ ಸಮನಾದ ಉಪವನ.
ಗುಹೆಗಳಲಿ ಯಾರಿಹರೊ?

(ಎಂದು ಗುಹೆಯ ಬಳಿ ಬಂದು)

ತಪಸಿ ಯಾರೋ ಸ್ತೋತ್ರ
ಏನನೋ ಹೇಳುತಿರುವರು.

(ಎಂದು ಒಳಕ್ಕೆ ಇಣಿಕಿ ನೋಡಿ,)

ಅಯ್ಯ, ನನ್ನರಸ,

(ಎಂದು ಗಂಡನ ಬಳಿಗೆ ಬಂದು,)

ಒಳಗೆ ಇರುವರು ನಮ್ಮ ಭಾವ. ಅವರೆತ್ತಲೋ
ಹೊರಟು ಹೋದರು ಎಂದು ಊರಿನಲಿ ಹೇಳಿದರೆ,
ತಲೆ ಮರೆಸಿಕೊಳ್ಳಲವರಿಲ್ಲಿ ಬಂದಿರಬೇಕು.
ಏನು, ಅಕ್ಕನ ಪುಣ್ಯ ಒಳ್ಳಿತಾಗಿಯೆ ಇಹುದೊ?
ಇಲ್ಲದಿರೆ, ಇವರಿಲ್ಲಿ ನನಗಿಂತು ದೊರೆಯುವರೆ?
ಅಕ್ಕನನು ಒಪ್ಪಿಕೊಂಬಿರ ಎಂದು ಇವರನು
ನಾನೀಗಲೇ ಕೇಳಿ ತಿಳಿಯುವೆನು. ಒಪ್ಪಿದರೆ
ಅವಳು ಬದುಕಿದಳು. ಒಪ್ಪರೆ ನಮ್ಮ ಹಣೆಬರಹ.
ಬೇಗನೆಯೆ ಹೋಗಿ ಅಕ್ಕನನು ಕರೆತನ್ನಿರಿ.
ಇವರೆತ್ತಲೂ ಹೋಗದಂತೆ ನಾನಿಲ್ಲಿಹೆನು.

(ಕುಮಾರ ಹೋಗಿ ಮಾಲತಿಯೊಂದಿಗೆ ಬರುತ್ತಾನೆ. ಮಂಜರಿ ತುಟಿಗೆ ಬೆರಳಿಟ್ಟು ಮೆಲ್ಲನೆ ಮಾತಾಡು ಎಂದು ಸನ್ನೆಮಾಡುತ್ತಾಳೆ.)

ಮಾಲತಿ.—ಅಣ್ಣನೆ?

ಮಂಜರಿ.— ಅಹುದು.

ಮಾಲತಿ.— ಈಗೇನ ಮಾಡುವೆ?

ಮಂಜರಿ.— ಅಕ್ಕ,

ನೀನು ನನ್ನರಸ ಇಬ್ಬರು ಇಲ್ಲೆ ನಿಂತಿರಿ.
ಗುಹೆಯ ಬಾಗಿಲ ಸೇರಿ ನಾನು ಬೆಳಕನು ಇನಿಸು
ತಡೆದು ಮರೆಯಾಗಿ ನಿಲ್ಲುವೆನು. ಅದ ಕಂಡವರು
ಭಾವ, ಯಾರಿದು ಎಂದು ನೋಡುವರು. ಕೈಮುಗಿದು
ನಾನವರ ಹೊರಗೆ ಬನ್ನಿರಿ ಎಂದು ಕರೆಯುವೆನು.
ಆವರಿಗಚ್ಚರಿ ಅಹುದೆ ದಿಟ. ಏನು ಸಂಗತಿ
ಎಂದವರು ಹೊರಗೆ ಬರೆ ಆಗ ನಾ ನಿನ್ನೊಡನೆ
ಇಲ್ಲಿ ನಿಲ್ಲುವೆನು. ನಮ್ಮರಿ ಮಾತು ಅದು ಎಂತು
ಬೆಳೆಯುವುದೊ ನೋಡುವ. ಸರಿಯಾಗಿ ಬೆಳೆಯಿತೇ
ಆಗ ನಾ ಸನ್ನೆ ಮಾಡುವೆನು. ಒಡನೆಯೆ ನೀನು
ಅವರ ಅಡಿಗೆರಗಿ, ತಪ್ಪೇನಿರಲಿ ಮನ್ನಿಸಿ
ನನ್ನ ಬಾಳಿಸಿ, ಎಂದು ಬೇಡು. ದೈವೇಚ್ಛೆಯಲಿ
ಏನಿಹುದು ನೋಡುವ.

ಮಾಲತಿ.— ನೋಡು ಮಂಜರಿ.

ಮಂಜರಿ.—(ಗುಹೆಯ ಬಾಗಿಲಿಗೆ ಹೋಗಿ ತಾನು ಹೇಳಿದಂತೆ ಮಾಡಿ ಕ್ಷಣ ಬಿಟ್ಟು,)

ಭಾವ !

ಕಾಳಿದಾಸ.—(ಗುಹೆಯಿಂದ ಹೊರಕ್ಕೆ ಬರುತ್ತಾ,)

ಭಾವ ! ಯಾರದು ನನ್ನ ಭಾವ ಎನ್ನುವ ತರುಣಿ ?

ಮಂಜರಿ.—(ಬಂದು ಅಕ್ಕನ ಪಕ್ಕದಲ್ಲಿ ನಿಂತು,)

ನಾನು, ಮಂಜರಿ. ನಿಮ್ಮ ರಾಣಿ ಈಕೆಯ ತಂಗಿ.

ಕಾಳಿದಾಸ.—ನನ್ನ ರಾಣಿಯ ತಂಗಿ ?

ಮಂಜರಿ.— ಅಹುದು. ನಿಮ್ಮನು ಅಂದು

ಕುರುಬ ಒರಟ ಎಂದು ಹೇಳಿದೆನೆ ಆ ತುಂಟಿ.

ಕಾಳಿದಾಸ.—ನೀನು ಆ ತಂಗಿ ದಿಟ ಎನಿಸುತಿದೆ. ಇವಳೆನ್ನ

ರಾಣಿ ಎಂತಹಳು ? ನಾನವಳ ಕೊಂದೆನು ಎಂದು

ಅವಳು ಬೆಂಕಿಯು ಹೊಕ್ಕು ತೀರಿಕೊಂಡಳು. ನನ್ನ
ಸ್ತ್ರೀಹತ್ಯ ಪಾತಕಕೆ ಗುರಿಮಾಡಿ ಹೋದಳು.

ಮಂಜರಿ.—ಬೆಂಕಿಯನು ಹೊಗಲಿಲ್ಲ. ಏತರದೆ ಪಾತಕಕೆ
ಈ ನಿಮ್ಮ ಗುರಿ ಮಾಡಲಿಲ್ಲ. ಸತ್ತಳು ಎನಲು
ನೀವು ಬರಬಹುದೆಂದು ಸಾವ ಸುಳ್ಳಿನ ಕಥೆಯ
ನಾನೆ ಹುಟ್ಟಿಸಿದೆನು. ಅಕ್ಕ ಜೀವಿಸಿ ಇಹಳು.
ಇಕೊ ಇಲ್ಲಿಯೇ ಇಹಳು. ನಿಮಗವಳು ಬೇಕೇ ?

(ಕ್ಷಣ ತಡೆದು ಅವಳ ಅರ್ಥವನ್ನು ಗ್ರಹಿಸಿ)

ಕಾಳಿದಾಸ.—ಸ್ತ್ರೀ ಹತ್ಯ ಪಾತಕವ ಕಟ್ಟಿಕೊಂಡೆನೆ ಎಂದು
ಭಯದೊಳದ್ದಿದ್ದೆನ್ನ ಅದರಿಂದ ಉದ್ಧರಿಸಿ
ಕಾಪಿಟ್ಟ ನೀ ನನ್ನ ಮನೆದೈವವೇ ಸತ್ಯ.
ನನ್ನ ಸತಿ ನನಗೆ ಬೇಕೇ ಕೇಳಲೇತಕೆ ?

(ಮಂಜರಿ ಅಕ್ಕನಿಗೆ ಸನ್ನೆ ಮಾಡುವಳು.)

ಮಾಲತಿ.—**(ಅವನ ಕಾಲ ಮೇಲೆ ಬಿದ್ದು,)**
ನನ್ನ ದೇವರೆ, ನಾನು ಯಾವ ಅಪರಾಧವನು
ಮಾಡಿದೆನೊ ನಾ ಕಾಣೆ. ಅದು ಏನು ಇದ್ದರೇನು
ಅದನು ಮರೆಯಿರಿ, ಮನ್ನಿಸಿರಿ. ನಿಮ್ಮ ದಾಸಿಯನು
ಒಪ್ಪಿಕೊಳ್ಳಿರಿ, ಪಾಲಿಸಿರಿ. ಬಿಡವೆ ಹಿಡಿದಿರಿ.

(ಎಂದು ಅಳುತ್ತಾಳೆ.)

ಕಾಳಿದಾಸ.—(ಅವಳನ್ನು ಎತ್ತಿ ಹಿಡಿದು,)
ನಿನ್ನಿಂದ ಏನೆ ಅಪರಾಧವೂ ಆಗಿಲ್ಲ.
ನಾನು ಮನ್ನಿಸಬೇಕು ಎಂಬ ಏನೇ ತಪ್ಪು
ನಿನ್ನಲಿನಿಸೂ ಇಲ್ಲ. ಎಲ್ಲ ಅಪರಾಧವೂ,
ಎಲ್ಲ ತಪ್ಪೂ, ನನ್ನವೇ ತೀರ ನನ್ನವೇ.
ನನ್ನ ಬುದ್ಧಿಯನಂದು ಅಂತು ತಿರುಗಿಸಿ ದೈವ
ನನ್ನೊಡನೆ ನಿನ್ನನೂ ಕಷ್ಟದಲಿ ಸಿಲುಕಿಸಿತು.
ಏಕೆ ಸಿಲುಕಿಸಿತೊ ಹೇಳುವುದೆಂತು ? ಸಿಲುಕಿಸಿತು.

ಆದರಿಂದ, ಒಳ್ಳಿತಕೆ ಇರಬೇಕು ಎಂಬೆನು.
ನಮ್ಮೂರ ಗಿರಿಯು ಆಶ್ರಮದ ಯಕ್ಷನ ರೀತಿ
ಇನಿತು ದಿನ ನಾ ಸತಿಯನಗಲಿ ಬಾಳಿದೆನಾಯ್ತು.
ಅಗಲಿಕೆಯ ದಿನ ಮುಗಿದು ದೈವ ನಮ್ಮನು ಈಗ
ಜೊತೆಯಾಗಿ ಬಾಳಿರಿ ಎಂದು ಬೆಸಸುತಲಿಹುದು.
ಅದರ ಆಣತಿಯಂತೆ ಜೊತೆಯಾಗಿ ಬಾಳುವ,
ಜೊತೆಯಾಗಿ ಅದರ ಸೇವೆಯ ಗೆಯ್ವ, ಬಾ ಮಡದಿ.

(ಎಂದು ಅವಳನ್ನು ಪಕ್ಕದಲ್ಲಿ ನಿಲ್ಲಿಸಿಕೊಳ್ಳುತ್ತಾನೆ. ಪ್ರಭು, ರಾಣಿ, ಅವರ ಕುಮಾರಿ ಮಾಧವಿ, ಅರಸ, ಋತ್ವಿಕ ಬರುತ್ತಾರೆ.)

ಪ್ರಭು.—(ಕಾಳಿದಾಸನನ್ನು ನೋಡಿ)
ಕಾಳಿದಾಸರು ಇಲ್ಲಿ? ಇವರ ಕಂಡರು ಯಾರು?

ಕುಮಾರ.—ನನ್ನರಸಿ ಪ್ರಭು.

ಪ್ರಭು.— ಎಂಥ ಜಾಣ ಹೆಣ್ಮಗಳೀಕೆ!
ಎಂತು ಆಯಿತು ಇದು? ಎಲ್ಲವನು ತಿಳಿಸಿರಿ.
(ಮಂಜರಿ ಇವರಿಗೆ ಎಲ್ಲವನ್ನೂ ತಿಳಿಸುತ್ತಾಳೆ. ಮಾಲತಿಗೆ)
ತಾಯಿ, ದೇವರು ನಿಮ್ಮ ದುಗುಡವನು ಕಳೆದಿಹರು.
ಕಾಳಿದಾಸರೆ, ತಾವು ರಾಮಗಿರಿಯರಸರು
ಎಂದು ನಾವರಿಯದಾದೆವು. ಈಗ ತಿಳಿಯಿತು.

(ಕಾಳಿದಾಸ ಅವನಿಗೆ ಕೈಮುಗಿಯುತ್ತಾನೆ.)

ಋತ್ವಿಕ.—ಇದೆ ವಿವರವನೆ, ಪ್ರಭು, ನಾನು ಸನ್ನಿಧಿಯಲ್ಲಿ
ಇನಿತರಲೆ ಬಿನ್ನವಿಸುವೆನೆಂದರಿಕೆ ಮಾಡಿದುದು.

ಪ್ರಭು.—(ರಾಣಿಗೆ) ತುಂಬ ಒಳ್ಳಿತು ಆಯ್ತು. ಬಹುಕಾಲ ಅಗಲಿದ್ದು
ಈಗ ಜೊತೆಗೂಡಿರುವ ದಂಪತಿಗಳಿಗೆ ನೀವು
ಏನ ಹೇಳುವಿರಿ?

ರಾಣಿ.— ಪತಿಯನು ಅರಸಿ ಬಂದವರು
ಪತಿಯ ಕಂಡರು, ಅವರ ಪಡೆದಿಹರು. ಇದು ಅವರ
ಭಾಗ್ಯ. ಇಂದಾರಂಭವಾಗಿರುವ ಈ ಭಾಗ್ಯ

ಇದನಿವರ ದೈವ ಇವರಿಗೆ ನಿತ್ಯ ನೀಡಿಸಲಿ
ಎಂದು ಬೇಡುವೆನು.

ಪ್ರಭು.— ತುಂಬ ಒಳ್ಳಿತು. ಮತ್ತೆ
ರಾಮಗಿರಿಯರಸುವರ ಎತ್ತಲೋ ಹೋಗಿರಲು
ಸೀಮೆಯಾಡಳಿತವನು ಸೇವಕ ಪ್ರಮುಖರು
ನೋಡಿಕೊಳ್ಳುತಲಿಹರು. ಈಗ ಕುವರರು ತಮ್ಮ
ಅರಸು ಪದವನು ಒಡನೆ ವಹಿಸಿಕೊಂಬುದು ಯುಕ್ತ.

ಕಾಳಿದಾಸ.—ಅಪ್ಪಣೆ, ಪ್ರಭು.

ಅರಸ.— ನಮ್ಮ ಮನೆಯುಳಿಯ ದೇವರನು
ಮತ್ತೆ ಕಂಡೆನೆ, ಇದು ನನಗೆ ಬಹು ಸಂತೋಷ.
ನನ್ನ ಕಿರಿತಂಗಿ ಚೆಲ್ಲಾಟದಲಿ ಮಾಡಿದ
ಅಪಚಾರ ಏನು ಅದು ಎಲ್ಲವನು ಮರೆಯಿರಿ.
ಬಾಂಧವ್ಯವನು ಮಾತ್ರ ನೆನೆಯಿರಿ.

ಕಾಳಿದಾಸ.— ಅಪಚಾರ
ನನ್ನಿಂದ ಬಹಳ ಆದುದ ತಾವು ಮರೆಯಿರಿ
ಎಂದು ನಾ ಬೇಡುವನು.

ಅರಸ.— ಅಪರಾಧ ಏನಾಯ್ತು
ಇಬ್ಬರೂ ಮರೆಯುವ. ದೈವ ಎಲ್ಲವ ಈಗ
ಚೆನ್ನಮಾಡಿತು. ಅದಕೆ ವಂದನೆಯ ಸಲಿಸುವ.

ಕಾಳಿದಾಸ.—ಸಲಿಸುವ, ಪ್ರಭು.

ಪ್ರಭು.— ಕಾಳಿದಾಸ ಕವಿಗಳೆ, ತಮ್ಮ
ಪರಿಚಯವ ಕಾಣದಿಹ ದಿನಗಳಲಿ, ಆಸ್ಥಾನ
ತಮಗೇನೆ ಅವಲೇಪಗೆಯ್ದಿರಲು ತಾವದನು
ಮರೆಯಬೇಕೆಂದೆನ್ನ ಪ್ರಾರ್ಥನೆ.

ಕಾಳಿದಾಸ.—(ಅವನ ಮಾತನ್ನು ತಡೆದು) ಪ್ರಭುವರರು
ಈ ಮಾತನೆತ್ತುವುದೆ ಬೇಡ. ಯಾರೂ ಅಲ್ಲ,
ಅಂಥ ನಾ, ಸನ್ನಿಧಾನದ ಆಶ್ರಯವ ಬೇಡಿ

ಬಂದೊಡನೆ ಈ ನನ್ನ ಕವಿಯೆಂದು ಒಪ್ಪಿದಿರಿ.
ಹಿರಿಯಕವಿ ಎಂದಿರಿ, ಕೃತಿಗಳನು ಮೆಚ್ಚಿದಿರಿ.
ಕವಿಸಾರ್ವಭೌಮ ಬಿರುದನು ಅನುಗ್ರಹಿಸಿದಿರಿ.
ಇದು ಏನು, ಬೇರೆ ಯಾರೂ ಇಸಿತು ಕೃಪೆಯಿಂದ
ನನ್ನ ಕಾಣಿರಿ ಎಂದು ತಮ್ಮ ಬೇಡಿರಲಿಲ್ಲ.
ಇಂತಪ್ಪ ಕೃಪೆಯಿಂದ ನನ್ನ ನಡೆಸಿದ ಪ್ರಭು
ಏನೆ ಅವಲೇಪವನು ಗೆಯ್ದಿದ್ದರೆಯು ತಮ್ಮ
ಆಶ್ರಯವ ಪಡೆದವನು ಅದ ಲೆಕ್ಕಿಸದೆ ಮರೆತು
ನನ್ನ ಪ್ರಭು ಎಂತಹ ಉದಾರ ಚೇತನರೆಂದು
ಭಕ್ತಿಭಾವದಲಿ ಸನ್ನಿಧಿಯ ಪೂಜಿಸಬೇಕು.
ಇಂತಿರುತ ಅವಲೇಪಲೇಶವೂ ಇಲ್ಲದೆ
ನನ್ನ ನಡೆಸಿದ ತಮಗೆ ನಾನು ಚಿರಋಣಿ. ನಾನು
ರಾಮುಗಿರಿಯರಗುವರನೆಂದು ಡಂಗುರ ಹೊಡೆಸಿ
ಕೃತಿಯ ತಮ್ಮೆಡೆ ತಂದು ತಾವು ಅದು ಒಳಿತೆಂದು
ಮೆಚ್ಚಿರಲು ದೇಶದೀ ಆರಸ ಸೀಮೆಯ ಅರಸ
ಹೊಗಳುತಿಹರೆಂದು ಜನ ಮೆಚ್ಚಿಕೆಯ ಬಣ್ಣವನು
ಇಳಿಗಳೆಯುತಿದ್ದರು. ಕವಿ ಬರಿಯ ಕವಿ, ಬೇರೆ
ಏತರದು ಅಲ್ಲಿಂದ ವೇಳೆ, ಮೆಚ್ಚಿದ ಮೆಚ್ಚು
ಷೋಡಶ ಕಲಾಪೂರ್ಣ ಎಂಬರೇ ಅಂತಹದು.
ಬಹಳ ನುಡಿದೆನು. ನನ್ನ ಮನ್ನಿಸಿರಿ.

ಪ್ರಭು.— ಒಳ್ಳಿತು.

ನಮ್ಮೆಲ್ಲರಿಗು ಇಂದು ತುಂಬು ಸಂತಸದ ದಿನ.
ಅರಸರಿಲ್ಲದೆ ದುಗುಡ ಪಡುತಿದ್ದ ರಾಮುಗಿರಿ
ಅರಸರನು ಪಡೆದಿಹುದು. ಎತ್ತಲೋ ಹೋಗಿದ್ದ
ಪತಿ ಬಂದು, ದುಃಖದಲಿ ಕರಗಿದ್ದ ಸತಿ ಇವರ
ಉಮ್ಮಳವನಳಿಸಿಹರು. ಕವಿ ಕಾಳಿದಾಸರು
ತುಂಬ ಬೇಸತ್ತು ಕಣ್ಮರೆಯಾದರೇ ಎಂದು

ಕಡವಳದೊಳಿಪ್ಪ ಮಗೆ ಅವಳೀಗ ನೊಂದಿಹಳು.
ಪತಿಯ ಕಾಣುವೆನೆಂದು ಅರಮನೆಗೆ ಬಂದ ಈ
ನಮ್ಮ ಸೋದರಿಯಾಸೆ, ಗಳಿಗೆ ಗ್ರಹಣಕ್ಕೆ ಸಿಕ್ಕಿ,
ಗಳಿಗೆ ಕಳೆದಿರೆ ಪೂರ್ಣವಾಗಿಹುದು. ಈ ನಾಲ್ಕು ...

ಮಾಲತಿ.—ಪ್ರಭು ಮಾವ ಅನುಮತಿಯ ನೀಡುವರೆ ಇನ್ನೊಂದು
ಸಂತಸದ ಸಂಗತಿಯನಿದಕೆ ಸೇರಿಸಬಹುದು.

ಪ್ರಭು.—ಹೇಳಿರಿ.

ಮಾಲತಿ.— ಪ್ರಭು ತಾವು, ನಮ್ಮತ್ತೆ ನಿಮ್ಮರಸಿ,
ಇವರು, ಈ ನಮ್ಮಣ್ಣ ತಮ್ಮ ಕಿರಿಕುವರಿಯನು
ಹಸೆನಿಲಲಿ ಎಂದು ಬಯಸಿದರೆಂದು ತಿಳಿದೆನು.
ತಂಗಿ ಉಮ್ಮಳದೊಳಿರೆ ತಮಗೆ ಮದುವೆಯೆ ಎಂದು
ಆಗ ನಮ್ಮಣ್ಣ ಸದ್ಯಕೆ ಒಲ್ಲೆ ಎಂದರು.
ದೊರೆ ರಾಣಿಯರ ಮನಸು ಈಗಲೂ ಅಂತೆ ಇರೆ....

ಪ್ರಭು.—ನಿಮ್ಮಣ್ಣ ಒಪ್ಪುವರೆ? ಹೆಣ್ಣಾಗ ಹೆತ್ತ ಜನ
ಒಲ್ಲೆನೆಂದೊಮ್ಮೆ ಎನ್ನಿಸಿಕೊಂಡು ಮತ್ತೊಮ್ಮೆ
ಆಸೆ ನುಡಿಯ ಕೇಳಲಿಚ್ಛಿಸುವೆವು.

ಮಾಲತಿ.— ಅದು ಸರಿ. (ಅಣ್ಣನಿಗೆ) ಅಣ್ಣ ....

ಅರಸ.—ಸಾಮಂತನಾದವನು ಬೇಡವೆನಲು ಸಾಧ್ಯ,
ನಿಮ್ಮ ಮಗಳನು ನಾನು ಮದುವೆಯಾಗುವೆನೆಂದು
ಹೇಳಲಾಪನೆ? ಹಿಂದೆ ಬಂದು ನಂಟಾದ ದಿನ
ಬಂದಿಹುದೆ, ಈಗ ಏನೆಂಬೆ, ಎಂಬಿರೆ ತಾವು....

ಪ್ರಭು.—ಅಂತು ಎಂಬೆವು. ಒಪ್ಪಿ ನಮ್ಮ ಸಂತಸಗೊಳಿಸಿ.

ಅರಸ.—ತಾವು ಬೆಸಸಿದ ರೀತಿ ತುಂಬು ಸಂತಸದಿಂದ
ನಡೆದುಕೊಂಬೆನು ನಾನು.

ಪ್ರಭು.— ಸಂತೋಷ.

ರಾಣಿ.— ಸಂತೋಷ.

ಮಾಲತಿ.—ನುನೆಂಯ ದೀಪನ ಹಚ್ಚಿಕೊಟ್ಟು ನಮಗುಪಕಾರ
ಮಾಡಿದಿರಿ ಮಾವ, ಅಕ್ಕ.

ಪ್ರಭು.— ಒಳ್ಳಿತು, ತಂಗಿ.
ದೈವಸನ್ನಿಧಿಯಲ್ಲಿ ಇಂತು ನಿಶ್ಚಯವಾದ
ಈ ಕ್ಷಣವೆ ಶುಭ ಲಗ್ನ. ನಿಶ್ಚಿತಾರ್ಥವ ನಮ್ಮ
ಗುರುಗಳಹ ಋತ್ವಿಕರು ಇಲ್ಲಿ ನೆರವೇರಿಸಲಿ.
ವಧು ವರನ ಜೊತೆಗೆ ನಿಲ್ಲಲಿ.

ರಾಣಿ.— ಮಾಧವೀ, ಮಗು.

(ಮಗು ಸಂಕೋಚಪಡುತ್ತಾ ನಗುತ್ತಾ ನಿಲ್ಲುತ್ತಾಳೆ.)

ಅರಸ.—ಅವರು ಬರುವುದು ಬೇಡ. ನಾ ಜೊತೆಗೆ ನಿಲ್ಲುವೆನು.

(ಎಂದು ಬಂದು ಅವಳ ಪಕ್ಕದಲ್ಲಿ ನಿಲ್ಲುತ್ತಾನೆ.)

ಋತ್ವಿಕ.—ಅದೆ ಚೆನ್ನ. ಎಲ್ಲರೂ ಸನ್ನಿಧಿಗೆ ನಡೆಯುವ.

ಪ್ರಭು.—ನಡೆಯುವ. ನಮ್ಮ ಸೋದರಿ ಬೆಸಸಿದಂದದಲಿ
ಸಂತಸದ ನಾಲ್ಕು ಸಂಗತಿ ಅವಕೆ ಐದನೆಯ
ಇದನು ಸೇರಿಸುವ. ಸೋದರಿ ಮಾಲತೀ ತಾಯಿ
ದೈವ ಸನ್ನಿಧಿಯಲ್ಲಿ ಸಂಗೀತ ಸೇವೆಯನು
ಸಲ್ಲಿಸುವೆನೆಂದು ವ್ರತ ತೊಟ್ಟರೇ, ಅದ ಮೆಚ್ಚಿ
ದೈವ ಇಂತೆಲ್ಲ ಶುಭದಿಂವೆಮ್ಮ ಸಲಹಿಹುದು.
ನಮ್ಮ ಸಿಪ್ರೆಯು ನೀಲಜಲ ತೊಳೆವ ಪಾದಗಳ
ಹಿರಿದೈವ ಕಾರುಣ್ಯ ಔದಾರ್ಯಗಳ ಅಬುಧಿ.
“ನೀ ನನ್ನ ಸೇವೆಯನು ಮಾಡಲೇಬೇಕೆಂದು
ನಾ ಹೇಳೆ. ಮಾಡುವೆನು ಎನ್ನು, ನನಗದೆ ಸಾಕು,”
ಎಂದು ಸದ್ಯಃಫಲವ ನೀಡಿದೆ ಮಹಾಕಾಳ.
ತಂಗಿ ನಿಮ್ಮುದ್ದೇಶದಂತೆ ವಾರದ ದಿವಸ
ಇಲ್ಲಿ ಸೇವೆಯ ಸಲಿಸಿ ವ್ರತವ ಮುಗಿಸಿರಿ. ನಾವು
ಅನಿತರಲಿ ನಗರದಲಿ, ರಾಮಗಿರಿಪುರಸರದು
ಪಟ್ಟಾಭಿಷೇಕ, ಅಗಲಿದ್ದ ನಿಮ್ಮಿಬ್ಬರ

ಸಂಯೋಗದುತ್ಸವ, ನಿಮ್ಮ ಸೋದರ ಪ್ರಭು
ನಮ್ಮ ಈ ಕುವರಿಯನು ವರಿಸಿರುವ ಸಂಭ್ರಮ.
ಇದನೆಲ್ಲ ನಡೆಸುವರೆ, ಹಿರಿಯರಪ್ಪಣೆ ಪಡೆದು
ಸನ್ನದ್ಧರಾಗುವೆವು. ಉತ್ಸವಗಳಾರಂಭ
ದೈವಸನ್ನಿಧಿಯಲ್ಲಿ ಇಲ್ಲೀಗ ನಡೆಯಲಿ.
ಅಪ್ಪಣೆಯೆ, ಋತ್ವಿಕರೆ ?

ಋತ್ವಿಕ.— ತೀರ ಯುಕ್ತ, ಪ್ರಭು.

ಕಾಳಿದಾಸ.—ನಮ್ಮ ಗುರುಮನೆಯ ಹಿರಿಯರು, ನನ್ನ ಗುರು, ನಿನ್ನೆ
ನಗರಿಗೈತಂದರು. ನನ್ನ ಕುರಿತಿಹ ಎಲ್ಲ
ಕಾರ್ಯಕೂ ಅವರ ಆಶೀರ್ವಾದ ಇರಲೆಂದು
ನನ್ನ ಕೋರಿಕೆ.

ಪ್ರಭು.— ಅಹುದು ಯುಕ್ತ. ಋತ್ವಿಕರೆ.

ಋತ್ವಿಕ.—ಆಯ್ತು ಪ್ರಭು. ಗುರು ಅವರು ನನಗೆ ಅಣ್ಣಂದಿರು.
ನಮ್ಮಲೇ ತಂಗಿಹರು.

ಪ್ರಭು.— ಅಂತೆ ? ಒಳ್ಳಿತು. ಈಗ
ಎಲ್ಲ ಬನ್ನಿರಿ. ದೈವಸನ್ನಿಧಿಯ ಸಾರುವ.
ನಮ್ಮೆಲ್ಲರಿಗು ಇನಿತು ತೀರದ ಈ ಬಹಳವಹ
ಸಂತಸವ ನೀಡಿರುವ ದೇವದೇವನಡಿಗೆರಗಿ,
ಇದುವರೆಗೆ ಇಂತೆಮ್ಮ ಪೊರೆದಿರುವ ತಾವೆಯೇ,
ಕರುಣಾಳು. ಬಹ ದಿನದಿ ಇಂತೆ ಎಮ್ಮನು ಪೊರೆ,
ಅಂತೆ ಲೋಕವನೆಲ್ಲ ಪೊರೆ, ಎಂದು ಬೇಡುವ.